TIGHT BINDING BOOK

TEXT PROBLEM
WITHIN THE
BOOK ONLY
TEXT FLY WITHIN
THE BOOK ONLY

UNIVERSAL LIBRARY
OU_198299
UNIVERSAL LIBRARY

# ಮುನ್ನುಡಿ.

ಈ ಲೇಖನಿಗೆ ದಯೆಯ ಅರಿವಿಲ್ಲ, ದಾಕ್ಷಿಣ್ಯದ ಗುರುತಿಲ್ಲ; ಸತ್ಯವೆಂದು ಕಂಡುದನ್ನು ಬಣ್ಣವಿಲ್ಲದೆ ಬಿಡಿಸಿ ಹೇಳುವ ಬಾಯಿ ಮಾತ್ರ ಉಂಟು. ಕಾದಂಬರಿಕಾರನ ಸಾಹಿತ್ಯಜಾಲದ ಅರಿವು ಇದಕ್ಕಿಲ್ಲ. ಜೇಡನ ಬಲೆಯನ್ನು ಇದು ಬೀಸುವುದಿಲ್ಲ; ಕಣ್ಮರೆಯಾಗಿ ನಿಂತು ಕತ್ತಲಲ್ಲಿ ಕೊಲ್ಲುವ ಘಾತುಕತನವಿಲ್ಲ. ಕೊಲ್ಲುವ ಮನವಾದರೆ, ಮುಚ್ಚುಮರೆಯಿಲ್ಲದೆ ಕೊಲ್ಲುವೆನೆಂದು ಬಿಚ್ಚಿ ಹೇಳಿ, ಸಾಯಲಿರುವ ದುರ್ದೈವಿಪ್ರಾಣಿಯ ಮುಂದೆ ನಗುನಗುತ್ತ ಕತ್ತಿಯೆನ್ನೆತ್ತಿ, ತರಕಾರಿಯನ್ನು ಎಷ್ಟು ನಿಶ್ಚಿಂತೆಯಿಂದ ಹೆಚ್ಚುವರೋ, ಆ ರೀತಿ ಕತ್ತರಿಸುವ ಸಾಹಸ ಮಾತ್ರವಿದೆ.

ಕಳ್ಳನಿಗೆ ಹಗಲಿನ ಅಂಜಿಕೆ ಉಂಟೆಂದು, ಅವನ ಮುಂದೆ ಹಗಲನ್ನು ರಾತ್ರಿಯೆಂದು ಕರೆಯಲು ಈ ಲೇಖನಿಗೆ ಬಾರದು. ಇದನ್ನು ಓಡಿಸುವುದು ಸತ್ಯದ ಶಾಯಿ. ಅದರ ಬಣ್ಣವು ಸಿಹಿಯಾದ ಸತ್ಯದ ಹಸುರಿನಂತಿರಬಹುದು, ಕ್ರೂರ ಸತ್ಯದ ಕೆಂಪಿನಿಂದಿರಬಹುದು, ಕಹಿಯಾದ ಸತ್ಯದ ಕಪ್ಪೂ ಇರಬಹುದು. ನಿಮಗೆ ಯಾವ ಬಣ್ಣ ಇಷ್ಟವಿದೆಯೋ ಆ ಬಣ್ಣದ ಶಾಯಿಯಿಂದ ಸಹ ಇದು ಬರೆಯದು. ಸತ್ಯದ ಸಿಹಿ, ಕಹಿ, ಕಠೋರ ರೂಪಗಳಿಗೆ ಸರಿಯಾಗಿ ಅದರ ಬಣ್ಣವು ಕಾಗದ

ಮೇಲೆ ಬೀಳುವುದು. ಕಾಗದವು ಬಿಳಿದೆಂದು ತಿಳಿದು ಕಣ್ಮುಚ್ಚಿ ತಿಳಿದಿರುವ ಜನರಿಗೆ ಬಿಳಿದೆಂದು ಕಾಣುವ ಅದರಲ್ಲಿ ಸಪ್ತ ವರ್ಣಗಳಿವೆ—ಸುಮ್ಮನೆ ಬಿಳಿದನ್ನು ಕಂಡು, 'ಭಾಪು ಎನ್ನಬೇಡಿರಿ – ಎನ್ನುವುದು. ಅದನ್ನು ನಂಬಲಾರದವರಿಗಾಗಿ, ಅಥವಾ ನಂಬಲಿಷ್ಟ ಪಡದವರಿಗಾಗಿ—ಅವರಿಗೆ ಕಾಣಿಸದ ಒಂದೊಂದು ಬಣ್ಣವನ್ನು ಅವರ ಕಣ್ಣು ಕುಕ್ಕುವಂತೆ ಚೆಲ್ಲಿ ನಡೆಯುವುದೇ ಈ ಲೇಖನಿಯ ಹವ್ಯಾಸ. ಅಂಥ ಲೇಖನಿಯನ್ನು ಏನೆಂದು ಕರೆಯುವಿರೋ ಕರೆಯಿರಿ. ನಿಮ್ಮ ಬೈದು ಬಿರುದುಗಳೆರಡೂ ಅದಕ್ಕೆ ಸರಿಯೇ,

## ೧. “ಅಯ್ಯೋ, ಇದೇನಪಶಕುನವೇ?”

ನೀವು ಮದುವೆಯ ಮನೆಯನ್ನು ಕಾಣದವರಲ್ಲ. ಮದುವೆಯನ್ನು ಹೋಲಿಸಬೇಕು ಮದುವೆಗೇ. ನಮ್ಮ ಸಮಾಜದಲ್ಲಿ ಅದಕ್ಕೂ ಮಿಗಿಲೆನಿಸಿದ ಜಾತ್ರೆಯಿಲ್ಲ. ಜಾತ್ರೆನೆರೆಯುವುದು ನಾಲ್ಕೇ ದಿನಗಳ ವರೆಗೆ; ಆದರೆ ಆದರ ಬಾಲ ಹಿಂದುಮುಂದೆಲ್ಲಾ ಇರುವುದು. ಹನುಮಂತನ ಬಾಲದಷ್ಟು ಉದ್ದ, ಮದುವೆಯ ಬಾಲ. ಈ ಎಲ್ಲ ಉತ್ಸವದ ದಿನಗಳಲ್ಲಿ ಆಸೆ, ಉತ್ಸಾಹ, ಆನಂದ, ಅವಸರ, ಆದರ, ಆತಿಥ್ಯ, ಉಪಚಾರ, . . . . ಇವುಗಳನ್ನು ಕೊಂಡಷ್ಟು, ಕೊಟ್ಟಷ್ಟು ಮಿತಿಯಿಲ್ಲ. ಮದುವೆಯ ನೆನಪಾದರೆ ಬಡವರು ದೊಡ್ಡವರಾಗುವರು, ಮುದುಕರು ತರುಣರಾಗುವರು, ಮುದುಕಿಯರು ಯೌವನೆಯರಾಗುವರು, ವಧೂವರರ ತಂದೆತಾಯಿಗಳು ದಾನಧರ್ಮಗಳಲ್ಲಿ ದಧೀಚಿಯರೇ ಆಗುವರು. ಸ್ವತಃ ವಧೂವರರು ಏನಾಗುವರೋ ನೀವೇ ಊಹಿಸಿರಿ. ನೂರು ಆಯುವಿಲ್ಲದ ಹಿರಿಯರು ನಾನ್ನೂರರ ಸಾಲಕ್ಕೆ ಸಿದ್ಧರಾಗುವರು. ಆದರೆ ಹೀಗಾದವರಲ್ಲಿ ಒಬ್ಬಳೇ ಒಬ್ಬಳು ನಮ್ಮ— ಮಾಲತಿ.

ಮಾಲತಿಗಿಂದು ಹದಿನಾರು ವಯಸ್ಸು, ತುಂಬಿದ ಯೌವನೆ. ಅವಳ ಒಬ್ಬನೇ ಒಬ್ಬ ಅಣ್ಣನಿಗಿಂದು ಮ—ದು—ವೆ. ಬಾಯಿಹಿಡಿದಷ್ಟು ದೊಡ್ಡ ಶಬ್ದ. ಅಣ್ಣನೆಂದರೆ ನಮ್ಮ ಮಹೇಶ. ಅವನ ಮನೆಯಲ್ಲೇ

ಅವನಿಗೆ ಮದುವೆ. ಅವನಿಗೇನು! ಶ್ರೀಮಂತರ ಮನೆಯ ಹುಡುಗ. ಬೇಡಿ ಬೇಡಿ ಹೆಣ್ಣು ಕೊಡುವವರೆಷ್ಟು ಮಂದಿ ಬೇಕು. ಅದಕ್ಕಾಗಿಯೇ ಇಂದು ತಾರೆಯನ್ನು ಅವನ ಕಾಲುಬುಡಕ್ಕೆ ತಂದು ಧಾರೆಯೆರೆಯಲು ಅವಳ ತಂದೆತಾಯಿಗಳು ಸಿದ್ಧರಾಗಿರುವರು. ತಾರೆಯ ತಂದೆತಾಯಿಗಳು ದರಿದ್ರರಲ್ಲ; ಸಾಕಷ್ಟು ಐಶ್ವರ್ಯವಿದೆ ಕುಳಿತು ಉಣ್ಣುವಷ್ಟು ಸಂಪತ್ತಿದೆ. ಅಷ್ಟೆ ಅಲ್ಲ, ತಂದೆತಾಯಿಗಳಿಗೆ ಸಂತತಿಯೆಂದರೆ ಒಬ್ಬಳೇ ತಾರೆ! ಆದರೂ ಮಹೇಶನ ತಂದೆ ಯೋಗಂಧನನ್ನು ಹರುಷಗೊಳಿಸಲು ಅವರು ಅಲ್ಲಿಯತನಕ ಹುಡುಗಿಯನ್ನು ಕರತಂದು ಧಾರೆಯೆರೆಯಲು ಸಿದ್ಧರಾಗಿರುವರು. ಯೋಗಂಧನು ಶ್ರೀಮಂತ; ಆ ಊರಿಗೆ ಕುಬೇರನಂಥ ಶ್ರೀಮಂತ. ದಿನದೂಟಕ್ಕೆ ತಿರುಪಕ್ಕೆ ಹೋಗುವವರೂ ಸಹ ಮನೆಮದುವೆ ಬಂದಿತೆಂದರೆ ಸಾಲಮಾಡಿಯಾದರೂ ಜರತಾರಿ ಉಟ್ಟು ಮೆರೆಯುವಾಗ ಯೋಗಂಧನು ಹೇಗಿರಬೇಕು? ಅವನ ಮೈತುಂಬ ಜರಿ; ಮಗನ ಮೈತುಂಬ ಚಿನ್ನ, ಸೊಸೆಯ ಮೈತುಂಬ ರತ್ನಗಳೇ. ಇನ್ನು ಮದುವೆಯೆಂದರೆ-ಮಂಟಪ ಹೇಗಿರಬೇಕು? ಓಲಗ ಹೇಗಿರಬೇಕು? ವಾದ್ಯ ನೈವೇದ್ಯಗಳು ಹೇಗಿರಬೇಕು—ಇವನ್ನೆಲ್ಲಾ ಬಿಡಿಸಿ ಹೇಳಬೇಕೇ? ನೀವಷ್ಟು ತಿಳಿಯದವರೇನು? ಅಡುಗೆಮನೆಯ ಪರಿಮಳವು ದೇವತೆಗಳ ಬಾಯಿಯಿಂದ ನೀರುತರಿಸಬೇಕು. ಸುಳ್ಳೆನ್ನುವಿರಾದರೆ-ಯೋಗಂಧನ

ಮನೆಹಿತ್ತಿಲಿನ ಸುತ್ತ ಸೇರಿದ ಆ ದ್ವಿಪಾದ ಚತುಷ್ಪಾದ ಪ್ರಾಣಿಗಳನ್ನು ಕೇಳಬಾರದೇ? ತಪ್ಪಿ ಉಳಿದದ್ದನ್ನಿದಿರು ಕಾಯುಲು ಕಡಿಮೆ ಕಡಿಮೆ ನಾನ್ನೂರು ಹೊಲೆಯರು, ಅದರಿಮ್ಮಡಿ ಶುನಕರು, ಜತೆಯಲ್ಲಿಯೇ ಮೈತ್ರಿಯಿಂದ ನೆರೆದಿದ್ದರು. ಆ ನಾನ್ನೂರು ಮಂದಿಗೆ, ತಮ್ಮನ್ನು–ಬಿಳಿ ನೆರೆದ ಉಳಿದವರಂತೆ, ಮದುವೆ ಚಪ್ಪರದೊಳಗಿನವರು ಕಾಣುವರೆಂಬ ತಿಳಿವು—ಆ ಆನಂದದ ಗಳಿಗೆಯಲ್ಲಿ ಅಥವ ಅಜ್ಞಾನದ ಗಳಿಗೆಯಲ್ಲಿ ಹೇಗೆ ಉಂಟಾಗಬೇಕು? ಇವರಿಗೆ ಬಾರದ ಯೋಚನೆಯು, ಆ ಯಾವತ್ತು ಪ್ರಾಣಿ ಸಮೂಹದಲ್ಲಿ ಒಂದೇ ಒಂದು ಹೃದಯಕ್ಕುಂಟಾಗಿದೆ. ಅದೇ—ಮಾಲತಿಯ ಒಡಲು.

ಅವಳು, ಮದುವೆಯ ಸ್ಮರಣೆ ಸಹ ಇಲ್ಲದವಳಂತೆ ಮನೆಮುಹಡಿಯಲ್ಲಿ ನಿಂತುಕೊಂಡು ಪಶ್ಚಿಮ ದಿಗಂತವನ್ನು ಇಣಿಕಿನೋಡುತ್ತಿರುವಳು. ಅವಳ ದೃಷ್ಟಿಗೆ ಈ ದ್ವಿಪಾದ ಚತುಷ್ಪಾದವೃಂದವು ಬಿತ್ತು. ನೋಡುತ್ತ ನೋಡುತ್ತ ಅವಳ ಕಣ್ಣುಗಳಿಂದ ನೀರು ಹೊರಟಿತು. ಹೊಂಬಣ್ಣದ ದಿಗಂತದಲ್ಲಿ ಸೂರ್ಯನು ಮುಣುಗುತ್ತಿದ್ದನು. ಗೋಧೂಳಿ ಸಮಯ. ಆದರೆ ಗೋಧೂಳಿಯಿಲ್ಲ. ಕಾರಣ ಆ ದಿನ ಊರ ದನ ಕಾಯುವ ಬಾಲಕರೆಲ್ಲ – ಮದುವೆಯ ನೋಟನೋಡಲು ಬಂದಿದ್ದರು. ಚಪ್ಪರದಿಂದ—“ಸುಲಗ್ನ ಸಾವಧಾನ” ಎಂಬ ಮಂತ್ರಘೋಷವು ಮೇಲಕ್ಕೇರಿ ಗಗನ ಮಂಡಲವನ್ನು ಚುಂಬಿಸಲು ಸೇರುತ್ತಿದೆ. ಮಾಲತಿ

ಯುನ್ನುವಳು – “ಈ ಕೆಂಬಂಣವು ನಾಶವಾಗುವಂತೆ, ಈ ಸುಲಿಗ್ನ ಸಾವಧಾನದ ಸ್ವರವೂ ಮುಗಿಯುವುದಿಲ್ಲವೇ? ಸ್ವರವಳಿಯಲು ಅದಕ್ಕೆ ಕಾರಣವಾದ ಸುಖವು ಶಾಶ್ವತವೇ” – ಎಂದು. ಈ ಯೋಚನೆಯೊಡನೆ ಅವಳ ಕಣ್ಣುಗಳು ಕೆಂಪಡರಿದುವು. ಆವೇಷಕ್ಕೆ ಮಿತಿಯಿಲ್ಲದಾಯಿತು. ಇದು ವರೆಗೆ ಸಂತಸದ ರಾಜ್ಯದಲ್ಲಿದ್ದು ಸಿಟ್ಟೇನೆಂದರಿಯದ ಬಾಲಿಕೆಯು – ‘ನನ್ನಂತೆ ಇವರಾದರೆ’ – ಎಂದು ಶಪಿಸಿದಳು. ಎಂತಹ ಕ್ರೂರ ಶಾಪ! “ನನ್ನಂತೆ ಇವರಾದರೆ”–? ಆದರೇನು? ಹಾಗಾದರೆ ಈ ಮಂತ್ರವು ಹೊರಡುವುದಿದೆಯೇ? ಈ ಗದ್ದಲವು ಕೇಳಿಸುವುದಿದೆಯೇ? ಅವಳ ಕಣ್ಣೆದುರಿನಲ್ಲಿ ಸಾಲುಸಾಲಾಗಿ ಕುಳಿತ ಆ ಹೊಲೆಯರ ಮಕ್ಕಳು ಅಲ್ಲಿ ಸೇರುವುದಿದ್ದೆಯೇ?

ಮಾಲತಿಯು ವಿಧವೆ; ಬಾಲವಿಧವೆ. ಅವಳಂತೆ ಇವರಾದರೆ ಏನಾಗುವುದೆಂದು ಈಗ ಹೇಳಿರಿ. ಇನ್ನೂ ಅವಳು ಅದೇ ಶಾಪವನ್ನು ಕೊಡುತ್ತಿರುವಳು. ತನ್ನ ಮಾತಿನ ಅರ್ಥವೇನೆಂದು ಅರಿವಿದೆಯೋ ಇಲ್ಲವೋ – ಅಂತು ಒಡಲೊಳಗಿಂದ ಅದೇ ವಿಷಮಯ ಚಿಲುಮೆಯು ಚಿಮ್ಮುತ್ತಿದೆ. ಅವಳಿಂದು–ತಂದೆ, ತಾಯಿ, ಅಣ್ಣ, ನಾದಿನಿ, ನಂಟರು, ಇಷ್ಟರು – ಎಲ್ಲರ ಮೇಲೂ ತನ್ನ ಹೃದಯ ಜ್ವಾಲಾಮುಖಿಯಿಂದ ಭೀಷಣ ಶಾಪದ ಕಾದ ರಸವನ್ನು ಸೂಸುತ್ತಿರುವಳು. ‘ನನ್ನಂತೆ ಇವರಾದರೆ’ – ಎಂದೂ, ‘ಆಗಲಿ’ – ಎಂದು. ಅವಳ ಈ

ಅಂತರಂಗವು ಇತರರಾರ್ರಿಗಾದರೂ ತಿಳಿದು ಬಂದರೆ ಅವರು ಇವಳನ್ನು ಒಮ್ಮೆಗೆ ಶೂಲಕ್ಕೇರಿಸುತ್ತಿದ್ದರೋ ಏನೋ. ಆದರೂ ಅವಳಿಗೆ ಮಾತ್ರ ಆ ಅಂಜಿಕೆಯಿಲ್ಲ. ಅವಳೀಗ ಅಂತರಂಗದಲ್ಲಿ ಉರಿಯುತ್ತಿರುವ ಜ್ವಾಲೆ. ತಾನೂ ಉರಿಯುವುದು, ಪರರನ್ನೂ ಉರಿಸುವುದು. ಆದರೂ ಮಾಲತಿಯು ಒಳ್ಳೇ ಹುಡುಗಿ ತೀರ ಒಳ್ಳೆಯ ಹುಡುಗಿ — ಹೀಗೆಂದು ಅವಳ ಹುಟ್ಟಿನಿಂದ ಹಿಡಿದು ಸಾವಿನ ತನಕ ನಾವನ್ನುವವರು. ಅವಳ ಬಾಯಿಯಿಂದ ಬರುವ ಈ ಶಾಪವು, ಅವಳ ಸೃಷ್ಟಿಯಲ್ಲ. ಆ ಶಾಪದಿಂದ ಅವಳು ಊರನ್ನುರಿಸಲೆಂದು ನೀವೇ ಅವಳ ಕೈಯಲ್ಲಿ ಈ ಉರಿವ ದೀವಟಿಗೆಯನ್ನು ಕೊಟ್ಟಿರುವಿರಿ. ಹನುಮಂತನ ಬಾಲಕ್ಕೆ ಲಂಕಾವಾಸಿಗಳೇ ಬೆಂಕಿ ಕೊಟ್ಟಂತೆ! ನೀವೆಂದರೆ ನೀವಲ್ಲ — ನಿಮ್ಮ ಸಮಾಜವು. ಆದರೆ ನೀವಿಲ್ಲದೆ ನಿಮ್ಮ ಸಮಾಜವಾಗುವುದೋ ಎಂದು ನೀವೇ ಯೋಚಿಸಿರಿ. — ಅದೇ ಮಾತನ್ನು ಮಾಲತಿಯು ಒಂದು ದಿನ ತನ್ನ ತಂದೆಗೆ ಹೇಳಿರುವಳು ಮುಂದೆಯೂ ಹೇಳಬಹುದು.

ತಾನು ವಿಧವೆ, ತನಗೆ ತನ್ನ ಸುಖವಿಲ್ಲ, ಪರರ ಸುಖದಲ್ಲಿ ಭಾಗಿಯಾಗುವ ಋಣವಿಲ್ಲ— ಎಂಬೀ ದುಃಖವೇ ಅವಳ ತಾಪಕ್ಕೆ ಕಾರಣವಾಯಿತು. ಅವಳದಕ್ಕಾಗಿ ತನ್ನ ಶಾಪವನ್ನು ಕೊಟ್ಟು ಕೊಟ್ಟು ಬೇಸತ್ತು ಮೂರ್ಛೆಗೊಂಡಳು. ಅವಳ ಮುಖವು ಮಸಣಯಾತ್ರಿಕನ ಮುಖದಂತೆ ಬೆಂದು ಬೆಂಡಾಗಿದೆ ಕತ್ತಲೆಯಲ್ಲಿ

ಕಂಡಷ್ಟು ಅಕ್ಷರಗಳು ಅದರಲ್ಲೂ ಕಾಣಲು ಬರಬಹುದು ಆದರೆ ನಿದ್ರೆಯಲ್ಲೂ,-ಅದು ನಿದ್ರೆಯೆ?- ಅದರಲ್ಲೂ ಅವಳ ಎದೆಯಿಂದ ಕಾಳಸರ್ಪವೊಂದು ಬುಸುಗುಟ್ಟುವ ಸದ್ದು ಕೇಳಿಸುತ್ತದೆ.

ರಾತ್ರಿಯೆಲ್ಲಾ ಹಾಗೇ ಸಂದಿತು. ಮಾಲತಿಯ ವಿಚಾರವನ್ನು ಯಾರೊಬ್ಬರೂ ಕೇಳಲಿಲ್ಲ. ಅವಳನ್ನು ದಿನನಿತ್ಯ ಊಟಕ್ಕೆ ಕರೆಯುವ ಅವಳ ತಾಯಿಗೂ ಸಹ ಆ ನೆನಪಾಗಲಿಲ್ಲ ಪ್ರತಿಯೊಬ್ಬರ ತಲೆಯಲ್ಲಿಯೂ ಮದುವೆ, ಮದುವೆಯೂಟ, ಮದುವೆಯುಬ್ಬರಗಳೇ ತುಂಬಿದ್ದುವು. ಯೋಗಂಧನ ತಲೆಯಲ್ಲಿ ಕೇವಲ ಮಗನ ಚಿತ್ರವೇ ಅಲ್ಲದೆ ಇನ್ನೇನಿಲ್ಲ. ಆವನ ಪತ್ನಿಯನ್ನವನು "ಚಿನ್ನದಂಥ ಸೊಸೆ"ಯೆಂದು ತಿಳಿದನು. ಮಾಲತಿಯು ಚಿನ್ನವೂ ಅಲ್ಲವೂ ಅಲ್ಲ, ಹೆಚ್ಚೇನು ಕಬ್ಬಿಣವೂ ಅಲ್ಲ. ಕೇವಲ ಕಸ; ಕಾಲಕಸ. ಉಳಿದ ದಿನಗಳಲ್ಲಲ್ಲದಿದ್ದರೂ ಮದುವೆಯ ದಿನದವುಟ್ಟಿಗೆ ಅವಳ ತಾಯಿತಂದೆಗಳ ಪಾಲಿಗೂ ಕಾಲಕಸವೇ!

ಮದುವೆಯ ಮರುದಿನ ಸೂರ್ಯನು ಎಂದಿನಂತೆ ಉದಯಿಸಿದನು, ಆದರೆ ಮಾಲತಿಯ ಪಾಲಿಗೆ ಇನ್ನೂ ರಾತ್ರಿ ಮುಗಿದಿರಲಿಲ್ಲ. ಅವಳು ಮಲಗಿದ್ದ ಸೆರೆಕೊಠಡಿಯಲ್ಲಿಯೇ ತಾರೆಯು ಮಲಗಿದ್ದಳು ಏಕೋ ಅವಳಿಗೆ ನಾದಿನಿಯ ನೆನಪಾಯಿತು. ಈ ನೆನಪಿನೊಂದಿಗೆ ರಾತ್ರಿಯೆಲ್ಲಾ ಅವಳು ತನ್ನ ಕಣ್ಣಿಗೆ ಬೀಳದಿದ್ದುದೂ ನೆನಪಾಯಿತು. ಅವಳ ಹಣೆಯಲ್ಲಿಷ್ಟು ಕುಂಕುಮವಿದ್ದರೆ,

ಅವಳು ಆ ದಿನ ಮಂಟಪದೆದುರಿಗೆ ಬಂದು ಮೆರೆಯುತ್ತಿದ್ದಳೆಂಬುದೂ ನೆನಪಾಯಿತು. ಎಲ್ಲ ನೆನಪುಗಳನ್ನು ಅವಳು ಒಯ್ದು, ಮಾಲತಿಯು ಕೊಠಡಿಗೆ ಬಂದಳು. ಕಿಟಕಿಯಿಂದ ಸೂರ್ಯರಶ್ಮಿಯು ಅವಳ ಮೋರೆಯನ್ನು ಬೆಳಗುತ್ತಿತ್ತು. ಆ ಬೆಳಕಿನಲ್ಲಿ ಅವಳ ಹಣೆಯ ಮೇಲೆ ಕುಂಕುಮದ ತಿಲಕವಿದ್ದುದನ್ನು ಕಂಡಳು. ತಾರೆಯ ಬಳಿಯಲ್ಲಿ ಕುಂಕುಮ ಕರಡಿಗೆಯೂ ಇತ್ತು. ಅವಳ ಎದೆ ಜಗ್ಗೆಂದಿತು. ವಿಧವೆಯ ಹಣೆಯಮೇಲೆ—ಕುಂಕುಮ! ಅದನ್ನು ದಿಟ್ಟಿಸಿ ನೋಡತೊಡಗಿದಳು. ಅವಳ ದೃಷ್ಟಿಯು ದೂರ್ವಾಸನ ದೃಷ್ಟಿಯಾಗಿದ್ದರೆ; ಅಲ್ಲೇ ಮಾಲತಿಯ ಭಸ್ಮರಾಶಿಯು ಕಾಣಿಸುತ್ತಿತ್ತು. ಮರುಕ್ಷಣದಲ್ಲಿ ತಾರೆಗೆ ಮಾಲತಿಯ ತೊಯ್ದ ಕಪೋಲಗಳು ಕಾಣಿಸಿದುವು, ತೋಯ್ದ ನೆಲ; ಕಣ್ಣೀರಿನಿಂದ ತೋಯ್ದ ನೆಲ; ಅದರಿಂದಲೇ ತೋಯ್ದ ಸೀರೆಯ ಸೆರಗು; ಕೆದರಿದ ಕೇಶರಾಶಿ. ಅವಳ ಮೈಮೇಲೆ ಈ ಮುಖಕ್ಕೆ ಶೋಭಿಸದ ಜರತಾರಿ ಸೀರೆಯಿತ್ತು. ಅದು ಅವಳು ತನ್ನ ಮದುವೆಯ ದಿನ ಉಟ್ಟ ಸೀರೆ, ಮಾವನ ಮನೆಯವರು ಕೊಟ್ಟ ಸೀರೆ ತಾರೆಗೆ ಏನೇನೋ ಅನಿಸಿತು ಅವಳು ತನಗೇ ತಿಳಿಯದಂತೆ—ಕದವನ್ನಿಕ್ಕಿ ಮಾಲತಿಯ ಈ ಉನ್ಮತ್ತ ಕ್ರಿಯೆಯನ್ನು ಯಾರೂ ಕಾಣದಂತೆ ಮಾಡಿದಳು. ಪ್ರಥಮ ದರುಶನದಿಂದ ಕೆಂಪಡರಿದ ಅವಳ ಕಣ್ಣುಗಳಲ್ಲಿ ಕೋಪದ ಬದಲು ಶೋಕವು ಉಕ್ಕೇರತೊಡಗಿತು ಹಿಂದಿನ ದಿನದ ಘಟನೆಗಳೊಂದೊಂದಾಗಿ

ಅವಳ ಸ್ಮರಣೆಗೆ ಬರತೊಡಗಿದುವು. ಪುರೋಹಿತರ ಬಾಯಿಯಿಂದ ಹೊರಟ ಆ ಮಾತು "ಅಯ್ಯೋ, ಇದೇನಪಶಕುನವೇ!" ಎಂಬುದರ ನೆನಪಾಯಿತು ಆ ದಿನ ಬೆಳಗ್ಗೆ ಚಪ್ಪರವನ್ನು ಸೇರಿದ ಪುರೋಹಿತರ ಕಣ್ಣಿಗೆ ಮೊದಲು ಗೋಚರಿಸಿದವಳು ಮಾಲತಿ. ವಿಧವೆ! ತಾರೆಗೆ ಅತ್ತೆಯು ಹೂವುಡಿಸುವಾಗ ಅವಳು ತನಗೂ ಹೂ ಬೇಕೆಂದು ಬೇಡಲು ತಾಯಿಯು ತೋರಿದ ಔದಾಸೀನ್ಯ, ಮಾಲತಿಯು ಕೋಪದಿಂದ ಬಂದು ತಾರೆಯು ಹಣೆಯಿಂದ ಅವಳ ತಿಲಕವನ್ನೊರಸಿದ ಚಿತ್ರ—ಒಂದೊಂದಾಗಿ ನೆನಪಿಗೆ ಬಂದುವು. ಈ ಉದ್ಧಟತನವನ್ನು ಕಂಡು ಅವಳ ತಾಯಿತಂದೆಗಳು ಅವಳಿಗೆ ಮಾಡಿದ ಸಹಸ್ರನಾಮದ ನೆನಪೂ ಆಯಿತು. ತಾರೆಯು ಒಡಲಲ್ಲಿ ಈ ಒಂದೊಂದು ಕಲ್ಪನೆಗಳು ಒಂದೊಂದು ಅಂಬಿನಂತೆ ನಾಟಕೊಂಡುವು. ಅವಳಿಗೂ "ನನಗೂ ಹೀಗಾದರೆ—" ಎಂಬ ಕಲ್ಪನೆಯಾಗಿ, ಮಾಲತಿಯನ್ನು ಕಂಡು ಅವಳು ತುಂಬಾ ಅತ್ತಳು ತನ್ನ ವಿವಾಹ ಉತ್ಸವವು ಮಾಲತಿಯ ವ್ಯಥೆಗೆ ಕಾರಣವಾಯಿತೆಂದು ಉನ್ಮತ್ತಳಾಗಿ ಅವಳಿಗಾಗಿ ತನ್ನ ಕುಂಕುಮವನ್ನು ಅಳಿಸಿಕೊಂಬವಳಂತೆ ಅಳಿಸಿಕೊಂಡಳು. ಅಷ್ಟಕ್ಕೂ ಅವಳ ದುಃಖ ತಡೆಯಲಿಲ್ಲ; ಕೇವಲ ಪರವಶಳಂತೆ—"ಅತ್ತಿಗೆ" ಎಂದು ಮಾಲತಿಯ ಕೊರಳನ್ನು ತಬ್ಬಿಕೊಂಡು ಅತ್ತಳು. ಆಗ ಮಾಲತಿಗೆ ಬೆಳಗಾಯಿತು. ಅವಳಗೇನೊಂದೂ ಪ್ರಥಮಬಾರಿಗೆ ಕಾಣಿಸಲಿಲ್ಲ. ತಾರೆಯನ್ನೇ ನೋಡಿ

ದಳು. ಅವಳು ತಾರೆಯೆಂದೂ ಸಹ ಕಾಣಿಸಲಿಲ್ಲ. ತನ್ನನ್ನಣಕಿಸಲು ಸಧವೆಯೊಬ್ಬಳು ಬಂದಿರುವಳೆಂದು ತೋರಿತು. ತಾರೆಯ ಹಣೆಯುಮೇಲಿನ ಕುಂಕುಮ ವನ್ನು ಅವಳೇ ಅಳಿಸಿಕೊಂಡಿದ್ದರೂ ತಾನೊಮ್ಮೆ ಅಳಿಸುವೆ ನೆಂದು—ಅವಳ ಹಣೆಯನ್ನ ಒರಸಿದಳು. ಅಳಿಸಿದ ಕುಂಕುಮವು ತನ್ನ ಕೈಗೆ ಹಿಡಿದುದನ್ನು ಕಂಡು ಹಿಗ್ಗುವ ಇಚ್ಛೆಯಾಯಿತು. ಆವರೆ—ಬರೇ ಕೈಯನ್ನು ಕಾಣು ತ್ತಾಳೆ!

ತಾರೆಗೆ ಅವಳ ಈ ಅವಸ್ಥೆಯನ್ನು ಕಂಡು ಅದೇ ಅವಸ್ಥೆಯಲ್ಲಿ ತಾನೂ ಇರುವೆನೆಂಬ ತಿಳಿವಾಯಿತು. ಆದರೇನು ಮಾಡಲಿ ಎಂಬ ಭೀತಿಯಾಯಿತು. ಆ ದುಃಖದಲ್ಲೂ ಗೆಳತಿಯನ್ನುಪಚರಿಸುವುದು ತನ್ನ ಕರ್ತವ್ಯವೆಂದು "ಅಕ್ಕಾ ಮಾಲತಿ" ಎಂದಳು. ಮುಂದೆ ಶಬ್ದಗಳು ಹೊರಡುವಷ್ಟರಲ್ಲಿ— ಮಾಲತಿಯು ವಾಕ್ಛಂಚಲೆಯು ಅವಳ ಹಣೆಗೆ ಬಡಿದಳು. "ನೀನೂ ನನ್ನಂತೆ . . . ." ಎಂದು. ತಾರೆಯು ಅದಕ್ಕೆ— "ಇಲ್ಲ, ನೀನು ಅಳಿಸುವ ಮೊದಲು ನಾನೇ ಅಳಿಸಿ ಕೊಂಡಿರುವೆ" ಎಂದಳು. ಈ ಮಾತುಗಳನ್ನು ಕೇಳಲು ವಿಕಟ ಹಾಸ್ಯವೊಂದು ಮಾಲತಿಯ ಮೋರೆಯನ್ನಾವರಿ ಸಿತು. ಮರುಕ್ಷಣದಲ್ಲಿ ಹಾಸ್ಯವು ಮಾಯವಾಗಿ— ತನ್ನಿಂದ ತಾರೆಯು ವಿಧವೆಯೇ?—ಎಂಬ ಭಾವವು ಮೂಡಿ ಅವಳು ತನ್ನ ಗೆಳತಿಯ ತೊಡೆಯ ಮೇಲೆ ಮೂರ್ಛಿತಳಾಗಿಬಿಟ್ಟಳು.

ಮಾಲತಿ ಈಗ ಚೈತನ್ಯ ಶೂನ್ಯದೇಹ. ಅವಳಿಗೆ ಪ್ರಜ್ಞೆಯಿಲ್ಲ. ತಾರೆಯು ಅವಳನ್ನು ಕಾಣುತ್ತಾಳೆ . . . ಪ್ರಜ್ಞೆಯಿದೆ— ಆದರೆ ಯೋಚಿಸುವ, ಚರಿಸುವ ಶಕ್ತಿಯಿಲ್ಲ ಒಬ್ಬಳು ಸಮಾಜದ ವಿಧವೆಯು; ಇನ್ನೊಬ್ಬಳು ಸ್ವಕಲ್ಪನಾರಾಜ್ಯದ ವಿಧವೆಯು - ಒಬ್ಬಳು ಇನ್ನೊಬ್ಬಳಲ್ಲಿ ತನ್ನ ದಿಟ್ಟತನಕ್ಕಾಗಿ ಒಡಲಿನಿಂದಲೇ ಕ್ಷಮಾಯಾಚನೆ ಮಾಡುತ್ತಿರುವಳು. ಇನ್ನೊಬ್ಬಳು, ತನ್ನ ಗೆಳತಿಯನ್ನು ಒಡಲಿನಿಂದಲೇ ಸಂತೈಸುತ್ತಿರುವಳು. ಕಾಯಗಳೆರಡು; ಜೀವವು ಒಂದು ಅಲ್ಲೀಗ ಸಧವೆ ವಿಧವೆಯರೀರ್ವರ ಏಕೀಕರಣವಾಗಿದೆ. ಆ ಚೇತನವು ಅವರೀರ್ವರ ನವೀನ ಮುಖದ ಮೇಲೆ ನಿಮಗೆ ಕಾಣಿಸುವುದಿಲ್ಲವೇ?

## ೨. ಅಮಾಂಗಲ್ಯ ಸೌಮಾಂಗಲ್ಯಗಳ ನಡುವೆ.

ಮರುದಿನ ರಾತ್ರಿ ಬೆಳ್ದಿಂಗಳು ಎಲ್ಲೆಲ್ಲಿಯೂ ಚೆಲ್ಲಿತ್ತು. ಮದುವೆಯ ಮನೆಯ ಉತ್ಸಾಹವಾದರೂ ಎಲ್ಲೆಲ್ಲಿಯೂ ಹರಡಿತ್ತು. ಒಂದು ಕಡೆಯಲ್ಲಿ ಕೆಲವು ತರುಣರು ಸೇರಿ ಒಂದು ಸಂಗೀತ ಜಲಸವನ್ನು ಜರುಗಿಸುತ್ತಿರುವರು. ಹಿರಿಯರೆಲ್ಲ ಸೇರಿ ಇನ್ನೊಂದೆಡೆ, ರಘುರಾಮದಾಸರ ಹರಿಕತಾಶ್ರವಣವನ್ನು ಮಾಡುತ್ತಿರುವರು. ರಾತ್ರಿ ೧೨ ತಾಸು ಬಾರಿಸಿ ಹೋದರೂ ನಿದ್ರೆ ಮಾಡಬೇಕೆಂಬ ಯೋಚನೆಯು ಯಾರೊಬ್ಬರಿಗೂ ಇದ್ದಂತೆ ಕಾಣದು. ನಮ್ಮ ಚಿಕ್ಕ ತಾರೆಗೂ ಸಹ ನಿದ್ದೆ ಬಾರದು.

ಅವಳ ಸುತ್ತ ಅವಳ ಗೆಳತಿಯರು ಕುಳಿತು—ಎಲ್ಲರೂ ಹಾಡನ್ನು ಹೇಳುತ್ತಿರುವರು. ಹಾಡಿನ ಧ್ವನಿಯನ್ನು, ಕೆಲವು ಬಾರಿ ಅವರ ಗೊಳ್ಳೆಂಬ ನಗುವು, ಮುರಿಯುವುದು. ಕೆಲವು ಹಾಡುಗಳು ಮದುವಣಿಗಿತ್ತಿಯನ್ನು ಚೇಷ್ಟೆಮಾಡುವುದರ ಸಲುವಾಗಿಯೇ ಇರುವುವು. ಕೆಲವು – ವಧುವಿನ ಮುಂದೆ ವರನ ಕುಂದು ಕೊರತೆಯನ್ನು ಹೇಳುವ ಹಾಡುಗಳು. ಅಂತು ಹಾಡಾದರೆ ಸರಿ. ಕೇಳುತ್ತಿರುವ ತಾರೆಯ ಮನಸ್ಸಿನ ಸ್ಥಿತಿಯೇನಿದ್ದರೇನು? ಕೆಲವು ಹಾಡುಗಳನ್ನು ಕೇಳಿ ಅವಳಿಗೆ ಸಿಟ್ಟಿನಿಂದ ರೋಮಾಂಚವಾಗುವುದು ತನಗೂ ಹಾಡುಕಟ್ಟಲು ಬಂದಿದ್ದರೆ, ಇವರನ್ನೆಲ್ಲಾ ಅಣಕಿಸುವ ಒಂದು ಹಾಡನ್ನು ಹಾಡುತಿದ್ದೆನು–ಎಂದೆಂದುಕೊಳ್ಳುವಳು. ಆದರೆ ಆ ನಾಲ್ಕು ದಿನಗಳವುಟ್ಟಿಗೆ ಅವಳಿಗೆ ಕವಿತೆ ಬಂದರೂ ಉಪಯೋಗವಿಲ್ಲ—ಅವಳಿಗೆ ಹಾಡುವ ಅಧಿಕಾರವಿಲ್ಲ, ಕೇವಲ ಕೇಳುವ ಅಧಿಕಾರವಷ್ಟೇ.

ಈ ಯಾವತ್ತು ಗದ್ದಲಗಳನ್ನು ಮಹಡಿಯ ಮೇಲೆ ಕುಳಿತುಕೊಂಡು ಮಾಲತಿಯು ಕೇಳುತ್ತಲೇ ಇದ್ದಳು. ಅಲ್ಲಲ್ಲಿ ಆ ಹಾಡುಗಳ ಮೇಳಕ್ಕೆ ಸರಿಯಾಗಿ ತನಗೇ ಅರಿವಿಲ್ಲದಂತೆ ಧ್ವನಿಗೂಡಿಸುವಳು. ಚೇಷ್ಟೆಗಳನ್ನು ಕೇಳಿ ನಗುವಳು. ಅವಳ ಮನಸ್ಸು ಈಗ ಹೇಗಿದೆಯೆಂದು ಅವಳಿಗೇ ತಿಳಿದಿಲ್ಲ. ಅಷ್ಟರಲ್ಲಿಯೇ ತಾಸು ಒಂದು ಬಾರಿಸಿತು. ಅದರ ಸದ್ದು ಅವಳನ್ನು ಸಿಡಿಲಿನ

ಬಡತನದಷ್ಟು ಜನುಕಿತಳನ್ನಾಗಿಮಾಡಿತು. ಕುಳಿತಲ್ಲಿಂದ ಒಮ್ಮೆಗೆ ಚಿಗಿದುನಿಂತಳು. ತನ್ನ ಕೊಠಡಿಯ ಕದ ವನ್ನಿಕ್ಕಿಕೊಂಡು—ತನ್ನ ಯಾವತ್ತು ಉಡುಗೆ ಆಭರಣ ಗಳನ್ನು ಎರಡನೆಯಾವೃತ್ತಿಗೆ ಹೊರತೆಗೆದಳು ಅದೇ ಜರತಾರಿಯ ಧಾರೆಸೀರೆಯನ್ನುಟ್ಟಳು, ರೇಶ್ಮೆಯ ಕುಪ್ಪಸ ವನ್ನು ತೊಟ್ಟಳು. ಯೋಗಂಧನಂಥ ಶ್ರೀಮಂತನಮಗಳು ತೊಡಬೇಕಾದಷ್ಟು ಚಿನ್ನಾಭರಣಗಳನ್ನು ತೊಟ್ಟಳು. ತಾನು ಕದ್ದು ತಂದಿದ್ದ ಹೂವುಗಳನ್ನು ಮುಡಿದಳು. ಹಣೆಗೆ ತಿರುಗಿ ಕುಂಕುಮವನ್ನಿಟ್ಟಳು. ಅದೀಗ ಅವಳ ಶೃಂಗಾರವು ಸಂಪೂರ್ಣವಾಯಿತು. ಕೃತಕ ಶೃಂಗಾರ ವೆಷ್ಟು ಬೇಕೋ ಅಷ್ಟನ್ನು ಅವಳು ಸಜ್ಜಾಗಿ ಧರಿಸಿದಳು. ಒಮ್ಮೆ ತನ್ನ ಸೌಂದರ್ಯವನ್ನು ಕೊನೆಯ ಬಾರಿಗೆ ನಿರೀಕ್ಷಿಸುವೆನೆಂದು — ಉರಿಯುತ್ತಿದ್ದ ದೀವಿಗೆಯ ಬಳಿಯಿರುವ ಕನ್ನಡಿಯ ಮುಂದೆ ನಿಂತಳು. ತೀರ ನಿಷ್ಠುರ ಕನ್ನಡಿ! ರತಿಯ ಉಡುಗೆಯ ಬೆಡಗಿನಲ್ಲಿ, ಕಂದಿದ.. ಕುಂದಿದ ಮುಖವನ್ನದು ಪ್ರತಿಬಿಂಬಿಸಬೇಕೆ? ಆ ಮೋರೆಯನ್ನು ಕಂಡು ಮಾಲತಿಗೆ ಅದು ತನ್ನದಲ್ಲ ವೆಂದೇ ತೋರಿತು. ಅಹುದೋ ಅಲ್ಲವೋ ಎಂದು ತನ್ನ ಮೋರೆಯ ಮೇಲೆ ಕೈಯನ್ನಿರಿಸಿದಳು—ನಿಜ. ತನ್ನದೇ ಮೋರೆ; ತನ್ನ ಕತ್ತಿನ ಮೇಲೆಯೇ ನಿಂತಿದೆ. ಅದನ್ನು ಕಂಡು ಅವಳಿಗೆ ವ್ಯಥೆಯಾಯಿತು. ತನ್ನ ಮದುವೆಯ ದಿನ ತಾನು ತೋರಿದ ಹರುಷವನ್ನೆಲ್ಲಾ ಈಗ ತೋರಿಸಬೇಕೆಂದು ಅವಳು ಯತ್ನಿಸಿದಳು.

ಕನ್ನಡಿಯ ಮುಂದೆ ನಿಂತು ನಗಲೆತ್ನಿಸಿದಳು. ಎಂಥ ವಿಕಟ ನಗು! ಬಾಡಿಮುದುರಿದ ಹೂವನ್ನು ಕೈಯಿಂದ ಬಿಡಿಸಿ ಅರಳಿಸಿದಂತೆ ಕಂಡಿತು. ತಿರುಗಿ ತನ್ನಾದಿಸದ ನಗುಮೊಗವನ್ನು ಅವಳು ತಾರದಾದಳು. ಆ ಕಲ್ಪನೆಯು ಅವಳಿಗೆ ಅಸಹನೀಯವಾಯಿತು. "ತಾನಿಂದು ವಿವಾಹಿತಳಾಗುತ್ತಿರುವೆ; ಈ ಕನ್ನಡಿಯು ಮದುವಣಿಗಿತ್ತಿಯಾದ ತನ್ನನ್ನು ವಂಚಿಸಬೇಕೆ?" ಎಂದು ಕೇಳಿದಳು. ಕೊಸಗೆ ಸಿಟ್ಟಿನಿಂದ ಆ ಕನ್ನಡಿಗೆ–ವಂಚನೆಯ ಕನ್ನಡಿಗೆ, ಉತ್ತಾಪ್ರಹಾರಮಾಡಿದಳು. ತಿರುಗಿ ಅದು ಯಾರ ಮುಖವನ್ನೂ ಪ್ರತಿಬಿಂಬಿಸುವಂತಿಲ್ಲ. ತನ್ನ ವಿಜಯಕ್ಕಾಗಿ ಮಾಲತಿಯು ತಾನೇ ನಕ್ಕಳು.

ಈಗ ಶೃಂಗಾರವೆಲ್ಲ ಆಯಿತಷ್ಟೆ. ಇನ್ನವಳು ಮದುವಣಿಗನನ್ನು ಹುಡುಕಿಕೊಂಡು ಮಂಟಪಕ್ಕೆ ಹೋಗಬೇಡವೇ! ತಾಸು ಒಂದು ಬಾರಿಸಿಯಾಯಿತು. ಇನ್ನು ಲಗ್ನವು ತಪ್ಪಿದರೆ ಮದುವೆಯಾಗುವುದುಂಟೇ? ಅದಕ್ಕಾಗಿ ಸದ್ದಿಲ್ಲದೆ ಕದವನ್ನು ತೆರೆದು ಮಹಡಿಯಿಂದ ಕೆಳಕ್ಕಿಳಿದಳು. ಯಾರಾದರೂ ತನ್ನನ್ನು ತಡೆಯಬಹುದೆಂಬ ಕಲ್ಪನೆ ಅವಳಿಗಿಲ್ಲ; ನಿಜವಾಗಿ ತಂತಮ್ಮ ಗದ್ದಲಗಳಲ್ಲಿ ಮುಣುಗಿದ ಯಾರೂ ಅವಳನ್ನು ತಡೆಯಲೂ ಇಲ್ಲ ಕೆಳಕ್ಕಿಳಿದು ಹಿಂಬಾಗಿಲಿನಿಂದ ತೋಟಕ್ಕೆ ಹೋದಳು. ತಾನೇ ನಟ್ಟ–ಗುಲಾಬಿ, ಮಲ್ಲಿಗೆಗಿಡಗಳು ಅವಳನ್ನು ಕಂಡುವು. ಅವುಗಳು ಅವಳು ವಿಧವೆಯಾದಂದಿ

ನಿಂದ ತಮ್ಮ ಒಡತಿಯ ಸ್ನೇಹೋಪಚಾರಗಳನ್ನು ಕಳೆದುಕೊಂಡು ತಾವೂ ವಿಧವೆಗಳಾಗಿದ್ದುವು. ಅವುಗಳನ್ನು ಕಂಡು ಮಾಲತಿಯು ಅಳತೊಡಗಿದಳು. ತಾನು ಇದುವರೆಗೆ ನೀರೆರೆಯದೆ ಇದ್ದ ತಪ್ಪಿಗಾಗಿ ಕಣ್ಣೀರನ್ನು ಎರೆದಳು. ಅಷ್ಟರಿಂದಲೇ ಅವು ತೃಪ್ತವಾಗವೆಂದು-ಅವುಗಳ ಹೂಗಳನ್ನು ಮುಡಿಯುವ ಯೋಚನೆಮಾಡಿದಳು. ಆದರೆ ಹೂಗಳಿರಲಿಲ್ಲ-ಕೊನೆಗಿಷ್ಟು ಎಲೆಗಳನ್ನು ಕಿತ್ತು ತಲೆಯಲ್ಲಿ ತುರುಕಿಕೊಂಡಳು. ಈಗವಳ ಶೃಂಗಾರವು ಪೂರ್ಣವಾಗಿರಬೇಕು. ಅದಕ್ಕಾಗಿ ಅವಳು ಮನೆಹಿತ್ತಿಲನ್ನು ದಾಟ ಮುಂದೆ ಸರಿದಳು. ದೂರದಿಂದ ಇನ್ನಾವುದೋ ವ್ಯಕ್ತಿಯು ಅವಳ ಹೆಜ್ಜೆಯನ್ನನುಸರಿಸುತ್ತಿತ್ತೆಂದು ಕಂಡಿತು. ಅವಳಿಗೂ ಆ ಸಂಶಯವು ಬಂದಿತು. ಅದಕ್ಕಂಜಿ ಅವಳು ತನ್ನ ವಿವಾಹವನ್ನು ಮರೆಯುವಳೇ! ಮಂಟಪವು ಬಂದೇ ಬಂದಿತು. ಊರಕೆರೆ! ಕಲ್ಲಿನ ದಂಡೆಯ ಮೇಲೆ ನಿಂತಳು ತೃಪ್ತಿಯಿಲ್ಲದೆ ತನ್ನ ಪತಿಯನ್ನು ಕಾಣಲು ಒಂದೊಂದೇ ಸೋಪಾನವನ್ನಿಳಿದು ನೀರತಡಿಗೆ ಹೋಗಿ ನಿಂತಳು. ಬೆಳದಿಂಗಳಲ್ಲಿ, ನೀರಿನಲ್ಲಿ ಮಾಲತಿಗೆ ಪತಿಯ ಬಿಂಬವು ಕಾಣಿಸಿತು. ಅವಳಾಗ ಅದು ತನ್ನ ಪತಿಯೆಂದೇ ತಿಳಿದು ನಕ್ಕಳು. ಅವನ ಕೊರಳಿಗೆ ಹೂಮಾಲೆಯನ್ನು ಹಾಕುವೆನೆಂದಳು. ಆದರೆ ಅದನ್ನು ತರುವಷ್ಟು ಸ್ಮರಣೆ ಅವಳಿಗಿದ್ದಿರಲಿಲ್ಲ. ತಿರುಗಿ ತರಹೋದರೆ ಶುಭ ಮುಹೂರ್ತವು ಕೆಟ್ಟೀತೆಂದು ಅವಳು ತಾನು ಮುಡಿದ ಹೂಗ

ಳನ್ನು ತನ್ನ ಬೊಗಸೆಯಲ್ಲಿ ಹಿಡಿದುಕೊಂಡು— “ಸುಲಗ್ನಸಾವಧಾನಃ” ಎಂಬ ಮಂತ್ರವನ್ನು ತಾನೇ ಉಚ್ಚರಿಸಿ ತನ್ನ ವರನನ್ನು ತಬ್ಬಿಕೊಂಡಳು. ಅದೇಕ್ಷಣದಲ್ಲಿ ವಧೂವರರು ಒಂದಾದರು! ಇನ್ನರೆಕ್ಷಣವಲ್ಲಿ ಇಬ್ಬರೂ ಕಣ್ಮರೆಯಾದರು. ಮಾಲತಿಯು ಆನಂದದ ಸಮಾಧಿಯುದ್ದು; ತಿರುಗಿ ಆ ಸಮಾಧಿಯಿಂದ ತಾನೇಳುವುದಿಲ್ಲವೆಂದು ಅವಳು ತಿಳಿದಿದ್ದಳು. ಆದರೆ, ಇಷ್ಟವಿಲ್ಲದೆ ಕಣ್ದೆರೆಯುತ್ತಾಳೆ: ತಾನು ನಿಜವಾಗಿ ಒರ್ವ ತರುಣನ ಕೈಗಳಮೇಲೆ ಒರಗಿ ಮಲಗಿರುವುದನ್ನು. ಅವನೇ ತನ್ನ ಪತಿಯು—ಎಂದು ತಿಳಿದಳವಳು. ಆ ಭಾವನೆಯಿಂದ ಅವನನ್ನು ತಬ್ಬಿಕೊಂಡಳು. ಹೆಚ್ಚೇನು, ಪೂರ್ಣಪ್ರೇಮದಿಂದ ಚುಂಬಿಸಿದಳು. ಇದು ತರುಣನಿಗೆ ಅಸಹನೀಯವಾಯಿತು. ಇಷ್ಟೆಲ್ಲ ಆಗುವುದೆಂದು ಅವನು ತಿಳಿದಿರಲಿಲ್ಲ. ಗೆಳೆಯರ ಚೇಷ್ಟೆಯಿಂದ ಬೇಸರಗೊಂಡ ಅವನು, ಹೂದೋಟದಲ್ಲಿ ಏಕಾಂತವಾಗಿ ಆನಂದಿಸುವೆ ಎಂದು ಬಂದಿದ್ದನು. ಅಲ್ಲಿ, ಮಾಲತಿಯ ದರುಶನದಿಂದ ಇವನ ಏಕಾಂತಭಂಗವಾಯಿತು. ಅವಳ ಉಡುಗೆಯನ್ನು ಕಂಡು ಚಕಿತನಾದನು. ನಿಜವನ್ನು ಹೇಳುವುದಾದರೆ— ಅವಳು ವಿಧವೆಯಾದ ಮೇಲೆ ಅದೇ ಬೆಡಗಿನ ಒಡವೆಗಳಲ್ಲಿ ಅವಳನ್ನು ಕಾಣಬೇಕೆಂದು ಅವನ ಇಷ್ಟವಾಗಿತ್ತು. ತಾರುಣ್ಯದ ಸೊಕ್ಕಿನಿಂದೆನ್ನಿರಿ, ಕಾಮುಕತೆಯಿಂದೆನ್ನಿರಿ, ವಿಲಾಸವಯ್ಯಾರಗಳಿಂದೆನ್ನಿರಿ—ಅವನು, ಮಾಲತಿಯು ವಿಧವೆಯಾದ ಮೇಲೂ

ಅವಳನ್ನು ಓರೆಗಣ್ಣಿನಿಂದ ಹಲವಾವೃತ್ತಿ ಕಂಡವನು. ಆದರೆ ಮಾಲತಿಯು ಅವನ ಪ್ರಾರ್ಥನೆಗಳಿಗೆ ಪ್ರತಿಧ್ವನಿಯನ್ನು ಕೊಟ್ಟಿರಲಿಲ್ಲ. ಮದುವೆಯ ನೆಪದಿಂದಲಾದರೂ ಅಲ್ಲಿಗೆ ಬಂದು ಅವಳೊಡನೆ ತನ್ನ ಅಂತರಂಗವನ್ನು ಬಿಚ್ಚಿ ಹೇಳುವ ಸಾಹಸಮಾಡುವೆನೆಂದು ಯೋಗಂಧನಲ್ಲಿಗೆ ಬಂದು ಹೊಂಚುಹಾಕುತ್ತಿದ್ದನು. ಮದುವೆಯ ಎರಡು ದಿನಗಳು ಸಂದುವು; ಮಾಲತಿಯು ಹೊರಬೀಳಲಿಲ್ಲ; ಅದೇ ಬೇಸರವು ಅವನ ತಲೆಯಲ್ಲಿ. ಅದೇ ಯೋಚನೆಯಿಂದವನು ತಪಿಸುತ್ತಿದ್ದುದರಿಂದ ಗೆಳೆಯರ ಆನಂದವನ್ನು ಸಹಿಸಲಾರದೆ ಬೇಸರಗೊಂಡು ತೋಟವನ್ನು ಸೇರಿದನು. ಈಗ ಒಮ್ಮೆಗೇ ಈ ರೀತಿ ಅನುರಾಗವನ್ನು ತೋರಿಸುವ ಮಾಲತಿಯು ಅವನ ಕೈಗಳಲ್ಲಿ ಬಿದ್ದರೆ ಅವನಿಗೆಷ್ಟು ಆನಂದವಾಗಬೇಡ. ಆದರೆ ಅವಳೊಡನೆ ಮಾತನಾಡುವ ಇಲ್ಲವೆ ಅವಳನ್ನು ಸಂಭಾವಿಸುವ ಸಾಹಸವು ಅವನಿಗುಂಟಾಗಲಿಲ್ಲ. ಎಲ್ಲಾದರವಳು — "ಪ್ರಫುಲ್ಲಾ, ನನ್ನನ್ನು ನೀರಿನಿಂದೇಕೆ ತೆಗೆದೆ?" ಎಂದು ಕೇಳಿದರೆ— ಎಂಬ ಅಂಜಿಕೆ. ಪ್ರಣಯಿನಿಯ ಪ್ರೇಮವು ಮರಳಿ ಸಿಗುವತನಕ ಪ್ರಣಯಿಗಳ ಅಂಜಿಕೆಯು ಅಷ್ಟಿಷ್ಟಲ್ಲವೆಂದು ತೋರುವುದು. ಸರಿ, ಇವನೆಣಿಸಿದಂತೆಯೇ ಆಯಿತು. ಮಾಲತಿಯು ಅಷ್ಟೆಲ್ಲ ಮಮತೆಯನ್ನು ತೋರಿದರೂ ಇವನು ಸುಮ್ಮನಿರುವುದನ್ನು ಕಂಡು, ಅವಳಿಗೆ ಇವನು ತನ್ನ ಪತಿಯಲ್ಲವೆಂದು ಕಂಡಿತು. ಹಿಂದೆ ತಾನು ಆತ್ಮಹತ್ಯೆಗಾಗಿ ನೀರಲ್ಲಿ ಧುಮುಕಿದ

ಸ್ಮರಣೆಯಾಯಿತು. ವೈಯ್ಯಬಟ್ಟೆಯಿಂದ ನೀರು ಜಿನುಗುತ್ತಿರುವುದು ತೋರಿತು. ಆದರೆ — ತನ್ನನ್ನು ಆದರಿಸಿದ ತರುಣನ ಬಟ್ಟೆಗಳು ಒದ್ದೆಯಾಗಿವೆ ಎಂದೂ ತೋರಿತು. ಕೊನೆಗವಳು ಏನೂ ತಿಳಿಯಲಾರದೆ "ನೀನಾರು ನನ್ನ ಪತಿಯಲ್ಲವೇ?" ಎಂದು ಕೇಳಿದಳು. ತರುಣನು 'ಅಲ್ಲ' ವೆಂದನು.

ಮಾಲತಿ:— ಹಾಗಾದರೆ ನೀನೇಕೆ ನನ್ನನ್ನು ನೀರಿನಿಂದ ಹೊರತೆಗೆದೆ? ನನ್ನ ವಿವಾಹವನ್ನು ಕಡಿದೆ?

ಪ್ರಫುಲ್ಲ:— ಮಾಲತಿ, ನೀನು ಆತ್ಮಹತ್ಯೆಯನ್ನು ಮಾಡುವುದನ್ನು ಕಂಡು ಸಹಿಸಲಾರದೆ ನಿನ್ನನ್ನು ಮೇಲಕ್ಕೆತ್ತಿ ಬದುಕಿಸಿದೆ.

ಮಾಲತಿ:— "ಬದುಕಿಸಿದೆ"! ಬದುಕಿಸಲು ಸತ್ತವರಾರು? ನನ್ನ ಪತಿಯಕರಗಳಿಂದ ತಪ್ಪಿಸಿ— ನಿನ್ನ ಒಳಿಸೆಳೆಯುವೆಯೇನು?

ಪ್ರಫುಲ್ಲ:— ಮಾಲತಿ, ಏನು ಹುಚ್ಚಳಂತೆ ಮಾತನಾಡುವೆ? ನಿನ್ನ ಪತಿಯೆಲ್ಲಿರುವನು?

ಅವನು ತೀರಿಕೊಂಡು ಎಷ್ಟು ದಿನಗಳಾಗಲಿಲ್ಲ. ನೀನೀಗ ವಿಧವೆಯಲ್ಲವೆ.

ಮಾಲತಿಗೆ ಸಿಟ್ಟೇರಿತು— "ನಾನು ವಿಧವೆಯು! ನನಗೆ ವಿವಾಹವೇ ಆಗಿಲ್ಲ. ನನ್ನನ್ನು ವಿವಾಹ ಪೂರ್ವದಲ್ಲಿ ಇಲ್ಲಿ ಸೆಳೆದು ತಂದು— ಈಗ ವಿಧವೆ ಯನ್ನುವಿಯೋ? ನೋಡು ನನ್ನ ಉಡುಗೆಯನ್ನು; ಕುಂಕುಮವನ್ನು." ಕುಂಕುಮವನ್ನು ನೋಡಲೇನು?

ಅದು ತಿರುಗಿ ತೊಯ್ದು ಹೋಗಿದೆ. ಆದರೇ ತಾನೇ ಕಟ್ಟಿಕೊಂಡ ಮಾಂಗಲ್ಯಸೂತ್ರವು ಮಾತ್ರ ಕೊರಳಲ್ಲಿದ್ದೆ.

ಪ್ರಫುಲ್ಲನ ಬಾಯಿತೆರೆಯದಾಯಿತು ತನ್ನ ಪ್ರೇಮ ಪಾತ್ರ ಒಡವೆಯು ತೀರ ಪಚ್ಚಿನ ಮನೋವೇದನೆ ಯಿಂದ ನರಳುತ್ತಿರುವಂತೆ ಕಂಡಿತು. ತನ್ನರೆಗಣ್ಣಿನ ಪ್ರಾರ್ಥನೆಗಳನ್ನು ಇದುವರೆಗೆ ಅವಳು ನಿರಾಕರಿಸಿರಲು, ಅಂಥ ಸ್ಥಿತಿಯಲ್ಲೂ, ಈಗವನು ಬಾಯಿತೆರೆದು ತನ್ನನ್ನು ಪ್ರೀತಿಸು ಎನ್ನಲು ಬರುವುದೇ? ಆದಕ್ಕಾಗಿ ಮುಂಕನಂ ತವನು ಅವಳ ಮೋರೆಯನ್ನು ನೋಡುತ್ತ ಕಲ್ಲಿನಂತೆ ಕುಳಿತನು ಮಾಲತಿಗೆ ಸ್ವಲ್ಪ ಮೈಮೇಲಿನ ಪ್ರಜ್ಞೆಯು ಬಂದಿತು. ತಾನಾರು, ತಾನೆಲ್ಲಿಗುವ ಎಂಬ ಕಲ್ಪನೆ ಯಾಯಿತು. ಆದರೆ, ತಾನು ಪ್ರಫುಲ್ಲನ ಕರಗಳಲ್ಲಿ ಬಿದ್ದಿರುವೆ, ಅವನು ಪರಪುರುಷನು, ಅಲ್ಲಿಂದ ತಾನೇಳ ಬೇಕು — ಎಂದು ಕಂಡರೂ, ಚಲಿಸುವ ಶಕ್ತಿಯು ಆವಳ ದುರ್ಬಲ ನರಗಳಿಗೆ ಉಂಟಾಗಲಿಲ್ಲ. ಹಾಗೆ ಯೇ ಅವಳು ಪ್ರಫುಲ್ಲನ ಮುಖವನ್ನು ದಿಟ್ಟಿಸಿ ನೋಡಿ ದಳು. ಅವನು ಭ್ರಾಂತನಂತೆ ಕುಳಿತುದೂ ಕಂಡಿತು. ತಾನೇ ಸಾಹಸದಿಂದ ಮಾತನಾಡಿಸಬೇಕೆಂಬ ಆಸೆ ಯಾಗಿ ಅವಳು — "ಪ್ರಫುಲ್ಲಾ, ನನ್ನನ್ನೇಕೆ ಬದುಕಿಸಿದೆ? ನಾನು ಸುಮಂಗಲೆಯಾಗಿ ಸಾಯಬಾರದೆಂದೇ?" — ಎಂದು ಕೇಳಿದಳು.

ಪ್ರಫುಲ್ಲನ ಕಣ್ಣೀರ ಬುಗ್ಗೆಯು ಒಡೆಯಿತು.

"ಪ್ರಫುಲ್ಲಾ, ಏನು ಸುಮ್ಮನಿರುವೆ! ಯಾರಿಗಾಗಿ ನಾನು ಬದುಕಬೇಕು? ಯಾರಿಗಾಗಿ ಬಾಳಬೇಕು? ಹೇಳು."

ಪ್ರಫುಲ್ಲನು ಬಿಳುಪಿನ ಮಳೆಯಲ್ಲಿ ನೆನೆಯುತ್ತಿರುವನು.

"ಪ್ರಫುಲ್ಲಾ, ನನ್ನನ್ನುಳಿಸಿ ನಿನಗೇನಾಗಬೇಕು? ನನ್ನನ್ನು ಸಾಯುಗೊಡು. ಯಾರಿಗೂ ಬೇಡದ ಪ್ರಾಣಿಯು ನಾನು.".

ಇದಕ್ಕೂ ಅವನು ಸುಮ್ಮನಿರಬಲ್ಲನೇ! "ಮಾಲತಿ, ನೀನು ಸಾಯಬಾರದು, ನನಗಾಗಿ ನೀನು ಬದುಕಬೇಕು."

"ಜಗತ್ತಿನ ಪಾಲಿಗೆ ನಾನು ವಿಧವೆಯು. ಅಮಂಗಲಕರ ಒಡವೆಯು. ಶುಭದಿನಗಳಲ್ಲಿ ಹೊರಬೀಳಲೇಬಾರದ ಅಪಶಕುನವು. ಇಂಥ ನಾನು. — "

"ಮಾಲತಿ, ಜಗದಪಾಲಿಗೆ ನೀನು ಅಮಂಗಲಿಯಾದರೆ ನನ್ನ ಪಾಲಿಗೆ ಸುಮಂಗಲೆಯು. ಅವರ ಪಾಲಿಗೆ ವಿಧವೆಯಾದರೆ ನನ್ನ ಪಾಲಿಗೆ ಸಧವೆಯು. ಅವರ ಪಾಲಿಗೆ ಅಪಶಕುನವಾದರೆ ನನ್ನ ಪಾಲಿಗೆ ಸುಶಕುನವು. ಆದುದರಿಂದ ನೀನು ಸಾಯಬಾರದು. ನನಗಾಗಿ ಬದುಕಬೇಕು."

"ಹಾಗಾದರೆ ನೀನು ನನ್ನವನೇ?"

"ಅಹುದು."

ಅವರಾಡಿದ ಮಾತುಗಳಿಗೆ ಜಗವು ಯಾವ ರೀತಿಯ ಅರ್ಥವನ್ನು ಮಾಡುವುದೆಂದು ಅವರಿಗೆ ತಿಳಿದ

ದೆಯೋ? ಅವರೀರ್ವರು ಇಂದು ತಮ್ಮದೇ ಜಗದಲ್ಲಿ ಕುಳಿತಿರುವಂತೆ ಕಾಣುವುದು. ಇದುವರೆಗೆ ಅವಳಿಗೆ ಪ್ರೇಮವೇನೆಂದು ತಿಳಿದಿರಲಿಲ್ಲ. ಅವಳ ಮೊದಲನೆಯ ಮದುವೆಯು ಶಾಸ್ತ್ರೋಕ್ತವಿವಾಹ; ಪ್ರೇಮದ್ದಲ್ಲ. ಅವಳಿಗಾದ ಮದುವೆಯ ಆಸೆಯು ತಾನು ವಿಲಾಸ ವೈಭವಗಳಲ್ಲಿ ನಲಿಯಬೇಕೆಂಬ ಆಸೆಯಿಂದ. ಈಗ ಅವಳು ನುಡಿಯುತ್ತಿರುವುದು ಪ್ರೇಮದಿಂದ. "ಪ್ರಫುಲ್ಲ, ನೀರಿನಿಂದ ನನ್ನನ್ನುಳಿಸಿದವನು ನೀನು. ನಿನಗಾಗಿ ನಾನು ಬಾಳುವೆ" ಹೀಗೆಂದು ಪ್ರಫುಲ್ಲನನ್ನು ಮುದ್ದಿಟ್ಟಳು. ಪ್ರಫುಲ್ಲನು ಯಂತ್ರದಂತೆ ಅವಳ ಕಪೋಲವನ್ನು ಕೈಯಿಂದ ಸವರಿದನು.

## ೩. ಸಣ್ಣ ಇಲಿಯಲ್ಲ; ಹೆಣ್ಣು ಹುಲಿ!

ಮಾಲತಿಯು ಈಗ ತೀರಾ ಸುಖಿಯು, ಅವಳ ಉತ್ಸಾಹಕ್ಕೆ ಮಿಗುವಿಲ್ಲ, ಆನಂದಕ್ಕೆ ಕೊನೆಯಿಲ್ಲ. ತಾನು ತನ್ನ ತಾರೆಯಂತೆಯೋ ಎಂದು ತಿಳಿದಿರುವಳು; ಅಂತೆಯೇ ಸಥವೆಯೆಂದು. ಜಗತ್ತಿನಲ್ಲಿ ಯಾರವಳನ್ನು ಪ್ರೀತಿಸದಿದ್ದರೂ ಪ್ರಫುಲ್ಲನು ಅವಳನ್ನು ಪ್ರೀತಿಸುವನೆಂದು ತಿಳಿದಿರುವಳು. ಅವಳಿಗದಲ್ಲದೆ ಇನ್ನೇನುಬೇಕು? ಅವಳಿಂದು ಅವನಿಗಾಗಿ ಸದಾ ಸುಖಿಯಾಗಿರುವಳು. ಅವನಲ್ಲವೆ ಅವಳಿಗೆ ಜೀವದಾನಮಾಡಿದವನು? ಪ್ರತಿಕ್ಷಣವನ್ನು ಅವನ ನಿರೀಕ್ಷಣೆಯಲ್ಲಿಯೇ ಕಳೆಯುವಳು. ಪ್ರಫುಲ್ಲನು ನಮ್ಮ ಯೋಗಂಧನ ಮಗನ ಸಹಪಾಠಿ.

ಯೋಗಂಧನ ಮಗನೆಂದರೆ ತಾರೆಯ ಗಂಡ; ಮಾಲತಿಯ ಅಣ್ಣ. ಮದುವೆಯು ಮುಗಿದ ಬಳಿಕ, ನಿತ್ಯವೂ ಪ್ರಫುಲ್ಲನು ಮಾಲತಿಯಂಣ ಮಹೇಶನನ್ನು ಕಾಣಲು ಬರುವನು. ಅವರೀರ್ವರಲ್ಲಿ ಅತಿ ಹೆಚ್ಚಿನ ಆಪ್ತತ್ವವಿದೆ. ಸರಿ, ಈ ಗೆಳೆಯರೀರ್ವರು ಸರಸಸಲ್ಲಾಪದಲ್ಲಿರುವುದನ್ನು ಕಂಡರೆ ಮಾಲತಿಯು ಮೆಲ್ಲನೆ ಅವರಿರುವಲ್ಲಿಗೆ ಬರುವಳು; ಮೆಲ್ಲಗು ನಗುವಳು; ಮೆಲ್ನುಡಿಯನ್ನಾಡುವಳು. ಮಹೇಶನಿಗೆ ಇದರ ರಹಸ್ಯವು ಮಾತ್ರ ಮೊದಲು ಮೊದಲು ತಿಳಿಯಲಿಲ್ಲ. ಆದರೆ ಕೊನೆಯವರೆಗೂ ತಿಳಿಯದಿರುವುದುಂಟೇ? ಎಂದಾದರೂ ಮನೆಗೆ ಬಂದಾಗ ಮಾಲತಿಯು ಕಣ್ಣಿಗೆ ಬೀಳದೆ ಹೋದರೆ ಪ್ರಫುಲ್ಲನು ತನ್ನ ಗೆಳೆಯನನ್ನು—"ಏನು, ಮಾಲತಿಯೆಲ್ಲಿ?" ಎಂದು ಕೇಳುವುದುಂಟು . . . ಇಲ್ಲವೆ ಒಂದು ದಿನ ಪ್ರಫುಲ್ಲನು ತಮ್ಮ ಮನೆಗೆ ಬಾರದೆಹೋದರೆ, ಮಾಲತಿಯು ಅಣ್ಣನನ್ನು "ನಿನ್ನ ಗೆಳೆಯನೆಲ್ಲಿ?" ಎಂದು ಕೇಳುವುದುಂಟು. ಆದರೆ ಮಹೇಶನಿಗೆ ತನ್ನ ಬಡ ತಂಗಿಯ ಪ್ರೇಮಮಯ ರಾಜ್ಯದಲ್ಲಿ ವಿಷವನ್ನೆಸೆಯುವ ಸಾಹಸವುಂಟಾಗಲಿಲ್ಲ. ಅವನು ಅದನ್ನು ಪ್ರತಿಭಟಿಸಲೂ ಇಲ್ಲ. ಪ್ರೋತ್ಸಾಹಿಸಲೂ ಇಲ್ಲ—ಕಣ್ಮುಚ್ಚಿ ಕುಳಿತನು.

ಈಗೀಗ ಮಾಲತಿಯ—ಉಲ್ಬಣವೋ, ಉಪಟಳವೋ—ಮನೆಯಲ್ಲಿ ಮಿತಿಮೀರಿದೆಯೆಂದು ಒಂದು ದಿನ ಯೋಗಂಧನು ತನ್ನ ಪತ್ನಿಯಲ್ಲಿ ನುಡಿಯುತ್ತಿದ್ದನು.

ಅವನಿಗೆ ತನ್ನ ಮಗಳು ಇನ್ನೂ ಹೀಗೆ ಹುಚ್ಚು ಹುಚ್ಚಾಗಿ ವರ್ತಿಸುತ್ತಿರುವುದು ಸರಿತೋರುವುದಿಲ್ಲ. ಸುಮಂಗಲೆ ಯಂತೆ ಅವಳು ಹೆರಳುಹಾಕಿಕೊಳ್ಳುವುದು, ಹೂಮುಡಿ ಯುವುದು, ಬೆಡಗುಮಾಡುವುದು–ಅವನಿಗೆ ಸರಿತೋರ ಲಿಲ್ಲ. ಊರವರ ಮಾತುಗಳನ್ನು ಅವನು ಕೇಳಲಾರ ದಾದನು. ಮೊದಲೇನೋ ಚಿಕ್ಕವಳು; ಆಗ ಅವಳ ಬಾಲಮನಸ್ಸಿಗೆ ನೋವನ್ನುಂಟುಮಾಡಬಾರದು ಎಂದು, ಅದನ್ನೆಲ್ಲಾ ಸಾಗಗೊಟ್ಟರೆ ಈಗ ಅದು ಮಿತಿಮೀ ರುತ್ತಿದೆ. ಹೆಚ್ಚೇನು, ಹುಚ್ಚು ಹುಡುಗಿಯು ಕುಂಕುಮ ವನ್ನಿರಿಸಿಕೊಳ್ಳುತ್ತಿರುವಳಂತೆ! ತಾಯಿಗೂ ಈ ಸುದ್ದಿ ತಿಳಿದಿತ್ತು. ಆ ದಿನವೇ ತಾರೆಯು ಎಲ್ಲವನ್ನೂ ಅತ್ತೆಗೆ ತಿಳಿಸಿದ್ದಳು. «ಅತ್ತೆಯವರೇ, ಪಾಪದ ಮಾಲತಿಯ ಸುಖಕ್ಕೆ ಭಂಗತರಬೇಡಿರಿ, ದಿನಹೋದರೆ ಅವಳೇ ತನ್ನ ಕರ್ತವ್ಯವನ್ನು ತಿಳಿಯುವಳು» ಎಂದಿದ್ದಳು. ಅತ್ತೆಗೂ ಆ ಮಾತು ಅಹುದೆನಿಸಿತು. ತನ್ನ ಮಗಳ ಹೃದಯಸಂತಾಪಕ್ಕೆ ಕಲ್ಲೆದೆಯವಳಾಗಲಾರದೆ ಅವಳು ಮೌನವಾಗಿದ್ದಳು. ಆದರೆ ಯೋಗಂಧನನ್ನವನು 'ಇಂದು, ಪುರೋಹಿತರಂದುದು ಕೇಳಿದೆಯೇನೆ? ಮಾಲತಿಯ ಆಟವನ್ನು ಹೀಗೆ ಸಾಗಗೊಟ್ಟರೆ ಇನ್ನೊಂದು ವರುಷದಲ್ಲಿ ಅವಳ ಕೈಯಲ್ಲಿ ಮಗುವೊಂದನ್ನು ಕಾಣು ವಿರಿ!»— ಎಂದು. «ಊರಮಂದಿಯ ಮಾತಿಗೆ ನೀವು ಬೆಲೆಕೊಡುವುದೇ» ಎಂದು ಅವನ ಪತ್ನಿಯು ನುಡಿಯುವ ಳು. ಮಗಳ ದುಃಖವನ್ನು ಸ್ಮರಿಸಿ ಅವಳೂ ಇಷ್ಟು ಕಣ್ಣೀ.

ರನ್ನು ಸುರಿಸಿದಳು. ಅವಳ ಕಪೋಲಗಳ ಮೇಲೆ ದುಃಖದ ನದಿಯು ಹರಿಯುತ್ತಿದ್ದುದನ್ನು ಕಂಡು ಯೋಗಂಧನು ಮುಂದೆ ಮಾತನಾಡಲಾರದೆ ಮರಳಿ ಬಿಟ್ಟನು.

ನಾಲ್ಕಾರು ದಿನಗಳ ಬಳಿಕ ಅವನು ಮಗ ನನ್ನು ಕಾಣುವುದಕ್ಕೆಂದು ಅವನ ಕೋಣೆಗೆ ಹೋದನು. ಅವನ ಎದೆ ಜಗ್ಗೆಂದಿತು! ಅಲ್ಲಿ ಮಗನ ಬದಲು ಅವನ ಕಣ್ಮುಂದೆ—ಹೆಗಲಮೇಲೆ ಕೈಹಾಕಿ ನಿಂತುಕೊಂಡ ಮಾಲತೀ ಪ್ರಫುಲ್ಲರು ಕಾಣಿಸಿಕೊಂಡರು. ಪ್ರಫುಲ್ಲನ ಕೈಯು ಕಡಿದಂತೆ ಕೆಳಕ್ಕೆ ಜೋತುಬಿದ್ದಿತು. ಮಾಲತಿಯೂ ತಂದೆಯನ್ನು ಕಂಡಳು. ಆದರೆ ಕೈಯನ್ನು ಪ್ರಫುಲ್ಲನ ಹೆಗಲಮೇಲಿಂದ ತೆಗೆಯಲಿಲ್ಲ. ಯೋಗಂಧನು ಶಿವನಂತೆ ಅವರೀರ್ವರ ಮುಂದೆ ನಿಂತನು. ಪ್ರಫುಲ್ಲನು ಕಂಪಿಸತೊಡಗಿದನು; ಮಾಲತಿಯಿಂದ ದೂರಾಗ ಲೆತ್ನಿಸಿದನು; ಆದರೆ ಮಾಲತಿಯ ಹಿಡಿತವನ್ನು ಬಿಡಿಸಿ ಕೊಳ್ಳಲಸಾಧ್ಯವಾಯಿತು. ಮಧುಕರನ ಕೋಪ ಮಿತಿಮೀರಿತು. ತನ್ನ ಕಣ್ಮುಂದೆಯೇ ತನ್ನ ಮಗಳು ಪರಪುರುಷನೊಡನೆ ಸಲಿಗೆಯಿಂದಿರುವುದನ್ನು ಕಂಡರೆ— . . . ? ಒಂದೆರಡು ಕ್ಷಣಗಳವರೆಗೆ ಅವನ ಬಾಯಿಯಿಂದ ಸೊಲ್ಲು ಹೊರಡಲಿಲ್ಲ. ಹುಲಿಯಂತೆ ಅವರನ್ನು ದಿಟ್ಟಿಸಿ ನೋಡತೊಡಗಿದನು. ಪ್ರಫುಲ್ಲನು ಹರಿಣದಂತೆ ಕಾಣತೊಡಗಿದನು. ಮಾಲತಿಯು ಶಿಲೆಯಂತೆ ನಿಂತಿದ್ದಳು.

"ಮಾಲತಿ, ಇಂದು ಕರುಣೆಯಿಂದ ನಾನು ನಿನಗೆ ಕೊಟ್ಟ ಸಲಿಗೆಯ ಪರಿಣಾಮವೇ?" ಮಾಲತಿಯು ಮೌನ.

"ಮಾಲತಿ, ಬಾಯಿತೆರೆ. ನೀನು ವಿಧವೆ; ಕುಲ ಶೀಲೆ. ಕುಲಟೆಯಲ್ಲ; ಸೂಳೆಯಲ್ಲ". "ಅಹುದು, ನಾನು ಕುಲಟೆಯಲ್ಲ, ಸೂಳೆಯಲ್ಲ."

"ಅಹುದು? — ಹಾಗಾದರೆ ಇದು ಅಂಥವರಿಗೊಪ್ಪುವ ನಡೆಯೇ?"

ಮಾಲತಿಯು ಮೌನ.

"ಮಾಲತಿ, ಬೇಗ ನುಡಿ—ನನ್ನ ತಾಳ್ಮೆಯನ್ನು ಕೆಡಿಸಬೇಡ. ನಿನ್ನ ಕಣ್ಮುಂದೆಯೇ ಈ ನಾಯಿಯನ್ನು ಒದ್ದು ಓಡಿಸುವೆನು."

"ಮಾತನಾಡಬೇಕೆ? ಅದು ನಿನಗೆ ರುಚಿಸದು — ಆದರೂ ಮಾತನಾಡುವೆ . . . . ನಾನು ನನ್ನ ಪ್ರಪುಲ್ಲನನ್ನು ಪ್ರೀತಿಸುತ್ತಿರುವೆ. ಅವನು ನನ್ನ ಗಂಡನು. ನಾನು ವಿಧವೆಯಲ್ಲ ಸಧವೆ . . . ."

ಯೋಗಂಧನ ಪಾಲಿಗೆ ಬೇರೆ ಸಿಡಿಲು ಬೇಕೆಂದಿಲ್ಲ.

"ಮಾಲತಿ, ಏನು ನೀನು ಸಧವೆಯೇ? ಇವನು ನಿನ್ನ ಗಂಡನೇ? ನಿನಗೆ ಮೊದಲೊಬ್ಬ ವಿವಾಹಿತ ಪತಿಯಿರುವನೆಂಬುವು ತಿಳಿದಿಲ್ಲವೇ?"

ಇಷ್ಟರಲ್ಲಿ ಈ ಗದ್ದಲವು ತಾರೆ, ಅವಳ ಅತ್ತೆ, ಅಣ್ಣ ಇವರನ್ನು ಅಲ್ಲಿಗೆ ಆಕರ್ಷಿಸಿಬಿಟ್ಟಿತು.

"ಅಪ್ಪಾ, ಇದೇ ನನ್ನ ಪ್ರಥಮವಿವಾಹ. ಮೊದ

ಲಾದ ಮದುವೆ ನನಗಲ್ಲ. ಅದನ್ನು ಮಾಡಿಸಿದವರಿಗೆ. ಮೊದಲೊಬ್ಬನ ಬಳಿ ನೀವು ನನ್ನನ್ನು ಕುಳ್ಳಿರಿಸಿದಿರಿ. ಅವನನ್ನು ನಾಲ್ಕು ದಿನಗಳವರೆಗೆ ತಲೆಬಗ್ಗಿಸಿದ ನಾನು ಕಾಣಲೂ ಇಲ್ಲ. ಕಂಡಾಗ ಪ್ರೀತಿಸಲೂ ಇಲ್ಲ. ಅವನು ಬದುಕಿದ್ದಾಗಲೇ ನನ್ನ ಪತಿಯೆಂದು ನಾನವನನ್ನು ತಿಳಿದಿರಲಿಲ್ಲ. ಆಗ ನನಗೆ ಪ್ರೇಮವೇ ಏನೆಂದು ತಿಳಿದಿರಲಿಲ್ಲ ಹೀಗಿರಲು ಅವನು ಪತಿಯೆಂಬ ಕಲ್ಪನೆಯು ಹೇಗಾಗಬೇಕು? ಅಂಥ ಒಂದು ಅಪರಿಚಿತ ವ್ಯಕ್ತಿಯ ಮರಣದಿಂದ ನಾನು ವಿಧವೆಯಾಗುವೆನೇ?"

ಇನ್ನು ಮಧುಕರನ ತಾಳ್ಮೆ ಮುಗಿಯಿತು. ಅವನಿನ್ನು ಬಾಯಿಯಿಂದ ಮಾತಾಡಲಾರನು. ಕೈಯನ್ನೆತ್ತಿ ಮಗಳ ತಲೆಯಮೇಲೆ ಉಕ್ಕಿನ ಕೊಡಲಿಯಂತೆ ಇಳಿಸಿದನು. ಎರಡನೆಯ ಪ್ರಹರವು "ಜಾರ ಪ್ರಫುಲ್ಲನಿಗೆ." ನಡುವೆ ಮಹೇಶನು ಬಾರದಿದ್ದರೆ—ಪ್ರಫುಲ್ಲನ ಉತ್ತರಕ್ರಿಯೆಯು ಅಂದೇ ನಡೆಯುತ್ತಿತ್ತು. ಅವನಾಕ್ಷಣವೇ ಅಲ್ಲಿಂದ ಪರಾರಿಯಾದನು. ಮಾಲತಿಯು ಮಲಗಿದ್ದಳು. ಅವಳ ಬಳಿ ಕಣ್ಣೀರನ್ನು ಕರೆಯುತ್ತಿರುವ ತಾರೆ, ಅವಳ ತಾಯಿ ಶಾರದೆಯರಿದ್ದರು. ಯೋಗಂಧನು ಅಲ್ಲಿ ನಿಲ್ಲಲಾರದೆ ಮಗಳಿಗೊಂದು ಒದೆಯನ್ನು ಕೊಡಲು ಕಾಲೆತ್ತಿದನು. ತಪ್ಪಿಸಲು ಬಂದ ಶಾರದೆಗೆ ಆ ಏಟುಬಿದ್ದು ಅದರ ಸವಿಯೆಷ್ಟೆಂದು ಮನಗಂಡಳು. ಯೋಗಂಧನು ಕೊಠಡಿಯಿಂದೆದ್ದು ಹೋದನು.

ಅವನ ಜೀವನದಲ್ಲಿ ಇಂಥ ಸಿಟ್ಟು ಬಂದಿತ್ತೋ ಇಲ್ಲವೋ.

ಶಾರದೆಯ ಭೀತಿ ಈಗ ಅಷ್ಟಿಷ್ಟಲ್ಲ. ಮಗಳು ಬದುಕಿರುವಳೋ ಸತ್ತಿರುವಳೋ ಎಂದವಳಿಗೆ ತಿಳಿಯದು. ಮಹೇಶನು ಸ್ವಲ್ಪ ನೀರನ್ನು ತಂದು ಅವಳ ಕಣ್ಣೊರಸಿದನು. ಬಾಯಿಗಿಷ್ಟು ನೀರನ್ನು ಬಿಟ್ಟನು. ತುಸುಹೊತ್ತಿನ ಮೇಲೆ ಅವಳಿಗೆ ಎಚ್ಚರವಾಯಿತು. ಸುತ್ತ—ಅಣ್ಣ, ತಾಯಿ, ನಾದಿನಿಯರು ಕರುಣೆಯಿಂದ ಅವಳನ್ನು ನೋಡುತ್ತಿದ್ದರು. ಅವಳ ತಲೆಯು ಶಾರದೆಯ ತೊಡೆಯಮೇಲಿತ್ತು. ಅವಳ ಕಾಲುಗಳ ಬಳಿಯಲ್ಲಿ ತಾರೆ ಇದ್ದಳು. ಅಣ್ಣನು ಗಾಳಿಬೀಸುತ್ತಿದ್ದನು. ಅವಳಿಗೆ ತಿಳಿವು ಒಂದೊಡನೆ ಅವಳ ಬಾಯಿಯಿಂದ ಹೊರಟ ಪ್ರಥಮ ಉದ್ಗಾರವೆಂದರೆ—"ಅಮ್ಮಾ, ನಾನು ಇನ್ನಾದರೂ ವಿಧವೆಯಲ್ಲ. ನನ್ನ ಗಂಡ ಪ್ರಫುಲ್ಲನು ಜೀವಂತನಾಗಿರುವನು" ಎಂಬುದು. ಅದಕ್ಕೆ ಯಾರು ಏನು ಉತ್ತರವನ್ನು ಕೊಡಬೇಕು? ತಾಯಿಯು ಬಗೆಬಗೆಯಿಂದ ಮಗಳಿಗೆ ಬುದ್ಧಿವಾದವನ್ನು ಹೇಳಿದಳು. ಸ್ತ್ರೀಧರ್ಮವನ್ನೂ, ಅದರಲ್ಲೂ ವಿಧವೆಯ ಧರ್ಮವನ್ನೂ ಬೋಧಿಸಿದಳು. ಅದಕ್ಕೆ ಮಾಲತಿಯ ಉತ್ತರವು ಒಂದೆ—"ಪ್ರಫುಲ್ಲನನ್ನು ಬಿಟ್ಟು ಅನ್ಯರನ್ನು ನಾನಾಗಿ ಪ್ರೇಮದಿಂದ ವರಿಸಿದವಳಲ್ಲ. ಅವನಿಂದು ಬದುಕಿರುವನು"—ಎಂದು. ಮಹೇಶನು—"ಅಮ್ಮಾ, ಮಾಲತಿಯ ಮಾತಿನಲ್ಲಿ ಅರ್ಥವಿಲ್ಲೆಂದು ತಿಳಿಯಬೇಡ.

ಅವಳಿಗೆ ಪ್ರೇಮವೇನೆಂದು ತಿಳಿಯುವ ಮೊದಲಾದ ಬಂಧನವು ಶಾಸ್ತ್ರೋಕ್ತವಾಗಿ ನಡೆದಿದ್ದರೂ, ದಾಂಪತ್ಯ ಧರ್ಮದ ದೃಷ್ಟಿಯಿಂದ ಸರಿಯಾದುದಲ್ಲ" ಎಂದನು. "ಮಹೇಶಾ, ಏನು ಹುಚ್ಚು ಮಾತನಾಡುವೆ? ಮುಂಡೆಗೆ ಮದುವೆಯಾಗಬೇಕೆನ್ನುವೆಯಾ?" ಎಂದು ಶಾರದೆ ಕೂಗಿದಳು. "ಮುಂಡೆ" ಎಂಬ ಶಬ್ದವು ಮಾಲತಿಯ ಕಿವಿಗೆ ಕಾದು ಕರಗಿಸಿದ ಸೀಸದಂತಾಯಿತು. ವಿಧವೆ ಎಂಬ ಶಬ್ದವೇ ಅವಳಿಗೆ ಅಸಹನೀಯವಾಗಿರಲು "ಮುಂಡೆ"— ಎಂಬ ನೀಚ, ಕ್ರೂರ, ಕಠಿಣ— ನಂಜನ್ನು ಅವಳು ಹೇಗೆ ತಾಳುವಳು. "ನಾನು ಮುಂಡೆಯಾದರೆ ನೀನೂ—" ಎನ್ನುವಷ್ಟರಲ್ಲಿ ತಾರೆಯು ಅವಳ ಬಾಯಿಯನ್ನು ಬಿಗಿಹಿಡಿದಳು. ತಾರೆಯ ಮೋರೆಯನ್ನು ಕಂಡು, ಹಿಂದಿನ ಘಟನೆಗಳೆಲ್ಲಾ ನೆನವಾಗಿ ಮಾಲತಿಯು ಎದೆಬಿರಿಯುವಂತೆ ಅಳತೊಡಗಿದಳು.

ಪ್ರಾಯಶಃ ಅವಳ ಅಳುವಿಗೆ ಇನ್ನು ಕೊನೆಯಿಲ್ಲವೆಂದು ಕಾಣುವುದು. ಅವರ ಮಾತುಕಥೆಗಳು ನಡೆಯುತ್ತಿರುವಷ್ಟರಲ್ಲಿ ಯೋಂಗಧನ ಸವಾರಿ . . . ತಿರುಗಿ ಬಂದಿತು. ಅವನ ಹಿಂದೆ- ನಾಪಿತನು ಬಂದಿದ್ದನು. ತಾರೆ, ಶಾರದೆಯರಿಗೆ ಆ ವ್ಯಕ್ತಿಯನ್ನು ಕಂಡು, ತನ್ನ ಸಲುವಾಗಿ ಅವನು ಬಂದಿದ್ದರೆ ಎಂಥ ವ್ಯಥೆಯಾಗುತ್ತಿತ್ತೋ ಅಷ್ಟೇ ವ್ಯಥೆಯಾಯಿತು. ಶಾರದೆಯು "ಬೇಡಿರಿ, ಬೇಡಿರಿ" ಎಂದು ಮೊರೆಯಿಟ್ಟಳು. ಯೋಗಂಧನಿಗೆ ಅವಳಮೇಲೂ ಸಿಟ್ಟಾಯಿತು. "ಏನು ಮಗಳು

ಹಾದರವಮಾಡಿದರೆ ನಿನಗೆ ಸಂತೋಷವೇ?" ಎಂದು ಕೇಳಿದನು.

"ಯಾರು—ಹಾಗೆ ಮಾಡಿದವರು? ಸುಮ್ಮನೆ ಮಾಲತಿಯ ಮೇಲೆ ಸಿಟ್ಟಿನಿಂದ ಅನ್ಯಾಯವನ್ನು ಹೊರಿಸಬೇಡಿ. ಪಾಪದ ದುರ್ದೈವಿಯವಳು. ಗಂಡನನ್ನು ಕಳೆದುಕೊಂಡರೆ ಇಷ್ಟೆಲ್ಲ ಅನುಭವಿಸ ಬೇಕೇ?" ಎಂದು ಶಾರದೆ ನೋಡಿದಳು.

ಮೊದಲೇ ಕಾದ ಯೋಗಂಧನು ಈಗ ಕಿಡಿಕಿಡಿಯಾ ದನು. "ಕೇಳು. ಈ ಕ್ಷೌರಿಕನನ್ನು ಕೇಳು: ಊರವರು ಏನೆನ್ನುತ್ತಿರುವರೆಂದು. ನನಗೆ ಮಾತ್ರ ಇವರ ಪ್ರಣಯ ವಿಚಾರವು ಇಂದು ತಿಳಿದುದು. ಊರಲ್ಲಿ, ಪ್ರತಿಯೊಬ್ಬರ ಬಾಯಿಯಲ್ಲೂ ಮಾಲತಿಪ್ರಫುಲ್ಲರ ಸುದ್ದಿ ಯಿದೆಯಂತೆ."

"ಹಾದರ! ಅಪ್ಪಾ, ನಿನ್ನ ನಾಲಗೆಯು ಬೀಳ ಬಾರದೇ. ಹಾದರವಮಾಡಿದವರಾರು?" "ನೀನು— ಸಾಕು, ಕ್ಷೌರಿಕಾ, ಹೂಂ, ಅವಳನ್ನು ವಿಕೇಶಿಯನ್ನಾಗಿ ಮಾಡು." ಸರಿ ನಾಪಿತನು ತನ್ನ ಕ್ಷೌರಕತ್ತಿ, ಕತ್ತರಿ ಗಳನ್ನು ಸಜ್ಜುಗೊಳಿಸತೊಡಗಿದನು. ಮಹೇಶ ತಾರೆ ಶಾರದೆಯರು ಬಿಕ್ಕಿ ಅಳತೊಡಗಿದರು. ಯೋಗಂಧನು ಕಟುಕನಂತೆ ನಿಂತಿದ್ದನು. ಆಗ ಮಾಲತಿಯು?— ಅವಳು ಕ್ಷಾತ್ರವೀರ ರಮಣಿಯಂತೆ ನಗುತ್ತ ನಿಂತಿದ್ದಳು.

ನಾಪಿತನ ಸಿದ್ಧತೆಯಾಗಲು ಅವನೂ ಕಣ್ಣೀರನ್ನು ಕರೆದು—"ಬನ್ನಿ ತಾಯಿ!" ಎಂದನು. ಯೋಗಂಧನು "ಹೋಗು ಕುಳಿತುಕೋ—" ಎಂದು ಘರ್ಜಿಸಿದನು.

ಮಹೇಶನಿಗೆ ಇನ್ನು ಮುಂದಿನದನ್ನು ಕಾಣುವು ದಾಗಲಿಲ್ಲ. ಅವನು ತಾರೆಯನ್ನೆಳೆದುಕೊಂಡು ಹೊರ ಗೋಡಿದನು. ಶಾರದೆಯು ಗಂಡನ ಕಾಲಿಗೆರಗಿದಳು. 'ಮಗಳ ಮೇಲೆ ನಿಷ್ಠುರರಾಗಬೇಡಿ'—ಎಂದಳು. ಆದರೆ ಕೇಳುವವರಾರು? ಲೋಕಾಚಾರ, ಶಾಸ್ತ್ರ, ಸಮಾಜ—ಇವನ್ನು ಮೀರಿ ಯೋಗಂಧನಂತಹ ಯೋಗ್ಯಮನುಷ್ಯನು ವರ್ತಿಸಬಲ್ಲನೇ? ಅವನ ಪುರೋ ಹಿತರೇನೆಂದರು? ಮನೆಯಲ್ಲಿ ಸಕೇಶಿ ವಿಧವೆಯನ್ನಿರಿಸಿ ಕೊಂಡುದರಿಂದ ಊರವರೇನೆನ್ನುತ್ತಿರುವರು? ವಿಧ ವೆಯಾದವಳು ಯಾರೇ ಇರಲಿ, ಎಷ್ಟು ವಯಸ್ಸಿನವಳೇ ಇರಲಿ—ವಿಕೇಶಿಯಾಗಿ, ವಿರೂಪತಾಳಿ, ಆಮರಣ ಪರಿಯಂತ ಬ್ರಹ್ಮಚಾರಿಣಿಯಾಗಿರಬೇಡವೇ? ಶಾಸ್ತ್ರ ವಚನವದು. ಹಿರಿಯರಿಂದ ಪರಂಪರಾಗತವಾಗಿ ಬಂ ದುದು. ಅದನ್ನು ಮುರಿಯಲು ಈ ಮಾಲತಿಯು ಮುಂದಾಗುವಳೇ? ಅವಳು ಮುಂದಾದರೂ ಅವಳ ತಂ ದೆಯು, ಸಮಾಜಕ್ಕೆ ಆದರ್ಶನಾದ ತಂದೆಯು ಒಡಂಬ ಡುವನೇ? ಅವನು ತಿರುಗಿ ಮಗಳನ್ನು ಕಂಡು ಘರ್ಜಿ ಸುತ್ತಿರುವನು—"ಹೂಂ, ನಡಿ—ನಿನ್ನ ತಲೆ ಬೋಳಿ ಸಿದ ಹೊರತು ನಿನ್ನ ಸೊಕ್ಕಡಗುವುದಿಲ್ಲ". ಆಹಾ, ಎಂಥ ಇಂಪಾದ ಮಾತುಗಳು. ತಂದೆಯು ಮಗಳಿ ಗುಣಿಸುವ ಜೇನಿನಷ್ಟು ಮಧುರ. "ಏನು, ಕುಳಿತುಕೊ ಳ್ಳುವುದಿಲ್ಲವೇ? ನಿನ್ನ ಕೈಕಟ್ಟಿ ಕುಳ್ಳಿರಿಸುವೆನು."

ಬಡಶಾರದೆಯು ಈಗ ಸ್ಮೃತಿಶೂನ್ಯಳು!

"ಮಾಲತಿ, ತಿರುಗಿ ಪೆಟ್ಟು ತಿಂದು ಸಾಯಬೇಡ."

ಮಾಲತಿಯ ಆವೇಶವು ತಡೆಯದಾಯಿತು.

"ಯಾರು ನನ್ನನ್ನು ವಿರೂಪಗೊಳಿಸುವವರು? ಯಾರು ನನ್ನನ್ನು ವಿಧವೆಯೆನ್ನುವವರು? ಕ್ಷೌರಿಕಾ, ನಿನಗೆ ಜೀವದಾಸೆಯಿದ್ದರೆ ಹೊರಗೆ ನಡಿ. ಅಪ್ಪಾ ಮಗಳ ಕೈಯ್ಯಲ್ಲಿ ನೀನು ಸಾಯಬಾರದೆಂದಿದ್ದರೆ ಹಿಂದೆ ಸರಿ."

ಮಾಲತಿಯ ಕೈಯ್ಯಲ್ಲಿ ಝಳಪಿಸುವ ದೊಡ್ಡ ಚೂರಿಯು ಅಷ್ಟು ಕೆಲಸವನ್ನು ಅವರಿಂದ ಮಾಡಿಸಿತು. ಅವಳಿಂದು ಸಣ್ಣ ಇಲಿಯಲ್ಲ; ಹೆಣ್ಣು ಹುಲಿ!

## ೪. ಹುಲಿಯು ಪಂಜರದೊಳಿಲ್ಲ.

ಇಂದು ಮಾಲತಿಯೆಂದರೆ ನಿಜವಾಗಿಯೂ ಒಂದು ಹುಲಿ. ಅವಳನ್ನು ಮಾತನಾಡಿಸುವ ಸಾಹಸವು ಯಾರಿಗೂ ಇಲ್ಲ; ದಂಡಿಸುವವರು ಮೊದಲೇ ಇಲ್ಲ; ಸಲಿಗೆಯಿಂದ ಪ್ರೀತಿಸುವವರೂ ಇಲ್ಲ. ಪ್ರತಿಯೊಬ್ಬರಿಗೂ ಅವಳು ಅಸಾಮಾನ್ಯ ವ್ಯಕ್ತಿಯೆಂದು ತಿಳಿದುಬಂದಿದೆ. ಅಷ್ಟೇ ಅಲ್ಲ— ಅವಳ ಮನಸ್ಸಿನ ನಿರ್ಧಾರವನ್ನು ಮುರಿಯುವುದು ಅಸಾಧ್ಯವೆಂದೂ ತಿಳಿದಿದೆ. ಅವಳಿಂದು, ಹಸಿವೆಯಾದರೆ ಅಡುಗೆ ಮನೆಗೋಡುವಳು; ಅವಳನ್ನು ಕಂಡೊಡನೆಯೇ ಅವಳೇಕೆ ಬಂದಿರುವಳೆಂಬ ತಿಳಿವು ಅವರಿಗುಂಟಾಗಿ ಇಷ್ಟು ಅನ್ನವನ್ನು ಬಡಿಸುವರು; ಸರಿ, ಊಟವನ್ನು ಮುಗಿಸಿಕೊಂಡು ತಿರುಗಿ ತನ್ನ ಕೊಟಡಿಗೋ

ಡುವಳು. ಅವಳೊಡನೆಲ್ಲಾದರೂ ಸಲಿಗೆಯಿಂದ ಮಾತನಾಡುವವರಿದ್ದರೆ ಅದು ತಾರೆಯೊಬ್ಬಳೇ. ಅವಳೊಡನೆ ಮಾಲತಿಯು—"ವಿಧವೆಯರೆಂದರೆ ಪುರುಷರ ಗುಲಾಮರೇ? ಪಶುಗಳೇ. ಅವರ ಆಶೆ ಅನುರಾಗಗಳು ಅವರ ಪತಿಯ ಮರಣದೊಡನೆ ಒಮ್ಮೆಗೇ ಸುಟ್ಟು ಧ್ವಂಸವಾಗುವುವೇ? ಅವರಲ್ಲಿ ಕಾಮಾತುರತೆಯು ಇದ್ದರೆ ಅದನ್ನು ಬಲವಂತದಿಂದ ಮುರಿಯಲು ಬರುವುದೇ?" ಎಂದು ಕೇಳುವಳು. ತಾರೆಯು ಏನು ಉತ್ತರ ಕೊಡಬಲ್ಲಳು?

ಈಗ ಮಾಲತಿಯು ಮಹಡಿಯ ಮೇಲೆ ಕುಳಿತು ಒಬ್ಬಳೇ ಏನೇನೋ ಓದುತ್ತಿರುವಳು. ಒಂದು ಪುಸ್ತಕವನ್ನು ಬಿಡುವುದು, ಇನ್ನೊಂದನ್ನು ಹಿಡಿಯುವುದು. ಅವಳ ಮನವು ಪ್ರಫುಲ್ಲನ ಬರವನ್ನು ಹಾರೈಸುತ್ತಿದೆ; ಅವನು ತನ್ನಂತೆಯೇ ಧೀರನು, ತನ್ನನ್ನು ಕಾಣಲು ಬಾರದಿರನು, ಎಂಬುದವಳ ತಿಳಿವು. ಆದರೆ ಪ್ರಫುಲ್ಲನಿಗೆ ಆ ದಿನದ ಏಟನ ನೆನಪು, ಮರಣದ ತನಕ ಮರೆಯುವಂತಿಲ್ಲ. ಪಾಪದ ಹುಡುಗ! ನಾಲ್ಕು ದಿನಗಳವರೆಗೆ ಅವನ ತಲೆ ತಿರುಗುವಂತಿತ್ತು. ನೋವಿನಿಂದಲೂ, ಹಿಂದಿನ ಎಲ್ಲಾ ಘಟನೆಗಳ ದೆಸೆಯಿಂದಲೂ, ಅವನಾದರೂ ಒಂಟಿಯಾಗಿದ್ದಾಗಲೆಲ್ಲಾ ಅಳುತ್ತಿದ್ದನು. ಮಾಲತಿಯ ಬಳಿಗೆ ಹೋಗಿ ಅವಳನ್ನು ಸಮಾಧಾನಪಡಿಸಬೇಕೆಂದೂ ಯೋಚಿಸುತ್ತಿದ್ದನು. ಆದರೆ ಅವನ ಒಡಲಿನಲ್ಲಿ ಅಷ್ಟೊಂದು ಧೈರ್ಯದ ಗಾಳಿಯು ಬೀಸಲೇ ಇಲ್ಲ.

ಸರಿ, ಓದುತ್ತಿರುವ ಮಾಲತಿಯಲ್ಲಿಗೆ ಹೋಗೋಣ. ಸೀತಾವನವಾಸವನ್ನು ಅವಳು ಓದುತ್ತಿರುವಳು. ಅರ್ಥವನ್ನು ಸಹ ಅವಳಿಗೆ ಓದುವುದಕ್ಕಾಗಲಿಲ್ಲ. 'ಶ್ರೀ ರಾಮುಚಂದ್ರನು ಇಂಥ ಮೂರ್ಖನಾದರೆ ಅವನ ಹೆಸರನ್ನು ಸಹ ನಾನು ಎತ್ತುವಂತಿಲ್ಲ.'—ಎಂದು ಪುಸ್ತಕವನ್ನೆಸೆದುಬಿಟ್ಟಳು. ಸೀತೆಗಾಗಿ, ದೀರ್ಘಕಾಲ ದಣಿದು, ಯುದ್ಧಮಾಡಿ, ಅವಳು ಪವಿತ್ರಳೆಂದು ತಿಳಿದ ಬಳಿಕವೂ ಅಗಸನೊಬ್ಬನ ಮಾತಿಗಾಗಿ ಅವಳನ್ನು ಪರಿತ್ಯಾಗ ಮಾಡುವುದೆಂದರೆ—? ಸೀತೆಯು ಅವನ ಪಾಲಿಗೆ ದಾಸಿಗಿಂತಲೂ ಕಡಿಮೆಯಾಯಿತು. ಕಳ್ಳನಿಗೂ ನ್ಯಾಯಸಿಕ್ಕುವ ಆ ಕಾಲದಲ್ಲಿ ಮದುವೆಯಾದ ಹೆಂಡತಿ ಸೀತಾದೇವಿಯನ್ನು ನ್ಯಾಯ ಪಕ್ಷಪಾತಿ ರಾಮುಚಂದ್ರನು ಕಾಡಿಗೆ ಕಳುಹಿಸುವುದೆಂದರೆ . . . . ? ಹೀಗೆಲ್ಲಾ ಯೋಚನೆಗಳು ಅವಳಿಗೆ ಬಂದುವು. ಅಷ್ಟಕ್ಕೆ ತಾರೆಯು ಅಲ್ಲಿಗೆ ಬಂದಳು. ಬಂದವಳೊಡನೆ—

"ತಾರಾ, ಈ ರಾಮನೆಂಥಾ ಮೂರ್ಖನೇ: ಅಗಸನ ಮಾತನ್ನು ಕೇಳಿ ಹೆಂಡತಿಯನ್ನು ಮನೆಯಿಂದ ಹೊರಕ್ಕೆ ಅಟ್ಟಲು. ರಾಮುಚಂದ್ರನೇ ವನವಾಸಕಾಲದಲ್ಲಿ ಶೂರ್ಪನಖಿಯೊಡನೆ ಅನ್ಯಥಾ ವರ್ತಿಸಿದನೆಂದು ಇನ್ನೊಬ್ಬ ಅಗಸನು ದೂರು ಕೊಟ್ಟಿದ್ದರೆ ಸೀತೆಯೇನು ಮಾಡಬೇಕಿತ್ತು?"—ಎಂದಳು. ತಾರೆಯು ಉತ್ತರವನ್ನು ಕೊಡುವ ಬದಲಿಗೆ "ಮಾಲತಿ, ಅದು ಹಾಳಾಗಲಿ. ಅತ್ತೆಯವರು ಊರ್ಧ್ವಶ್ವಾಸಬಿಡುತ್ತಿರುವರು. ಬಾ,

ಬಾ, ಅವರಿನ್ನು ಬಹಳಹೊತ್ತು ಬದುಕುವಂತಿಲ್ಲ." ಎಂದಳು. ಮಾಲತಿಯು ಓಡೋಡಿ ಹೋದಳು. ಆ ದಿನ ಶಾರದೆಯ ಬೇನೆಯು ತೀರ ಕಠಿಣ ರೂಪ ವನ್ನು ಹೊಂದಿತ್ತು. ಅವಳ ಕಾಹಿಲೆಗೆ ಮಾಲತಿಯೇ ಕಾರಣ. ಅವಳೇ ಎಂದರೆ ಅವಳೇ ಅಲ್ಲ. ಆ ದಿನ ಮಧುಕರನ ಮುಂದೆ ಅವಳಿಂದಾದ ನಾಟಕ. ಮಗಳ ಪಾಲಿನ ಶೋಕವೆಲ್ಲಾ ಅವಳನ್ನು ಆವರಿಸಿತು. ಅಂದಿ ನಿಂದ ಅವಳು ಒಂದು ತುತ್ತು ಅನ್ನವನ್ನೂ ಮುಟ್ಟಲಿಲ್ಲ. 'ತಾನೆಲ್ಲಾದರೂ ವಿಧವೆಯಾದರೆ' - ಎಂಬ ಕಲ್ಪನೆಯು ಅವಳಿಗೆ ಬಂದಿತು. ಆ ಪ್ರಸಂಗವನ್ನು ತಪ್ಪಿಸಿಕೊಳ್ಳ ಲು ಅವಳು ಯತ್ನಿಸುತ್ತಿರುವಂತೆ ತೋರುವುದು. ಈಗ ಅವಳು ಹಾಸುಗೆಯ ಮೇಲೆ ಮಲಗಿಕೊಂಡು ದೊಡ್ಡ ದೊಡ್ಡ ಉಸಿರುಗಳನ್ನು ಬಿಡುತ್ತಿರುವಳು. ಏನೋ ಸಣ್ಣ ಪುಟ್ಟ ಕಾಹಿಲೆಯೆಂದು ಯಾರೂ ಗಮನತೆಗೆದು ಕೊಳ್ಳಲಿಲ್ಲ. ಈಗಿನ್ನು ತಾನು ಬಹಳ ಸಮಯ ಬದುಕು ವುದಿಲ್ಲವೆಂದು ಹೊಳೆದುದರಿಂದ, ಮಾಲತಿಯನ್ನು ಕಾಣುವ ಆಸೆಯಾಗಿ ಅವಳನ್ನು ಬಳಿ ಕುಳ್ಳಿರಿಸಿಕೊಂ ಡಿರುವಳು. ಅವಳ ಕಾಲಬುಡದಲ್ಲಿ ಸೊಸೆ ಇರುವಳು. ಕಾಹಿಲೆಯ ಭೀಕರತೆಯ ಅರಿವು ಇಲ್ಲದ ಮಧುಕರ ಮಹೇಶರರು, ಮನೆಯಲ್ಲಿ ಸಹ ಇದ್ದಿರಲಿಲ್ಲ.

ತಾರೆಯು ಮಾಲತಿಯನ್ನು ಕರೆದುತಂದೊಡನೆ ಯೇ ಅವಳ ಬಾಡಿದ್ದ ಮುಖವು ಅರಳಿತು. "ಮಗೂ, ಬಾ ಕುಳಿತುಕೋ" ಎಂದು ಕರೆದುಕುಳ್ಳಿರಿಸಿಕೊಂ

ಡಳು. ಮಾಲತಿಯು ಮಾತೃಹೃದಯವನ್ನು ಅರಿಯ ಬಲ್ಲವಳಾದುದರಿಂದ, ಅವಳೀದುಃಖಮಯ ಪರಿಸ್ಥಿತಿಯಲ್ಲಿ, ಅವಳೆರಡು ಕೈಗಳನ್ನು ತನ್ನ ಕೈಗಳಲ್ಲಿರಿಸಿ ಕೊಂಡಳು. ತಾನವಳಿಗೆ ಹೇಳಿದ "ನಾನು ಮುಂಡೆಯಾದರೆ ನೀನು . . ." ಎಂಬ ನುಡಿಗಳ ನೆನಪಾಯಿತು. "ಅಮ್ಮಾ, ನನ್ನನ್ನು ಕ್ಷಮಿಸು" ಎಂದವಳು ಅತ್ತಳು. ಶಾರದೆಗೆ ಮದುವೆಯ ದಿನದಿಂದ ಹಿಡಿದು ಎಲ್ಲಾ ವಿಷಯಗಳು ನೆನಪಾದುವು. ನಿರಪರಾಧಿ ಬಾಲಿಕೆಯ ಉಂಡುಡುವ ಆಸೆಗಳಿಗೆ ತಾನು ಅಡ್ಡಾದ ಬಗ್ಗೆ ಅವಳಿಗೂ ದುಃಖವಾಯಿತು. ಅವಳೂ ತನ್ನ ಮಗಳಲ್ಲಿ ಕ್ಷಮಾಯಾಚನೆಯನ್ನು ಮಾಡಿದಳು. ಅಂದು ತಾರೆ ಮಾಲತಿಯರು ಒಂದಾದಂತೆ ಈಗ ತಾಯಿಮಕ್ಕಳು ಒಂದಾಗಿರುವರು. ಇನ್ನು ಹಾಗೆಯೇ ತಾನು ಬಲುಹೊತ್ತು ಇರಲಾರಳೆಂಬ ತಿಳಿವು ಅವಳಿಗಿದ್ದುದರಿಂದ ಆವಳು ಮನಸ್ಸಿನಲ್ಲಿದ್ದುದನ್ನು ತನ್ನ ಮಗಳಿಗೆ ಹೇಳಲು ಯತ್ನಮಾಡಿದಳು.

"ತಾರಾ, ಅವರಿಲ್ಲವಷ್ಟೆ"

"ಇಲ್ಲ."

"ಮಾಲತಿ, ನಿನ್ನ ವ್ಯಥೆ ಎಂಥದಿರಬಹುದೆಂಬ ಅನುಭವವು ನಾಲ್ಕಾರು ದಿನಗಳಿಂದ ನನಗಾಗುತ್ತಿದೆ. ಮಗು, ನೀನು ಪ್ರಫುಲ್ಲನನ್ನು ಪ್ರೀತಿಸುತ್ತಿರುವುದು ನಿಜವೇ?"

"ಅಹುದು."

"ನೀನು ಜಾರೆಯೆನ್ನುವುದು ನಿಜವೇ?"

ಬೇರೆ ಸಮಯವಾಗಿದ್ದರೆ ಮಾಲತಿವ್ಯಾಘ್ರಿಣಿಯು ಏನು ಉತ್ತರವೀಯುತ್ತಿದ್ದಳೆಂದು ನೀವೇ ಎಣಿಸಬಲ್ಲಿರಿ.

"ಅಮ್ಮಾ ನನ್ನಲ್ಲಿ . . . ನಂಬುಗೆಯಿದ್ದರೆ ನಂಬು. ನಾನು ಆ ಹಾದಿಗೆ ಇಳಿದವಳಲ್ಲ. ಪ್ರಫುಲ್ಲ ನನ್ನು ಪ್ರೀತಿಸುತ್ತಿರುವದು ನಿಜ. ಅವನು ನನ್ನ ಪ್ರಾಣವನ್ನುಳಿಸಿದವನು."

"ಅದು ಹೇಗೆ?"

ಮಾಲತಿಯು ಎಲ್ಲಾ ವಿಚಾರವನ್ನು ತಿಳಿಸಿದಳು.

"ಹಾಗಾದರೆ, ಪ್ರಫುಲ್ಲನು ನಿನ್ನನ್ನು ಪ್ರೀತಿಸುವುದು ನಿಜವೇ?"

"ಹಾಗೆಂದು ನನ್ನ ವಿಶ್ವಾಸ."

"ಮಗೂ, ಯಜಮಾನರೇನೆನ್ನುವರೋ— ಅಂತು ನನ್ನ ಪಾಲಿಗೆ—ನೀನು ಪ್ರಫುಲ್ಲನ ಪತ್ನಿಯಾಗಿರುವುದು ಲೇಸೆಂದು ತೋರುವುದು."

"ಅಮ್ಮಾ, ಪರಿಹಾಸ್ಯ ಮಾಡುವೆಯಾ?"

"ಮಗೂ ಸಾವಿನ ಗಳಿಗೆಯು ಪರಿಹಾಸ್ಯದ ಗಳಿಗೆಯೇ? ನೀನು ಅವನನ್ನು ವಿವಾಹವಾಗು."

"ಅಪ್ಪನು ಒಡಂಬಡುವನೇ? ಸಮಾಜವು ಒಡಂಬಡುವುದೇ? ಅದು ಸಾಧ್ಯವೇ?"

"ವಿಧವೆಯರ ಗೋಳನ್ನು ಕಣ್ಮುಚ್ಚಿ ಕಾಣುವ ನಿರ್ದಯ ಸಮಾಜವು ಒಡಂಬಟ್ಟರೇನು? ಒಡಂಬಡದಿದ್ದರೇನು? ನಿನಗೂ ಪ್ರಫುಲ್ಲನಿಗೂ ನನ್ನ ಆಶೀರ್ವಾದವಿರಲಿ."

ಅಲ್ಲಿಗೆ ಅವಳ ನಯನಗಳಿಂದ ಗಂಗಾಯಮುನೆಯರೇ ಹೊರಟರು. ತಾರೆ, ಮಾಲತಿ ಎಲ್ಲರೂ ಶಿಲಾಮೂರ್ತಿಗಳಂತೆ ಕುಳಿತಿದ್ದರು.

ಹತ್ತು ಕ್ಷಣಗಳು ಸಂದುವು. ಶಾರದೆಯ ಶರೀರವು ತಣ್ಣಗಾಗುತ್ತ ಬಂತು. ಅವಳ ಕೈಗಳು ಮಾಲತಿಯ ಕೈಗಳಲ್ಲಿಯೇ ಇನ್ನೂ ವಿಶ್ರಮಿಸುತ್ತಿವೆ. ಆದರೆ ಈಗ ಒಮ್ಮೆಗೇ ಮಾಲತಿಗೆ ಕೈಯಲ್ಲಿ ಹಾವು ಕುಳಿತಂತೆ ಕಾಣಿಸಿತು. ಅಷ್ಟು ತಣ್ಣಗೆ! ಚಕಿತಳಾಗಿ ತನ್ನ ಕೈಗಳನ್ನು ದೂರ ಸೆಳೆದಳು. ಶಾರದೆಯ ಕೈಗಳೆರಡು ಕಟ್ಟಿಗೆಯ ತುಂಡುಗಳಂತೆ ಮಂಚಗಳ ಮೇಲೆ ಬಿದ್ದುವು. ಅವಳ ಕೆಲಸವು ಈ ಪ್ರಪಂಚದಲ್ಲಿ ಇನ್ನು ಉಳಿದಿಲ್ಲ. ಮಗಳನ್ನೂ ಭಾವಿ ಜಾಮಾತನನ್ನೂ ಅವಳು ಹರಸಿ ಅಮರಲೋಕಕ್ಕೆ ಹೊರಟೇಹೋದಳು.

ಒಂದು ತಾಸಾಯಿತು, ಎರಡು ತಾಸುಗಳು ಸಂದುವು, ಮೂರೂ ಕಳೆದುವು. . . ಯಾರೂ ಕದಲುವುದಿಲ್ಲ. ಸಂಜೆಯಾಯಿತು. ಕತ್ತಲೆಯ ಕಿರುಮನೆಯಲ್ಲಿ ದೀಪ ಉರಿಸಬೇಕೆಂಬ ತಿಳಿವು ಯಾರಿಗೂ ಇರುವುದಿಲ್ಲ. ಪ್ರಾಯಶಃ ತಿರುಗಿ ಶಾರದೆಯ ಮನೆಯಲ್ಲಿ ದೀಪ ಉರಿಯದೆಂಬುದರಿಂದಲೋ ಏನೋ.

ಆ ನಾಲ್ಕು ತಾಸುಗಳ ನಿಶ್ಶಬ್ದವು ಒಮ್ಮೆಗೇ ಮಧುಕರ ಮಹೇಶರ ಕಾಲುಸಪ್ಪಳದಿಂದ ಮುರಿಯಲ್ಪಟ್ಟಿತು ಕಿರುಮನೆಯೊಳಕ್ಕೆ ಅವರು ಗಾಬರಿಯಿಂದ

ಬಂದರು. ನೋಡುವರೇನನ್ನು. . .? ಎಲ್ಲವೂ ನಿಶ್ಶಬ್ದ; ಮರಣದಷ್ಟೇ ನಿಶ್ಶಬ್ದ.

ಸೂತಿಕದ ಮನೆಯಲ್ಲಿ ನಾಲ್ಕಾರು ದಿನಗಳು ಕಳೆದುವು. ಎಲ್ಲರ ಮೋರೆಯ ಮೇಲೂ ಮರಣವು ನಲಿಯುತ್ತಿದ್ದಂತೆ ಕಾಣಿಸುತ್ತಿದೆ. ಮೊದಲು ಈ ಪಾಶದಿಂದ ತಪ್ಪಿಸಿಕೊಂಡವನೆಂದರೆ ಮಧುಕರನು. ಅವನಿಂಥ ವ್ಯಥೆಗಳನ್ನು ಕಟ್ಟಿಕೊಂಡು ತನ್ನ ಪ್ರಪಂಚವನ್ನು ಸಾಗಿಸಲಾರನು. ಮನೆಗೆ ದಿನನಿತ್ಯ ಜನರು ಮೇಲಿಂದ ಮೇಲೆ ಬರುತ್ತಿರುವರು; ಹೋಗುತ್ತಿರುವರು. ಅವರೊಡನೆ ಅವನು ಸುಮ್ಮನೆ ಕುಳಿತಿರಬಲ್ಲನೇ? ಎಂಟನೇ ದಿನವು ಸಲ್ಲುವಷ್ಟರಲ್ಲಿ ಮಧುಕರನು ಮುಂಚಿನ ಮಧುಕರನೇ ಆದನು. ಶಾರದೆಯ ಮರಣವು ಕೇವಲ ಅವನ ಸ್ವಪ್ನರಾಜ್ಯದ ಒಂದು ವಸ್ತುವಾಯಿತು.

ಮಹೇಶನು ಅಷ್ಟು ಪ್ರವೀಣನಲ್ಲ ಅವನನ್ನಿನ್ನೂ ಶೋಕವು ಬಾಧಿಸುತ್ತಿದೆ. ಒಂದು ದಿನ—ಅದೇ ಅವನು ಮರಣದ ಬಳಿಕ ತಾರೆಯೊಡನೆ ಪ್ರಥಮ ಬಾರಿಗೆ ಮಾತನಾಡಿದ ದಿನವೆಂದು ತೋರುವುದು.— "ತಾರೆ, ಅಮ್ಮನು ಸಾಯುವಾಗ ನೀವಿಬ್ಬರೂ ಬಳಿಯಲ್ಲಿದ್ದಿರಷ್ಟೆ"

"ಅಹುದು. ಪಾಪ! ತೀರ ಸಂಕಟದಿಂದ ನರಳಿ ಸತ್ತರು"

"ಅದು ನನಗೆ ತಿಳಿದೇ ಇದೆ. ಅವಳು ಮಾಲತಿಯ ವ್ಯಥೆಯನ್ನು ಕಂಡು ಸತ್ತಳು. ಇರಲಿ, ಸಾಯುವ

ಗಳಿಗೆಯಲ್ಲಿ ಏನನ್ನೂ ಹೇಳಲಿಲ್ಲವೇ?" ತಾರೆಯು ತನ್ನ ಗಂಡನಿಗೆ ಎಲ್ಲ ವಿಷಯಗಳನ್ನು ಕಣ್ಣೀರಿನೊಂದಿಗೆ ಹೇಳಿದಳು.

"ನಾದಿನಿಯು ತಿರುಗಿ ಮದುವೆಯಾಗಲು ಬಾರದೇ?"

"ಆಗಲು . . . ಬಾರದೆಂದರೇನು? ಬರುವುದೆಂದರೇನು? ಮದುವೆಯಾದರೆ ಸಮಾಜವಿಲ್ಲ; ಸಮಾಜವಿದ್ದರೆ ಮದುವೆಯಿಲ್ಲ—"

"ಹಾಗಿದ್ದು ಮದುವೆಯೇನು? ಆದರೆ ಅತ್ತೆಯವರು—ವಿಧವೆಯರ ದುಃಖವನ್ನು ಎಣಿಸದ ಸಮಾಜಕ್ಕೆ ನೀನು ಅಂಜುವಿಯೇಕೆ? ಎಂದಿದ್ದರು."

"ನಿಜ. ಒಮ್ಮೆ ಪ್ರೇಮವು ಬೆಳೆಯಿತೆಂದರೆ ಈ ಕಟ್ಟಲೆಯ ತೆರೆಯು ಪ್ರೇಮಿಹೃದಯಗಳನ್ನು ಬೇರೆಯಿರಿಸಲಾರದು. . . . ." ಓಹೋ, ಮಾಲತಿಯು ಬಂದಳು.

ಅವಳು ಬಂದು, ಮಾತಿನಲ್ಲಿ ಮಗ್ನನಾಗಿದ್ದ ತನ್ನ ಅಂಣನನ್ನು,

"ಏನು ಮಾತನಾಡುತ್ತಿದ್ದಿರಿ . . ." ಎಂದು ಕೇಳಿ ಮೆಲ್ಲಗೆ ನಕ್ಕಳು.

"ಏನಿಲ್ಲ"

"ಏನಿಲ್ಲ—" ಎಂಬ ವಿಷಯದಲ್ಲಿ ಮಾತನಾಡಲು ಬರುವುದೇ?" ಹೂಂ, ಆಯಿತು ಮಾತನಾಡಿರಿ. ನಾನೇಕೆ? ಎಂದು ಹೊರಡಲುದ್ಯುಕ್ತಳಾದಳು.

"ತಂಗೀ, ನಿಲ್ಲು ನಿಲ್ಲು. ತಾಯಿಯು ನಿಮ್ಮ ಮುಂದೆ ಆಡಿಹೋದ ಕೊನೆಯ ಮಾತುಗಳನ್ನು ಕುರಿತು ಆಡಿ ಕೊಳ್ಳುತ್ತಿದ್ದೆವು."

ಮಾಲತಿಯು ಮೌನ. ತಾಯಿಯ ಸೂತಿಕವು ನಿಜವಾಗಿಯೂ ಅವಳನ್ನು ಆವರಿಸಿತ್ತು. ಈಗವಳಿಗೆ ಆ ಎಂಟು ದಿನಗಳ ಬಳಿಕ ಪ್ರಥಮ ಬಾರಿಗೆ ಪ್ರಫುಲ್ಲನ ನೆನಪಾಯಿತು. "ಪಾಪ, ಎಂಥ ಪಟದು!" ಎಂದಳು.

"ಮಾಲತಿ, ತಾಯಿಯ ಮಾತಿನಂತೆ ನೀನು ನಡೆ ಯಲೇ ಬೇಕು. . . ."

"ಮಾವನವರು. . . . . ."

"ಅವರನ್ನು ಕೇಳಿಯೇ ಉಪಯೋಗವಿಲ್ಲ ಅವರೆಲ್ಲ ಪರರ ಮೇಲೆ ಶಾಸ್ತ್ರವನ್ನು ಹೊರಿಸಬಲ್ಲವರು. ತಮ್ಮ ಮೇಲೆ ಹೊರಿಸಿಕೊಳ್ಳಲು ಸಿದ್ಧರಿಲ್ಲದವರು. ಇಂದು ಶಾಸ್ತ್ರರಚನೆಯ ಅಧಿಕಾರವು ಪುರುಷನಿಗೆ ದೊರೆತಿದೆ."

"ಅಂದರೆ . . . .?"

"ತಂದೆಗಿಂದು ಇದರಲ್ಲಿ ಬಾಯಿಹಾಕುವ ಅಧಿಕಾರ ವಿಲ್ಲ. ಕಳ್ಳನಾದವನು ಪರರಿಗೆ ಕಳಬೇಡ ಎಂದು ಹೇಳಿದರೆ ಎಷ್ಟು ನ್ಯಾಯ . . . .?"

"ಅಂದರೆ . . . .?"

"ಈಗಾಗಲೇ ಅವನು ಪುನರ್ವಿವಾಹದ ಯೋಚನೆ ನಡೆಯಿಸುತ್ತಿರುವನು. ಈ ೫೦ನೆಯ ವಯಸ್ಸಿನಲ್ಲಿ. ಯೋಚನೆಯೇನು? ನಾಳೆ ೧೧ನೇ ದಿನವೇ ಕಿಶೋರ ರಾಯರ ಮಗಳೊಡನೆ, ಆ ಎಂಟು ವರುಷದ ಬಾಲಕಿ

ಯೊಡನೆ, ಅವನಿಗೆ ಲಗ್ನದ ನಿಶ್ಚಯ. ಸೂತಕದ ಕೊಳೆ ಹೋಗಲು, ಮದುವೆಯ ಅರಿಸಿನವನ್ನು ಅವನು ಅಂಟಿಸಿಕೊಳ್ಳಲು ಸಿದ್ಧನು. ಇದಕ್ಕೆ ಶಾಸ್ತ್ರಕಾರರ ಬಾಯಿಯೂ ಅಡ್ಡಿಯನ್ನು ತರುವುದಿಲ್ಲ. . . .”

ಆ ಹದಿನೊಂದನೆಯ ದಿನವೂ ಬಂದಿತು. ಅವರೆಲ್ಲರ ಕಣ್ಮುಂದೆ ಎರಡನೆಯ ವಿವಾಹದ ನಿಶ್ಚಯವೂ ಆಯಿತು. ಕೆಲವು ದಿನಗಳಲ್ಲೇ ಮಾಲತಿಮಹೇಶರಿಗೆ ಆಟದ ಗೊಂಬೆಯಂತಿದ್ದ ಚಿಕ್ಕ ತಾಯಿಯೂ, ತಾರೆಗೆ, ಒಬ್ಬ ಚಿಕ್ಕತ್ತೆಯೂ ದೊರೆತಳು. ಬ್ರಾಹ್ಮಣರು ಹರಸಿ ಹರಸಿ ಹೊರಟುಹೋದರು.

ಮದುವೆಯ ನೆಪದಿಂದ ಮಹೇಶನು ಪ್ರಫುಲ್ಲನನ್ನು ಎಳೆದು ತಂದಿದ್ದನು. ತನ್ನ ಕಿರಿಪತ್ನಿಯ ಬಳಿಯಲ್ಲಿ ಮಧುಕರನು ಕುಳಿತಾಗಲೇ, ಪ್ರಫುಲ್ಲನವನಿಗೆ ಗೋಚರಿಸಿಕೊಂಡನು. ಆ ಗಳಿಗೆಯಲ್ಲದಿದ್ದರೆ ಪ್ರಫುಲ್ಲನಿಗೆ ಎರಡನೆಯ ಏಟು ತಲೆಯ ಮೇಲೆ ಬೀಳುತ್ತಲಿತ್ತು. ಅದು ಮಹೇಶನಿಗೂ ತಿಳಿಯಿತು. ಅವನು ತಂದೆಯನ್ನು ಲಕ್ಷಿಸದವನಂತೆ ಗೆಳೆಯನನ್ನೆಳೆದುಕೊಂಡು ತನ್ನ ಕೊಠಡಿಗೆ ಕರೆದುಕೊಂಡು ಹೋದನು. ಅದೇ ಕೊಠಡಿ, ಯಾವ ಕೊಠಡಿಯ ನೆನಪು ಹೋಗದೋ ಅದೇ ಕೊಠಡಿ. ಮಾಲತಿಯೂ ಬಂದಳು. ಕೆಳಗೆ ವಿಧುರವಿವಾಹವು ನಡೆಯುತ್ತಿದೆ. ಮೇಲೆ ವಿಧವಾ ವಿವಾಹದ ಯತ್ನ.

ಮಹೇಶನು ಏನೋ ನೆಪದಿಂದ ಅಲ್ಲಿಂದ ಕಾಲು ಕಿತ್ತನು. ಅವನ ಹಿಂದೆ ಪ್ರಫುಲ್ಲನೂ ಹೊರಡುವವನಿದ್ದನು. ಮಾಲತಿಯು ನಗುಮೊಗದಲ್ಲಿರುವಳು, ಪ್ರಫುಲ್ಲನ ಮುಖದಲ್ಲಿ ಉತ್ಸಾಹದ ಸದ್ದಿಲ್ಲ.

"ಪ್ರಫುಲ್ಲಾ, ತಂದೆಯ ಅಂಜಿಕೆಯೇ. . ?"

"ಅಂಜಿಕೆಯಿಲ್ಲ. . . .". ಮಾತಿನಲ್ಲಿ ಮಾತ್ರ.

ಸರಿ. ಮಾಲತಿಯು ಅವನಿಗೆ ತನ್ನ ತಾಯಿಯ ಆಶೀರ್ವಾದವನ್ನು ತಿಳಿಸಿದಳು. ಪ್ರಫುಲ್ಲನು ಬೆದರಿ ತಬ್ಬಿಬ್ಬಾದನು.

"ಏಕೆ ಭೀತನಾಗುವೆ? ನೀನು ನನ್ನನ್ನು ವಿವಾಹಿತನಾಗಲಾರೆಯಾ . . . ."

"ಎಲ್ಲವೂ ನನ್ನ ಸ್ವತಂತ್ರವಾದರೆ—ಮಾಲತಿ—ನಿನ್ನನ್ನು ಬಿಟ್ಟು ಅನ್ಯರನ್ನು ಈ ಜನ್ಮದಲ್ಲಿ ವರಿಸಲಾರೆ"

"ಅಂದರೆ . . . ."

"ಅಂದರೆ . . . . ನಾನು ಅಸ್ವತಂತ್ರನು. ತಂದೆ ತಾಯಿಗಳ ಮಾತನ್ನು ಮೀರಲಾರೆ."

"ಹೂಂ. . . ."

"ಅಷ್ಟೇ ಅಲ್ಲ. ಅಂಥ ವಿವಾಹವು ಶಾಸ್ತ್ರವಿರುದ್ಧವಾದುದು. ನಾವು ವಿವಾಹಿತರಾದರೆ ಇಡೀ ಸಮಾಜವೇ ನಮ್ಮ ಮೋರೆಯ ಮೇಲೆ ಉಗುಳುವುದು. ತಿರುಗಿ ಸ್ವಜಾತಿಯವರಲ್ಲಿ ನಮಗೆ ಸಂಪರ್ಕವು ಸಿಗದು.

"ಹೂಂ. . . ."

"ಆದುದರಿಂದ ಮಾಲತಿ, ನನ್ನನ್ನು ಕ್ಷಮಿಸು. ನೀನು ವಿಧವೆಯಲ್ಲದಿದ್ದರೆ . . . ."

"ಮುಚ್ಚು ಬಾಯಿ. ನೀನು ವಿಧುರನಾದರೆ ನಾನು ವಿಧವೆ."

"ಮಾಲತಿ ನಿನ್ನನ್ನು ನಾನು ಅಂತಃಕರಣಪೂರ್ವಕ ವಾಗಿ ಪ್ರೀತಿಸುವೆನು. ನಿನ್ನನ್ನು ಅರೆಕ್ಷಣ ಅಗಲಿ ನಿಂದಿರಲಾರೆ. ಆದರೆ ಸಮಾಜವನ್ನು ವಿರೋಧಿಸುವ ಚೈತನ್ಯವು ನನಗಿಲ್ಲ."

ಮಾಲತಿಯು ನಕ್ಕಳು, ಹೊಟ್ಟೆ ಹರಿಯುವಷ್ಟು ನಕ್ಕಳು. ನಗುವನ್ನು ಕೇಳಿ ಆಸೆಯಿಂದ ಮಹೇಶನು ಬಂದನು. ಆಗ ಮಾಲತಿಯೆಂದಳು—"ಹಾಲನ್ನಾ ದರೂ ನಾನು ಕಳ್ಳತನದಿಂದ ಕುಡಿಯಲಾರೆ. . ." ತಿರುಗಿ ನಕ್ಕಳು, "ಅಣ್ಣಾ ನಾನಿನ್ನು ಹೇಡಿಗಳಿಲ್ಲದ ರಾಜ್ಯದಲ್ಲಿ ತಿರುಗುವೆ. ಸ್ವತಂತ್ರಳಾಗುವೆ" – ಎಂದು ಹೇಳಿ ಹೊರಗೆಹೋದಳು.

## ೫. ಸ್ವಾತಂತ್ರ್ಯದ ಮುಂಜಾನೆಯಲ್ಲಿ.

ಮಾಲತಿಯು ಇಂದು ಮನೆಯನ್ನು ತ್ಯಜಿಸಿ ಭಿಕಾರಿಣಿಯಾಗಿ ಅಲೆಯತೊಡಗಿರುವಳು. ಸಂಸಾರ ದಲ್ಲಿ ವಂಚಕರು, ಸ್ವಾರ್ಥಿಗಳು, ಭೀರುಗಳು – ಇವರ ಲ್ಲದೆ ಇನ್ನಾರೂ ಇಲ್ಲವೆಂದು ಅವಳ ದೃಢವಾದ ನಂ ಬುಗೆ. ಮಸಣಯಾತ್ರೆಗೆ ಸಿದ್ಧನಾದ ಮುಪ್ಪಿನ ತಂದೆಗೆ ಪುನರ್ವಿವಾಹ ಬೇಕು; ತಾನು ಸಾಯುವಾಗ ತನ್ನ ಹಿಂದೆ ಅವನು ಮಾಲತಿಯ ವಯಸ್ಸಿನ ಬಾಲಿಕೆ

ಯೊಬ್ಬಳನ್ನು ವಿಧವೆಯನ್ನಾಗಿ ಮಾಡಬೇಕು. ಅವಳು ನಿತ್ಯವೂ ಕಣ್ಣೀರಿನೂಟವನ್ನು ಮಾಡಬೇಕು. ಆದರೆ ಅಂಥ ಬಾಲಿಕೆಯ ಅರಿವು, ಸಮ್ಮತಿಗಳಿಲ್ಲದೆ ಮೊದಲನೆಯ ಲಗ್ನವಾಗಿದ್ದರೂ ಬೇರೊಂದು ಲಗ್ನವಾಗಬಾರದು. ಇನ್ನೊಂದು ಕಡೆ ಪ್ರಫುಲ್ಲನಂಥ ಭೀರುಗಳು. ಪ್ರೇಮವಿದೆ, ಒಡನಾಡಬೇಕೆಂಬ ಆಸೆಯಿದೆ- ಆದರೆ ಸಮಾಜದ ಮುಂದೆ ಬಹಿರಂಗವಾಗಿ ವರ್ತಿಸುವ ಜೀವವಿಲ್ಲ. ಸತ್ಯವೆಂದು ತೋಚಿದಂತೆ ವರ್ತಿಸುವ ಎದೆಯಿಲ್ಲ. ಇಂಥವರಿಗಾಗಿ ಬಾಳ್ವೆ ಹಿಡಿಯುವುದು ತನ್ನ ಕರ್ತವ್ಯವೆಂದು ಅವಳು ತಿಳಿಯಳು. ಮಾಲತಿಯು ಪ್ರಫುಲ್ಲನನ್ನು ಅಪಾರವಾಗಿ ಪ್ರೀತಿಸುವಳು, ಅವನು ಮೂರ್ಖನೆಂದು ತಿಳಿದೂ ಪ್ರೀತಿಸುವಳು. ಒಮ್ಮೆ ಅವನಿಗೆ ಕೊಟ್ಟ ಪ್ರೇಮದಾನವನ್ನು ವಂಚಿಸುವ ಇಷ್ಟ ಅವಳಿಗೆಷ್ಟೆಷ್ಟೂ ಇಲ್ಲ. ಆದರೆ ಅದಕ್ಕಾಗಿ ಕಳ್ಳತನದಿಂದ ಅವನೊಡನೆ ಬಾಳ್ವೆಮಾಡುವ ಇಷ್ಟವೂ ಇಲ್ಲ. ಅವಳೆಂದು ಜಗಕ್ಕೆ ಅಂಜುವವಳಲ್ಲ — ಸತ್ಯಕ್ಕೆ ಅಂಜುವವಳು.

ಇಂಥ ಬಾಲೆಯು ವಂಚಕ ಬಂಧುಗಳ ಎಡೆಯಲ್ಲಿ ಬಾಳಿರುವಳೇ! ಅವಳಿಗೆ ತಾನಿಂದು ತಾನೇ ಆಗಬೇಕೆಂದು ತೋರಿತು. ತನ್ನ ಆತ್ಮಕ್ಕೆ ತೋರಿದಂತೆ ತಾನು ವರ್ತಿಸಬೇಕೆಂದು ತೋರಿತು; ಎಂದಿನವರೆಗೆ ಅವಳು ಪರರಮನೆಯ ನೆರಳಲ್ಲಿರುವಳೋ, ಅಲ್ಲಿಯತನಕ ಅವಳು ತನ್ನಿಷ್ಟದಂತೆ ನಡೆಯಲಾರಳು. ಮಹೇಶನು ಅವಳ

ಸಲುವಾಗಿ ಬೇಕೆನ್ನುವಷ್ಟು ಕಣ್ಣೀರನ್ನು ಸುರಿಯ ಬಲ್ಲನು, ಆದರೆ ಅವಳೊಡನೆ ಎದೆಗೊಟ್ಟು ನಿಲ್ಲುವ ಸಾಹಸವಿಲ್ಲ, ಒಮ್ಮೆ ಅವನು ನಿಂತರೂ–ಮದುವಣಿಗನು ನಿಲ್ಲಬೇಕಲ್ಲ! ಆದುದರಿಂದಲೇ ಮಾಲತಿಯು ತಾನು ಸ್ವತಂತ್ರ ಬಾಳ್ವೆಯನ್ನು ತೊಡಗುವ ನಿರ್ಧಾರ ಮಾಡಿ ರುವಳು. ಏಕಾಕಿಯಾಗಿ, ಕಾಸಿಲ್ಲದೆ, ಓರೆನೋಟದ ನಾಡಜನರಲ್ಲಿ ತನ್ನ ಸಂಸಾರ ಶಕಟವನ್ನು ಸಾಗಿಸು ವುದು ಎಷ್ಟು ಕಷ್ಟವೆಂಬ ಅರಿವು ಅವಳಿಗೆಲ್ಲಿಂದ ಬರ ಬೇಕು? ಶೃಂಖಲೆಯನ್ನು ಹರಿಯುವ ಮನಸ್ಸಾ ಯಿತು— ಹರಿದಳು. ಮುಂದೆ ಹೋಗುವುದೆಲ್ಲಿಗೆ? ಕಾಲುಗಳು ಒಯ್ದಲ್ಲಿಗೆ. ಅಂತೆಯೇ ಅವಳು ಸಂಜೆ ಮನೆಯನ್ನು ಬಿಟ್ಟುಹೊರಟವಳು, ಬೆಳಗಾಗುವ ತನಕ ನಡೆದಳು. ರಾತ್ರಿ ಕಳೆದುದಾಗಲಿ, ಹಾದಿ ಸಾಗಿದು ದಾಗಲಿ–ಎರಡರ ಅರಿವೂ ಇಲ್ಲ. ಬೆಳಗಿನ ಸೂರ್ಯೋ ದಯವು ಅವಳನ್ನು ಒಂದು ಕಾಡಿನಲ್ಲಿ ತಂದು ಬಿಟ್ಟಿತು. ಆಗಾಗ ಆ ಹಾದಿಯಾಗಿ ಒಬ್ಬಿಬ್ಬರು ಅಲೆದಾಡುತ್ತಿ ದ್ದರು. ಮಾಲತಿಯು ತೀರ ಹಾದಿ ಬಳಿಯಲ್ಲಿ ನಿಲ್ಲದೆ ಸ್ವಲ್ಪದೂರ ಹೋಗಿ ಒಂದು ಮರದ ಛಾಯೆಯಲ್ಲಿ ಮಲಗಿಕೊಂಡಳು. ಗಾಢ ನಿದ್ರೆಬಂದಿತು. ರಾತ್ರೆ ಹೊರಟ ಗಳಿಗೆಯಿಂದ, ನಿದ್ರೆ ಮುಗಿಯುವ ತನಕ ಅವಳೇನು ಯೋಚಿಸುತ್ತಿರುವಳೋ ಅವಳಿಗೇ ತಿಳಿ ಯದು. ಒಂದ್ಥೇ ಸವನೆ ಅವಳ ಉಸಿರು ಉದ್ವೇಗ ದಿಂದ ಹೊರಡುತ್ತಿದೆ. ಇಡೀ ಹಿಂದುಸಮಾಜದ

ಾೀಲಿ ಅವಳು ತನ್ನ ಸಿಟ್ಟನ್ನು ಕಾರುತ್ತಿರುವಳು. ನಡು
ಡುವೆ, ತನ್ನ ಪ್ರಫುಲ್ಲನಿಗಾಗಿ, ಅಂದರೆ ಅವನ ಭೀ
ತನಕ್ಕಾಗಿ ಅಳುವಳು. ತಿರುಗಿ ಅವಳು ಅವನ
ಳಿಗೆ ಹೋಗುವುದು ಸಾಧ್ಯವಲ್ಲ; ಹೋಗುವುದರಿಂದ
ಪಯೋಗವಿಲ್ಲ. ನಿದ್ರೆ ಜಾಗರಣೆಗಳೆರಡೂ ಅವಳ
ಲಿಗೆ ಸಮನಾದುವು.

ಸಂಜೆ, ಹೊತ್ತುಮುಣುಗುವ ಸಮಯಕ್ಕೆ ಅವಳು
ಣ್ದೆರೆದಳು. ಇನ್ನೇನು, ತುಸು ಹೊತ್ತಿನಲ್ಲಿ ಕತ್ತಲೆ
ಯು ಆವರಿಸುವುದು. ತಿರುಗಿ ಅವಳು ಅಂಧಕಾರ
ಂದ ಆವರಿಸಲ್ಪಡುವಳು. ಆ ಅಗಾಧವಾದ ದಿಕ್ಕಿ
ದ ರಾಜ್ಯದಲ್ಲಿ ಅವಳ ಹಾದಿಯನ್ನು ಅವಳೇ ನೋಡ
ೇಕಾಗಿದೆ. ಸರಿ, ಮುಂದೆಲ್ಲಿಗೆ ಹೊರಡಲಿ—ಎನ್ನು
ಷ್ಟಕ್ಕೆ ಕತ್ತಲೆಯಾಯಿತು. ಕತ್ತಲೆಯೊಂದಿಗೆ ಮಾ
ತಿಯ ಹೊಟ್ಟೆಯು ಹಸಿವಿನಿಂದ ಕಡಿಯ ಹತ್ತಿತು.
ನ್ನನೀರಿಲ್ಲದೆ ೨೪ ತಾಸುಗಳ ಮೇಲೆ ಕಳೆದಿದ್ದುವು.
ಡಿಗೆಯ ಆಯಾಸವು ಇನ್ನೂ ಶಾಂತವಾಗಿರಲಿಲ್ಲ;
ಲುನೋವಿನ ಅನುಭವವು ಈಗಷ್ಟೆ ಆಗತೊಡಗಿದೆ..
ದರ ಮೇಲೆ ಅವಳ ಗಮನವು ಹೋದೊಡನೆಯೇ
ೋವು ಒಂದಕ್ಕೆ ಹತ್ತಾಯಿತು, ಹಸಿವು ಒಂದಕ್ಕೆ
ೂರಾಯಿತು ಆದರೆ ಅವಳಿಗಿಲ್ಲಾರು ಏನನ್ನು ಕೊ
ುವರು? ಆದರೆ ಹೊಟ್ಟೆಯು ಕೇಳುವುದೇ? ಅದಕ್ಕ
ರ ಕಪ್ಪವು ಸಲ್ಲಲೇ ಬೇಕು. ಪೊದೆಯೊಂದರಿಂದ
ಗೆ ಎಟುಕಿದ ಸೊಪ್ಪನ್ನು ಕಿತ್ತು ಅಗಿಯ ತೊಡಗಿ

ದಳು. ಎಂಥ ಕಷ್ಟ . . . ಅವಳೆಷ್ಟು ಬಲವಂತದಿಂದ ಅದನ್ನು ತಿನ್ನಲೆತ್ನಿಸಿದರೂ, ಅದು ಒಳಗೆ ಹೋಗಲಾರ ದಾಯಿತು. ಉಗಿದಳು . . . ಅತ್ತಳು ಹಸಿವೆಗಾಗಿ ಅತ್ತಳು. ಇದುವರೆಗೆ ಮನೋವ್ಯಥೆಯಿಂದ ಅಳು ತ್ತಿದ್ದಳು. ಈಗ ಶರೀರವ್ಯಥೆಯು, ಸೇರಿತು. ಅವಳ ಮೇಲೆ ನಿದ್ರೆಗೆ ತಿರುಗಿ ಕನಿಕರ ಬಂದಿರಬೇಕು. ಈ ಸ್ವಲ್ಪ ಹೊತ್ತಿನಲ್ಲಿ ಅವಳು ನಿದ್ರಾವಶಳಾದಳು . . .

ಹೋ, ತಿರುಗಿ ಬೆಳಗಾಯಿತು. ಮಾಲತಿಗೆ ಎಚ್ಚರವು ಆಯಿತು. ಎದ್ದು ನಿಲ್ಲಲು ಮುಂದಾದಳು. ಕಾಲುಗಳು ಅವಳ ಅಧಿಕಾರವನ್ನು ಮೀರತೊಡಗಿ ದುವು. ಬಳಿಯಲ್ಲಿ ಚಿಕ್ಕ ಮರವೊಂದಕ್ಕೆ ಕೈಕೊಟ್ಟು ನಿಂತಳು. ತಲೆಯು ತಿರುಗತೊಡಗಿತು. ಅಲ್ಲಿ ನಿಂತರೆ ತನಗೆ ಸಾವು ನಿಜವೆಂದು ತೋರಿತು. ತನ್ನ ಸ್ವಾತಂತ್ರ್ಯದ ಉದಯದಲ್ಲೇ ಹಸಿವೆಯಿಂದ ಸಾಯ ಲು ಯಾರಿಗೆ ಇಷ್ಟವಾದೀತು .ಹೇಗೋ ಹೇಗೋ ಹೆಜ್ಜೆಯನ್ನಿಡುತ್ತ ಹಾದಿಯ ಬಳಿಗೆ ಬಂದಳು. ಹಾಗೆ ಮುಂದೆ ಸರಿದಳು. ಹೊತ್ತುಮೂಡಿ ಒಂದು ಝಾವ ವಾಯಿತು; ಸಾಗಿದ ದೂರ ಒಂದೆರಡು ಮೈಲಿಗಳಾಗ ಬಹುದು. ಕಾಡು ಮುಗಿಯಿತು. ಸೂರ್ಯನ ಪ್ರಖರ ಸಂಭಾವನೆಯು ತೊಡಗಿತು. ಆದರಲ್ಲೂ ಸಾಗಬೇಕು. ಜೀವನ ಯಾತ್ರೆಯಲ್ಲವೆ? ಸಾಗಿಸಾಗಿ ಒಂದು ಮೈದಾ ನಿನ ಬಳಿ ಹೋಗಿ ನಿಂತಳು . . . ದೂರದಲ್ಲಿ ಒಂದೆ ರಡು ದನಕರುಗಳು ಕಾಣಿಸಿಕೊಂಡುವು. ಮೆಲ್ಲಗೆ

ಅಲ್ಲಿಗೆ ಹೋದಳು. ಮುಂದೆ ಸಾಗಲಾರದೆ ಅಲ್ಲೇ ಉರುಳಿ ಬಿದ್ದಳು. ಈ ಸದ್ದನ್ನು ಕೇಳಿ ಒಬ್ಬ ದನಕಾಯುವ ಹುಡುಗನು ಬಂದನು. ಆಗ ಅವಳಿಗೆ ತಿಳಿವಿದ್ದಿರಲಿಲ್ಲ. ಬಾಲಕನು ಸ್ವಲ್ಪ ನೀರನ್ನು ತಂದು ಅವಳ ಕಣ್ಣಿಗೆ ಸವರಿ, ಸ್ವಲ್ಪವನ್ನು ಬಾಯಿಗೆ ಬಿಟ್ಟನು. ಅಮೃತದಂತಿತ್ತು. ಮಾಲತಿಗೆ ಚೇತನವಾಗಲು ಆ ಶೂದ್ರ ಬಾಲಕನನ್ನು ಕಂಡು—ನನಗಿನ್ನಷ್ಟು ನೀರು . . . ಎಂದಳು. 'ಕೊಡು' ಎನ್ನಲು ಅವಳ ಬಾಯಿಗೆ ಬರಲಿಲ್ಲ. ಅವಳಿದುವರೆಗೆ ಭಿಕ್ಷೆಬೇಡಿದವಳಲ್ಲ. ಬಾಲಕನಿಗೆ ಅವಳ ಮೇಲೆ ಕರುಣೆಯುಂಟಾಗಿ ತನ್ನ ಬಿದಿರಿನ ಪಾತ್ರೆಯಲ್ಲಿ ತಿರುಗಿ ಇಷ್ಟು ನೀರನ್ನು ತಂದನು. ನೀರನ್ನು ಕೊಡುವಾಗ ತಾನು ಶೂದ್ರನೆಂಬ ಕಲ್ಪನೆಯು ಅವನಿಗೂ ಬರಲಿಲ್ಲ, ತಾನು ಬ್ರಾಹ್ಮಣಿ ಎಂಬ ತಿಳಿವು ಇವಳಿಗೂ ಆಗಲಿಲ್ಲ. ನೀರನ್ನು ಕುಡಿದು ತೃಪ್ತಳಾದಳು. ಆದರೆ ಹಸಿವು ತನ್ನ ಕಾಣಿಕೆಯನ್ನು ಬೇಡುತ್ತಲೇ ಇತ್ತು. ಬಾಲಕನು ಮೆಲ್ಲಗೆ 'ತಾಯಿ, ನೀವಾರು, ಎಲ್ಲಿಗೆ ಹೋಗುವವರು. ಏನಾಗಿದೆ' ನಿಮಗೆ ಎಂದು ಕೇಳಿದನು. ಮಾಲತಿಯು ಶಿಶುವಿನಂತೆ ಅತ್ತುಬಿಟ್ಟಳು. ಬಾಲಕನಿಗೆ ತಾನೇಕೆ ಘಾತನಾಡಿಸಿದೆ ಎಂದು ತೋರಿತು. ಹತ್ತೆಂಟು ನಿಮಿಷಗಳು ಕಳೆಯಲು ಮಾಲತಿಯು—"ಹಸಿವಾಗುವುದು" ಎಂದಳು. ಬಾಲಕನು—ಒಂದಿಷ್ಟು ನೇರಳೆ ಹಣ್ಣುಗಳನ್ನು ತಂದು ಅವಳ ಮುಂದಿರಿಸಿದನು. ಮಾಲತಿಗೆ ಎಂಥ ಔತನ!

ಮಧ್ಯಾಹ್ನವಾಗಲೇ ಆಯಿತು ಬಾಲಕನು ದನ ಕರುಗಳನ್ನು ತಿರುಗಿ ಹಳ್ಳಿಗೆ ಒಯ್ಯಬೇಕು. ಅದ ಕ್ಕಾಗಿ—'ಅವ್ಮಾ ನಮ್ಮೂರಿಗೆ ಬರುವಿರೇ. ನಾಸೀಗ ಹೋಗಬೇಕು' ಎಂದನು. ಮಾಲತಿಯು ಹೆಚ್ಚಿನ ಭಿಕ್ಷೆಯನ್ನು ಬೇಡಲಾರದೆ ಒಣಹೆಮ್ಮೆಯಿಂದ—"ಇಲ್ಲ" ಎಂದಳು. ಬದಲು, "ಮಗೂ, ನಗರವಾವು ದಾದರೂ ಬಳಿಯಲ್ಲಿದೆಯೇ?" ಎಂದು ಕೇಳಿದಳು.

ಅಲ್ಲಿಂದ ಇಪ್ಪತ್ತು ವ್ಮೈಲಿಗೆ ಒಂದು ದೊಡ್ಡ ಪಟ್ಟಣ ವಿದೆಯೆಂದು ತಿಳಿಯಿತು. ಇಪ್ಪತ್ತು ವ್ಮೈಲು ದೂರ! ಮೊದಲಿನ ರಾತ್ರಿ ಒಂದು ದಿನವೇ ಅವಳು ೨೫ ವ್ಮೈಲು ಮೇಲೆ ಸಾಗಿದ್ದಳು ಆಗ ದೂರದ ಅರಿವು ಅವಳಿಗಿದ್ದಿ ರಲಿಲ್ಲ. ಈಗ ೨೦ ವ್ಮೈಲು ಎಂದರೆ ಎಷ್ಟು ದೂರವಾಗಿ ಕಂಡಿತು! ರಾಮುನಿಗೆ ಲಂಕೆಯು ಕಂಡಷ್ಟು ದೂರ. ಆ ೨೦ ವ್ಮೈಲು ದೂರದ ಮಂಗಳೂರಿಗೆ ಅವಳು ಒಮ್ಮೆ ಹೋಗಿದ್ದಳು. ಮೋಟಾರಿನ ಮೇಲೆ ವೈಭವದಿಂದ ಚಿನ್ನಾಭರಣಗಳನ್ನು ತೊಟ್ಟುಕೊಂಡು ಹೋಗಿದ್ದಳು. ಅದು ಅವಳ ಮೃತಪತಿಯ ವಾಸದ ಊರಾಗಿತ್ತು. ಆ ಊರಿನ ಒಬ್ಬನ ದೆಸೆಯಿಂದಲೇ ಅವಳು ಜನರ ಕಣ್ಣಿಗೆ ವಿಧವೆಯೆನಿಸಿದುದು. ಅದೇ ಊರಿಗೆ ಅವಳು ಕಾಲು ನಡೆಯಿಂದ ಹೋಗಬೇಕೆ? ಮಾಲತಿಯು ಅಂಜಿದಳು. ತಿರುಗಿ ಎಲ್ಲಾದರೂ ತನ್ನ ಮಾವನು ಭೇಟಿಯಾದರೆ— ಬೈದರೆ—'ಮನೆಗೆ ಬಾ' ಎಂದು ಆ ಗ್ರಹಪಡಿಸಿದರೆ? 'ಇಲ್ಲ, ಹೋಗುವುದಿಲ್ಲ'ವೆಂಬ ನಿರ್ಧಾ

ರ ಮಾಡಿದಳು. ಕೊನೆಗೆ ಅದು ಭೀರುತನವೆಂದು ತೋರಿತು. ತಾನು ವಿಧವೆಯೆನಿಸಿಕೊಂಡಲ್ಲೇ ಸಧವೆಯಾಗಬೇಕೆಂದೂ, ಅಮಂಗಳೆಯಾದಲ್ಲಿ ಸುಮಂಗಳೆಯಾಗಬೇಕೆಂದೂ ತೋರಿತು. ಅಷ್ಟೇ ಅಲ್ಲ — ಅದು ಅವಳ ಪರಾಕ್ರಮವನ್ನು ತೋರಲು ತಕ್ಕ ರಂಗಭೂಮಿ. ಪ್ರಫುಲ್ಲನ ಅಂಜುಬುರಕತನಕ್ಕೆ ಅಪಮಾನಮಾಡಲು ತೀರ ಯೋಗ್ಯ ಸ್ಥಳ. ಅವನು ಅಲ್ಲೆ ಕಾಲೇಜಿನಲ್ಲಿ ಕಲಿಯುತ್ತಿರುವನೆಂದು ಅವಳಿಗೆ ತಿಳಿದಿತ್ತು. ಈ ನಿರ್ಧಾರವನ್ನು ಮಾಡಿ ಅವಳು ಅಲ್ಲಿಂದ ಹೊರಟಳು. ನಡುಬಿಸಿಲಿನಲ್ಲಿ ನಡೆಯತೊಡಗಿದಳು, ನಡೆದು ನಡೆದು ಸಂಜೆಯಾಯಿತು. ಮಧ್ಯರಾತ್ರಿಯ ಸಮಯಕ್ಕೆ ಮಂಗಳೂರಿನ ಬೀದಿಯ ಲಾಂದ್ರವೊಂದರ ಮುಂದೆ ಬಂದು ನಿಂತಳು! ಕಾಡಿನಲ್ಲಿ ಅವಳಿಗೆ ದಾರಿ ತಿಳಿದಷ್ಟು, ಈಗ ನಗರದಲ್ಲಿ ತೋರದಾಯಿತು. ನಗರವೆಂತೂ ದೊರೆಯಿತು. ಆದರೆ ಮಲಗಬೇಕೆಲ್ಲಿ? ಹಾದಿಯಲ್ಲೇ? ಅಂತು ಅಲೆದಲೆದು, ಒಂದು ಮನೆಯ ಜಗುಲಿಯ ಮೇಲೆ ಮಲಗಿಕೊಂಡಳು. ಹಾ, ಎಂಥ ಸುಖನಿದ್ರೆಯದು. ಆದರೆ ಬೆಳಗಿನ ಐದು ಘಂಟೆಗೆ ಮನೆಯೊಡೆಯನು ಹೊರಕ್ಕೆ ಬಂದು, ಅವಳನ್ನು ಅಲ್ಲಿಂದ ಓಡಿಸಿಬಿಟ್ಟನು. ಪಾಪ! ಸುಖನಿದ್ರೆಯನ್ನುಣ್ಣುವ ಯೋಗವು ಸಹ ಅವಳಿಗಿಲ್ಲದಾಯಿತು. ತಿರುಗಿ ಅಲ್ಲಿಂದ ಅಲೆದು ಇನ್ನೊಂದು ಮನೆ ಜಗುಲಿಯನ್ನಾರಿಸುವಷ್ಟರಲ್ಲಿ ಬೆಳಗಾಯಿತು. ಇನ್ನು ನಗರದಲ್ಲಿ ಬೀದಿಯಲ್ಲಿ ಮಲಗು

ವುದೆಂದರೆ. . . ಅದೂ ತನ್ನ ಮಂಗಳೂರಿನಲ್ಲಿ! ಈಗ ವಳು ಆದಷ್ಟು ಜನಸಂದಣಿ ಕಡಿಮೆಯಿರುವ ಭಾಗಕ್ಕೆ ಹೋಗುವ ನಿಶ್ಚಯು ಮಾಡಿದಳು. ಆದಕ್ಕಾಗಿ— ಬೋಳಾರದ ಮಂಗಳಾದೇವಿ ಗುಡಿಯನ್ನು ಸೇರಿದಳು. ಅವಳು ತನಗೆ ಮಾಂಗಲ್ಯವನ್ನು ಕೊಡುವಳೋ ಎಂದು ಕೇಳಲಿಕ್ಕೇನು?

ಹೊರ ಜಗುಲಿಯೊಂದರ ಮೇಲೆ ಮಲಗಿದ್ದ ಇವಳು ಒಬ್ಬ ಭಿಕಾರಿಣಿಯೋ ಹುಚ್ಚಿಯೋ ಇರಬೇಕೆಂದು ಬಂದು ಹೋಗುವವರು ನಿರ್ಣಯಿಸಿದರು. ಇವಳ ಅಂಗಾಂಗಗಳ ಮೇಲೆ ಧೂಳು ಮುಸುಕಿತ್ತು. ಕಣ್ಣುಗಳು ಆಯಾಸದಿಂದ ಕಂತಿದ್ದುವು. ಕಣ್ಣಾಲಿಗಳು ಕೆಂಪಡರಿದ್ದುವು. ಈ ಪರಿಸ್ಥಿತಿಯಲ್ಲಿ ಮಲಗಿದವಳನ್ನು ಯಾರೂ ಮಾತನಾಡಿಸಲಿಲ್ಲ. ಒಬ್ಬಿಬ್ಬರು ಮುದುಕರು ಅವಳ ಬಳಿ ಒಂದೆರಡು ಕಾಸುಗಳನ್ನು ತಾವಾಗಿಯೇ ಎಸೆದು ಹೋದರು. ಅವಳಿಗೆ ನಿದ್ರೆಬಂದುದನ್ನು ಕಂಡ ಒಬ್ಬಿಬ್ಬರು ಬಾಲಕರು ಅದನ್ನು ಮೆಲ್ಲಗೆ ತೆಗೆದುಕೊಂಡು, ತಮ್ಮ ಆ ದಿನದ "ಬೀಡಿ"ಯ ಖರ್ಚಿಗೆ ಉಪಯೋಗಿಸಿಕೊಂಡರು. ಅವಳಿಗಿಂತ ತಾವೇ ಆ ದಾನಕ್ಕೆ ತಕ್ಕವರೆಂದು ಅವರಿಗೆ ತೋರಿರಬೇಕು.

ಮಧ್ಯಾಹ್ನ ಎಚ್ಚರವಾಗಲು, ಅವಳಿಗೆ ತಿರುಗಿ ಹಸಿವಿನ ನೆನಪಾಯಿತು. ಆದರೆ ನಗರದಲ್ಲಿ ಯಾರನ್ನೂ ಬೇಡುವ ಸಾಹಸವಾಗಲಿಲ್ಲ. ಮೂರು ವರುಷಗಳ ಹಿಂದೆ ಅವಳು ತನ್ನ ಕೈಯಿಂದಲೇ ಅಲ್ಲಿ ನೆರದಿದ್ದ ಭಿಕ್ಷು

ಕರಿಗೆ ನೀಡಿದ್ದಳು. ಅದೇ ಸ್ಥಳದಲ್ಲಿ ಅವಳಿಂದು ಬೇಡ ಬೇಕೆ? ಆ ಕಲ್ಪನೆಯು ಅವಳಿಗೆ ಅಸಹನೀಯವಾ ಯಿತು. ಅವಳು ಅಲ್ಲಿಂದೆದ್ದು ಸ್ವಲ್ಪ ದೂರ ಸಾಗಿ ಒಂದು ಗದ್ದೆಯನ್ನಿಳಿದು ಅಲ್ಲಿನ ಕಲಕು ನೀರನ್ನು ಕುಡಿ ದಳು. ತಿರುಗಿ ಗುಡಿಗೆ ಬಂದು, ಯಾರೋ ಜಗುಲಿಯ ಮೇಲೆ ಎಸೆದು ಹೋದ ಬಾಳೆಯ ಹಣ್ಣಿನ ಸಿಪ್ಪೆಯನ್ನು, ಮೆಲ್ಲತೊಡಗಿದಳು. ತಾನೀಗ ಹಸಿವೆಯಿಂದ ಮೃಗವೋ ಮನುಷ್ಯನೋ ಎಂದು ಅವಳಿಗೆ ತಿಳಿಯದು. ಆದರೂ ಈ ಉಪಹಾರದಿಂದಲೇ ಅವಳ ಮನವು ತೃಪ್ತವಾಯಿತು. ಸರಿ, ಸಂಜೆ ಐದು ತಾಸಾಗಲು ನೂರಾರು ಮಂದಿ ಗುಡಿಯ ಸಂದರ್ಶನಕ್ಕೆ ಬಂದು ಹೋಗತೊಡಗಿದರು. ಅವಳ ಸರಿವಯಸ್ಸಿನ ಬಾಲೆಯರು, ಯೌವನದುಲ್ಲಾಸ ದಿಂದ ಮೆರೆಯುತ್ತ, ಅವಳ ಮುಂದೆಯೇ ಹಾದು ಹೋ ದರು. ಒಬ್ಬಳಂತು ಅವಳನ್ನು ಕಂಡು—'ಅಕ್ಕ, ಹುಚ್ಚಿ ಯನ್ನು ಕಾಣು' ಎಂದಳು. ಮಾಲತಿಗೆ–ಎಂಥ ಸೊಗ ಸಿನ ನಾಮಕರಣ! ಗುಡಿಯ ಬಳಿ ಅಲೆಯುವ ನಾರಿ ಯರ ಮನವು ಅವಳ ಕಡೆಗೆ ಹೋಗಲೇ ಇಲ್ಲ. ಆದರೆ– ಅತ್ತಿತ್ತ ತಿರುಗುವ ಕೆಲವು ಉಂಡಾಡಿ ತರುಣರು ಅವ ಳನ್ನು ನೋಡತೊಡಗಿದರು. ದೇವಾಲಯದ ಹೊರಸು ತ್ತಿನಲ್ಲಿ ಅವರ ಪ್ರದಕ್ಷಿಣೆಯು ತೊಡಗಿತು. ಒಬ್ಬೊಬ್ಬರೇ ಬರುವರು, ಅವಳ ಮುಂದೆ ನಿಲ್ಲುವರು, ಓರೆಗಣ್ಣಿನಿಂದ ನೋಡುವರು, ಸಿಳ್ಳನ್ನು ಹೊಡೆಯುವರು - ತಿರುಗಿ ಮುಂದೆ ಸರಿಯುವರು. ಇದನ್ನು ಕಾಣುವುದು ಮಾಲ

ತಿಗೆ ಅಸಹನೀಯವಾಯಿತು. ಒಮ್ಮೆ ತಡೆಯಲಾರದ ಕೋಪದಿಂದ—"ನಿಮ್ಮ ಮನೆಯಲ್ಲಿ ಅಕ್ಕ ತಂಗಿಯರಿಲ್ಲವೇ"–ಎಂದಳು. ಒಬ್ಬ ಲಜ್ಜೆಗೇಡಿಯು "ನಿನ್ನಷ್ಟು ಚೆಲುವಿನವರಿಲ್ಲ" ಎಂದು ಉತ್ತರವಿತ್ತನು. ಇನ್ನು ಮಾತನಾಡುವುದು ವ್ಯರ್ಥವೆಂದವಳಿಗೆ ಅನಿಸಿತು. ಇನ್ನರ್ಧ ತಾಸಿನಲ್ಲಿ ಒಬ್ಬ ಚಿಕ್ಕ ಹುಡುಗನು ಬಂದು ಒಂದು ಪತ್ರವನ್ನೂ ಎರಡು ರೂಪಾಯಿಗಳನ್ನೂ ಅವಳ ಕೈಮೇಲಿಟ್ಟನು. ಮಾಲತಿಗೆ ಅದರರ್ಥವು ಹೊಳೆಯಿತು. ಅವಳದನ್ನು ಎಸೆದುಬಿಟ್ಟಳು . . . .

ಸಂಜೆಯಾಯಿತು. ತಿರುಗಿ ಕತ್ತಲೆಯಾಗುವುದು. ತಾನಿಲ್ಲಿ ನಿಶ್ಚಿಂತೆಯಿಂದ ಮಲಗಲು ಸಾಧ್ಯವಿಲ್ಲ; ರಾತ್ರಿಯನ್ನು ಕಳೆಯುವುದು ತೀರ ಕಷ್ಟ ಎಂದವಳಿಗನಿಸಿತು. ಕತ್ತಲೆ ಕವಿಯಲು ಅವಳು ಅಲ್ಲಿಂದೆದ್ದು ಸ್ವಲ್ಪ ದೂರ ನಡೆದು–ಒಂದು ಮರದ ಕೆಳಗೆ ಮುದುರಿಕೊಂಡು ಮಲಗಿದಳು. ನಿಶ್ಚಿಂತೆಯಿಂದ ಬೆಳಗಾಯಿತು. ಹೀಗೆ ನಾಲ್ಕಾರು ದಿನಗಳು ಕಳೆದುವು. ಹಗಲೆಲ್ಲ ಗುಡಿಯಲ್ಲಿ; ರಾತ್ರಿ ನಾಗರಿಕರ ಅಂಜಿಕೆಗೆ ಎಲ್ಲಾದರೂ ಮರಗಳ ಸಂದಿನಲ್ಲಿ; ಆದರೆ ಹಸಿವನ್ನೆಷ್ಟು ದಿನಗಳ ವರೆಗೆ ಸಹಿಸಬಲ್ಲಳು! ಏನಿಲ್ಲದೆ ಬದುಕುವುದು ಹೇಗೆ?

ಮಾಲತಿಗೀಗ ಹಸಿವೆಯ ದೆಸೆಯಿಂದ ತನ್ನಿಂದಿಲ್ಲದ ಕೆಲಸಗಳಾಗ ಬಹುದೆಂದು ಭೀತಿಯಾಯಿತು. ಅವಳೀಗ ಗಳಿಸುವುದಾಗಿದ್ದರೆ ತನ್ನ ಮುಂದೆ ನಿತ್ಯವೂ ಬಂದು ಬೀಳುತ್ತಿದ್ದ ಕಾಣಿಕೆಗಳನ್ನು ಸ್ವೀಕರಿಸ ಬಹು

ದಿತ್ತು ಆದಕ್ಕೆ ಹಾಳು ಅಭಿಮಾನವು ಅವಳನ್ನು ಬಿಡಲಿಲ್ಲ. ಆದರೆ ಈ ಸಿರಶನ ವ್ರತವನ್ನು ಮುಂದರಿಸಿದರೆ ಅಲ್ಲೇ ಸಾಯುವುದು ಖಂಡಿತ.

ತಿರುಗಿ ರಾತ್ರಿಯಾಗಲು ಅವಳು ಅಲ್ಲಿಂದೆದ್ದು ಸ್ವಲ್ಪ ದೂರ ಹೋಗಿ ಒಂದು ಆಲದ ಮರದ ಬುಡದಲ್ಲಿ ರಾತ್ರಿಯನ್ನು ಕಳೆಯಲು ಮಲಗಿದಳು. ಹಸಿವೆಯು ತನ್ನ ಪರಿಷ್ಕಾವಧಿಗೆ ಮುಟ್ಟಿತು ಎದ್ದು ನಿಂತು, ತೂಗಾಡುವ ಆಲದ ಮರದ ಬೇರಿನ ಚಿಗುರನ್ನು ತಿಂದಳು. ಚಿಗುರು ಮುಗಿಯಲು, ಒಣ ಕಡ್ಡಿಯನ್ನು ತಿಂದಳು. ಇದರಿಂದೆಲ್ಲ ಹೊಟ್ಟೆ ತುಂಬುವುದೇ? ಈಗ ಚಂದ್ರೋದಯವಾಯಿತು. ಸಪ್ತಮಿಯ ಚಂದ್ರನು ಮೋಡಗಳ ಮರೆಯಿಂದ ಅವಳನ್ನಿಣಿಕಿ ನೋಡತೊಡಗಿದನು. ಬೆಳಕನ್ನು ಕಾಣಲು ಅವಳಿಗಿಷ್ಟವಿದ್ದಿಲ್ಲ. ಅದು ಅವಳ ದುರ್ದಸೆಯನ್ನು ಬಯಲಿಗೆಳೆಯುವ ನೆಪದಿಂದಲೇ ಬಂದಿದೆಯೆಂದು ಅವಳಿಗೆ ಕಾಣಿಸಿತು. ಅದಕ್ಕಾಗಿ ಮರದಡ್ಡ ನಿಂತಳು; ನಿಲ್ಲಲು ತ್ರಾಣ ಸಾಲದೆ ಕುಳಿತಳು. ಅವಳ ಕಣ್ಮುಂದೆ ಯಾರೋ ಬಂದು ನಿಂತಂತೆ ಕಾಣಿಸಿತು. 'ಇದೇನು ಭೂತವೇ' ಎಂದವಳು ಚಕಿತಳಾದಳು. ಮರುಕ್ಷಣದಲ್ಲಿ ಅವಳ ಮುಂದೆ ಅವನು ಕುಳಿತನು. ಭೀತಿಯಿಂದೋಡಲು ಸಹ ಅವಳಿಗೆ ಕಾಲು ಬರಲಿಲ್ಲ. ಅಂಜಿಕೆಯಿಂದ ಮುಷ್ಟಿಗಾತ್ರದ ಕಣ್ಣುಗಳನ್ನು ತರೆದು ಆ ಅಸ್ಪಷ್ಟ ವ್ಯಕ್ತಿಯ ಮೋರೆಯನ್ನು ನೋಡತೊಡಗಿದಳು. ಅವನು ಅವಳ ಮುಂದೆ ಒಂದಿಷ್ಟು ಬಾಳೆಹಣ್ಣು

ಗಳನ್ನು ಇರಿಸಿದನು. 'ಯಾರಿಗೆ, ಏನು?' ಎಂದು ವಿಚಾರವಾಡದೆ ಮಾಲತಿಯು ಬಕಬಕನೆ ತಿಂದಳು. ಇರಿಸಿದ್ದೆಲ್ಲವನ್ನೂ ಒಮ್ಮೆಗೇ ತಿಂದಳು. ನಾಳಿನ ಯೋಚನೆಯಿಲ್ಲದೆ ತಿಂದಳು. ಇದರಿಂದ ಉತ್ಸಾಹಿತನಾದ ಆತನು ಅವಳ ಹೆಗಲಮೇಲೊಂದು ಕೈಯ್ಯನ್ನಿರಿಸಿದನು. ಮಾಲತಿಯು ಚಿಕಿತಳಾದಳು. ತಿಂದ ಮೇಲೆ ಅವಳಿಗೆ ಆ ವ್ಯಕ್ತಿಯು ಬಂದ ಕಾರಣವು ಹೊಳೆಯಿತು. ನಾಲ್ಕು ದಿನಗಳಿಂದವನು ಇವಳನ್ನು ಬೇಡಿ ಬೇಡಿ ನಿರಾಶನಾಗಿ, ರಾತ್ರಿ ಹುಡುಕಿ ಹುಡುಕಿ ಸಾಕಾಗಿ, ಈಗ ಅಲ್ಲಿಗೆ ಬಂದಿರುವನು ಆದರೂ ಮಾತನಾಡಲಿಲ್ಲ.

ಮಾಲತಿಯು ಭಯಂಕರ ಯೋಚನೆಗೆ ಗುರಿಯಾದಳು. 'ತಾನವನ ಅನ್ನವನ್ನು ತಿಂದಿರುವೆ. ಅವನ ಆಸೆಯುನ್ನು ಪೂರೈಸಬೇಡವೆ' — ಎಂದು. ಆಸೆಯುನ್ನು ಪೂರೈಸುವುದೆಂದೇನೆಂದು ಅವಳಿಗೆ ತಿಳಿದಿದೆ. ತನ್ನ ಗೌರವಕ್ಕೆ ಅದು ಹೇಗೆ ಒಪ್ಪುವುದೆಂದೂ ಹೊಳೆಯಿತು. ತಾಯಿ, ತಂದೆ, ಅಂಣ, ಪ್ರಪುಲ್ಲ— ಎಲ್ಲರ ನೆನಪೂ ಆಯಿತು. ಆದರೆ ಮಾಡುವುದೇನು? ಮಾಂಸವು ಮಂಣಿನಿಂದ ಬದುಕಲಾರದು. ಆದಕ್ಕೆ ಉಣ್ಣುವುದಕ್ಕೆ ಅನ್ನ ಬೇಕು. ಅದು ಉಪವಾಸವಿರಲಾರದು. ಆ ಅನ್ನಕ್ಕಾಗಿ ಅವಳು ಆ ದಿನ ಸೂಳೆಯಾದಳು.

## ೬. ಪ್ರಫುಲ್ಲನ ದರ್ಶನ.

ಮಾಲತಿಯೀಗ ನಿತ್ಯ ಸುಮಂಗಳೆಯು. ಇನ್ನವಳನ್ನು ವೈಧವ್ಯವು ಕಾಡುವಂತೆಯೇ ಇಲ್ಲ. ಅವ

ಳೇನುಮಾಡಲು ಹೊರಟಳೋ, ಪ್ರಸಂಗವು ಅವಳಿಂದೇನು ಮಾಡಿಸಿತೋ--ಅದು ಅವಳಿಗೇ ತಿಳಿಯದಾಗಿದೆ. ಆ ದಿನ ರಾತ್ರಿ ಅವಳು ಗುರುತು ಪರಿಚಿತಿಯಿಲ್ಲದ-ಒಂದು ವ್ಯಕ್ತಿಯ ಆಲಿಂಗನದಲ್ಲಿ ಕೇವಲ ಹತ್ತೆಂಟು ಹಣ್ಣುಗಳಿಗಾಗಿ ಬಿದ್ದಳು. ಅಂದೇ ಅವಳ ಜೀವನದ ನದಿಯು ಒಂದು ವಿಚಿತ್ರ ಗತಿಯನ್ನು ಹೊಂದಿತು. ಅಂದೇ ಅವಳು ಲೋಕಲಜ್ಜೆಯನ್ನು ಕಾಲಿಂದ ಒಗೆದಳು. ಲಜ್ಜೆಯೆಂಬುದು ಮಾನವನ ಕಲ್ಪನೆಯ ಕೊಳೆಯೆಂದು ತಿಳಿದಳು. ಅದರಲ್ಲಿ ಲಜ್ಜೆಯೇನು? ವ್ಯಭಿಚಾರವು. ಲಜ್ಜಾಸ್ಪದ ವೃತ್ತಿಯೋ? ಪರರ ಭೋಗಕ್ಕಾಗಿ ತನ್ನಿಂದಾದ ಸುಖವನ್ನು ಪರರಿಗೆ ನೀಡುವ ಕೆಲಸವದು. ಅದನ್ನು ತನ್ನಂಥ ದರಿದ್ರಾವಸ್ಥೆಯಲ್ಲಿರುವ ಪ್ರಾಣಿಯು, ಸಮಾಜ ಪರಿತ್ಯಕ್ತ ಜೀವಿಯು, ಮಾಡಲೇ ಬೇಕು. ಮಾಡದಿದ್ದರೆ ಉಪವಾಸ ಸಾಯಲೇ ಬೇಕು. ಉಪವಾಸ ಸಾಯುವುದೆಂದರೆ ದೀರ್ಘ ಆತ್ಮಹತ್ಯೆ!

ಅವಳಿಂದು ಒಂದು ಚಿಕ್ಕ ಮನೆಯಲ್ಲಿ, ಬೋಳಾರದ ಮಾರಿಗುಡಿಗೆ ಸ್ವಲ್ಪ ದೂರ ಒಂದು ಓಣಿಯಲ್ಲಿ, ನೆಲಸಿರುವಳು. ತನ್ನದೆಂಬ ಮನೆಯೊಂದು ಅವಳಿಗಿದೆ. ಅಲ್ಲಿ ತಂದೆತಾಯಿಗಳ ಆತಂಕವಿಲ್ಲ. ಶಾಸ್ತ್ರಬೋಧಕರ ಕಾಟವಿಲ್ಲ. ಅಮಂಗಳವೆಂಬುವವರ ಮಾತಿಲ್ಲ; ಅವಳೀಗ ನೆರೆಮನೆಯ ಶಾಂಭವಿಯಿಂದ ನರ್ತನ ಕಲಿಯುತ್ತಿರುವಳು. ಅದು ಅವಳಿಗೆ ಬಂದಿತೆಂದರೆ ಅಮಂಗಳ ವಿಧವೆಯೆನಿಸುವುದರ ಬದಲು, ಮದುವೆ

ಮುಂಜಿಗಳಲ್ಲಿ ಸುಮಂಗಳೆ, ನಿತ್ಯಸುಮಂಗಳೆಯಾಗಿ ನಲಿಯಬಹುದು. ಅವಳೀಗ ತಾನು ಚಿಕ್ಕಂದಿನಲ್ಲಿ ಕಲಿತ ಹಾಡುಗಳನ್ನು ಹಾಡುವಳು. ನಿತ್ಯ ಸಂಜೆ ಹಾಡುವಳು. ಶರೀರವನ್ನು ಹೊಸಬಟ್ಟೆಗಳಿಂದ ಶೃಂಗರಿಸುವಳು. ತಾಯಿಯು ಆಕ್ಷೇಪಿಸಿದ ಕುಂಕುಮದ ತಿಲಕವನ್ನಿಡುವಳು. ಸಂಜೆ ಅವಳು ಮನೆಜಗುಲಿಯ ಮುಂದೆ ಕುಳಿತಳೆಂದರೆ, ದೇವಾಲಯಕ್ಕೆ ಹೋಗುವ ಪುರುಷರ ಕಣ್ಣೆಲ್ಲಾ ಅವಳ ಕಡೆಗೆ. ದೇವರನ್ನು ಭಕ್ತರು ಪ್ರಾರ್ಥಿಸುವಂತೆ ಅವಳಲ್ಲಿ ಪ್ರಣಯಭಿಕ್ಷೆಯನ್ನು ಬೇಡುವವರೆಷ್ಟು ಮಂದಿಬೇಕು? ಆದರೆ, ಅವಳಿಗೆ ಆ ಆಸೆಯಿಲ್ಲ; ಅವಳಿಗೆ ಬೇಕಾದುದನ್ನು ತಂದುಹಾಕುವ ಸ್ವಾಮಿಯಿರುವನು. ಅವಳಿಂದು ತೀರ ಸುಖಿಯು. ಆ ದಿನ ಹಣ್ಣುಹಂಪಲಗಳನ್ನು ಅವಳ ಮುಂದಿರಿಸಿದ ಆ ವ್ಯಕ್ತಿಯ ದೆಸೆಯಿಂದ ತೀರ ಸುಖಿಯು.

ಇದು ನೂಲತಿಯ ಹೊರಗಿನ ಚಿತ್ರ ಅವಳು ಒಳಗೇನಾಗಿರುವಳೆಂದು ಅವಳಿಗೆ ತಿಳಿದಿದೆ. ಅವಳು ಪ್ರಫುಲ್ಲನಿಗಾಗಿ ಅಳುವುದನ್ನು ಇನ್ನೂ ಬಿಟ್ಟಿಲ್ಲ. ತನ್ನ ನೂತನ ಸ್ವಾಮಿ ರಾಮರಾಯನನ್ನು ಅವಳು ಮುದ್ದಿಡುವಳು, ಅವನ ಸಂತೋಷಕ್ಕಾಗಿ ಹಾಡುವಳು, ಕುಣಿಯುವಳು. ಆದರೆ ಅಂತರಂಗವು ಅವಳದ್ದೇ. ಅದು ಪ್ರಫುಲ್ಲನಿಗಾಗಿ ಕಾದಿರಿಸಲ್ಪಟ್ಟಿದೆ. ಅವನ ಹೊರತು ಇನ್ನಾರಿಗೂ ಅದು ದೊರೆಯದು. ಅವಳ ಜೀವನದಲ್ಲಿ ಕಾಮಲಾಲಸೆಯು ಇದ್ದಿರಲಿಲ್ಲ. ಕಾಮವ್ಯಾಪಾರದಲ್ಲಿ ಅವಳು ರಾಮ

ರಾಯನ ಪಾಲುಗತಿಯು ನಿಜ—ಆದರೆ ಆ ವ್ಯವಹಾರಗಳು ಕೇವಲ ಅವಳ ಶಾರೀರಿಕ ನಡೆಗಳು. ತನ್ನ ಶರೀರವನ್ನು, ಅನ್ನಕೊಟ್ಟು ಉಳಿಸಿದ ಉಪಕಾರಿಗಾಗಿ, ಅವಳು ದಾನಮಾಡಿದ್ದಳು. ಮನವು ಅವಳದೇ. ಆವಳ ನೆರೆಕರೆಯಲ್ಲಿ ಇದೇ ರೀತಿ ಶರೀರ ದಾನಮಾಡಿದವರನ್ನು ಅವಳು ಕಾಣುತ್ತಿರುವಳು. ಅವರಿಗಾಗಿ ಅಳುತ್ತಿರುವಳು. ಕಾರಣ—ಜನರೆಣಿಸುವಂತೆ ಅದು ಅವರ ಪಾಲಿಗೆ ಸುಲಭ ಕೆಲಸವಾಗಿದ್ದಿರಲಿಲ್ಲ. ಅವಳೀಗ ಭಯಂಕರ ಮೇಹ, ಫರಂಗಿ ಮೊದಲಾದ ರೋಗಗಳಿಗೆ ಬಲಿಯಾಗಿರುವಳು. ಅದರ ವೇದನೆಗಳನ್ನು ಉಂಡುಂಡು ನರಳುತ್ತಿರುವಳು. ಅವಳೆಷ್ಟು ಅನಾಸೆಯಿಂದ ಭೋಗಭಾಗಿಯಾದರೂ, ಅವಳನ್ನೀಪೀಡೆಗಳು ಬಿಡುವಂತಿಲ್ಲ. ಕೆಲವೇ ದಿನಗಳಲ್ಲಿ ಅವಳ ಮುಖಚಹರೆಯು ಬದಲಿಸಿತು. ಅರಳಿದ ಹೂವನ್ನು ಹುಳುಗಳು ಕಡಿದಂತೆ ಅದು ಕೆಟ್ಟಿದೆ. ಆ ಕನ್ಯಾತೇಜವಿಲ್ಲ; ಕಣ್ಣುಗಳಲ್ಲಿ ಮೊದಲಿನ ಕಾಂತಿಯಿಲ್ಲ; ಮೈಯಲ್ಲಿ ಮೊದಲಿನ ಓಜಸ್ಸಿಲ್ಲ. ಅವಳ ಮನಕ್ಕೊಪ್ಪುವ ಮೈಯ್ಯು ಅವಳಿಗಿರುವ ಬದಲು, ಅವಳ ಸ್ವಾಮಿಯ ಮನಕ್ಕೆ ಸರಿಯಾದ ಮೈ ಉಳಿದಿದೆ. ಅದನ್ನಾದರೂ ಅವಳು ಇಷ್ಟು ವ್ಯಥೆಯಿಲ್ಲದೆ ಅನುಭವಿಸುತ್ತಿರುವಳು. ತನ್ನನ್ನುಳಿಸಿದ ಸ್ವಾಮಿಗಾಗಿ ಅವಳು ಕಷ್ಟಕ್ಕೆ ಸಿದ್ಧಳಿರಬೇಡವೇ?

ಆದರೆ ಒಂದು ದಿನ ಅವಳ ಸ್ವಾಮಿಯು ಅವಳಿಂದ ದೂರವಾದನು. ಅವನೊಂದು ಕಳ್ಳತನ ಅಪಾದನೆಗೆ

ಗುರಿಯಾಗಿ, ಸೆರೆಮನೆಗೆ ಹೋಗುವಂತಾಯಿತು. ಇದವಳ ಜೀವನದಲ್ಲಿ ಇನ್ನೊಂದು ಘಾತ! ಒಂದೆರಡು ತಿಂಗಳುಸಹ ರಾಮರಾಯನೊಡನೆ ಬಾಳ್ವೆ ನಡೆಯಿಸಲಿಲ್ಲ. ನೂರಾರು ವರುಷ ಬಾಳ್ವೆ ನಡೆಯಿಸಿದವರಿಗೆ ಬರುವ ಸಂಪತ್ತೆಲ್ಲಾ ಬಂತು. ಶರೀರಬೇನೆಗಳಿಗಾಗಿ ನರಳಿದಷ್ಟು ಮುಗಿಯುವಂತಿಲ್ಲವಾಯಿತು. ಪಾಪದ ಹುಡುಗಿ, ಇನ್ನವಳಿಗೆ ಕಣ್ಣೀರು ತಪ್ಪದು. ತಿರುಗಿ ಊಟಕ್ಕಾಗಿ ಅವಳು ಪರಾಶ್ರಯ ಸೇರಲೇ ಬೇಕು. ತಾನು "ಸಾರ್ವಜನಿಕ ಭೋಗಾಲಯ"ವಾಗಬೇಕೆಂಬ ಕಲ್ಪನೆಯು ಅವಳ ಎದೆಯನ್ನೊಡೆಯುವಷ್ಟು ವೇದನೆಯನ್ನುಂಟುಮಾಡಿತು. ಆದರೆ ಆದರೇನು? . . . . ತಿರುಗಿ ಮೂರು ನಾಲ್ಕು ದಿನ ಉಪವಾಸಬಿದ್ದಳು. ತಿರುಗಿ ಹೊಟ್ಟೆಯ ಸಲುವಾಗಿ ಪರರ ಸಹಾಯವನ್ನು ಇದಿರುಕಾಣತೊಡಗಿದಳು. ಈಗ ಅವಳಾಗಿ ಬೇಡುವವಳಾದಳು. ನಿತ್ಯ ಮನೆಯ ಹೊರ ಜಗುಲಿಯಲ್ಲಿ ಕುಳಿತುಕೊಳ್ಳುವುದು. ಎವೆಯಿಕ್ಕದೆ ಹಾದಿಹೋಕರನ್ನು ನೋಡುವುದು. ಅವಳ ಕಡೆಗೆ ನೋಡಿದವರ ಕಡೆಗೆಲ್ಲಾ ಕಣ್ಣುಸನ್ನೆ ಮಾಡುವುದು. ನಾಲ್ಕೇ ನಾಲ್ಕು ದಿನಗಳಲ್ಲಿ ಅವಳ ಕಣ್ಣಾಲಿಗಳು ಈ ಉದ್ಯೋಗದಿಂದ ಬಾತಿದುವು. ಒಂದೊಂದು ಬೊಗಸೆಯಷ್ಟು ಗಾತ್ರವಾದುವು. ಆದರೆ ಅಂಥ ಕಣ್ಣುಗಳಿಲ್ಲದೆ ಅವಳ ಉದ್ಯೋಗ ಸಾಗಲಾರದು.

ನಿತ್ಯ ಯಾರಾದರೂ ಪ್ರಣಯಿಗಳು ಅವಳಿರು

ವಲ್ಲಿಗೆ ಬರುವರು. ಶಾಸ್ತ್ರಕಾರರು, ವ್ಯಾಪಾರಿಗಳು, ಕೂಲಿಕಾರರು, ಎಲ್ಲರೂ ಜಾತಿ, ನೀತಿಗಳು ಈ ರಾಜ್ಯದಲ್ಲಿ ಸಂಚರಿಸವು. ಅವಳೀಗ ಪಾಪಪುಣ್ಯಗಳ ಕಡೆಗೆ ಕಣ್ಣಿಟ್ಟುಕೊಳ್ಳದೆ ತನ್ನ ವ್ಯವಸಾಯುವನ್ನು ನಡೆಯಿಸಬೇಕಾಗಿದೆ. ತನ್ನಲ್ಲಿಗೆ ಬಂದವರನ್ನು ಅವಳು ಇಷ್ಟಿಷ್ಟು ನೋಯಿಸಬಾರದು. ಎಷ್ಟೋ ಬಾರಿ, ಇಬ್ಬರು ವೈರಿಗಳು ಅವಳಲ್ಲಿಗೆ ಬರುವರು. ಒಬ್ಬರನ್ನು ಸ್ವೀಕರಿಸಿದರೆ ಇನ್ನೊಬ್ಬರಿಗೆ ಕೋಪ. "ಇಂದೆನಗೆ ಆರೋಗ್ಯವಿಲ್ಲವೆಂದು"–ನೆಪಹೇಳಿ ಅವರನ್ನು ಕಳುಹಿಸುವಳು. ಜಗವು ಮಾಲತಿಯು ಲಜ್ಜೆಗೇಡಿಯೆನ್ನಬಹುದಾದರೂ ದುಃಖಿಯಲ್ಲವೆಂದು ತಿಳಿದಿದೆ. ಮಾಲತಿಗೆ ತಾನು ಲಜ್ಜೆಗೇಡಿ ಅಹುದು, ಸುಖಿಯಲ್ಲವೆಂದು ತಿಳಿದಿದೆ. ಇನ್ನಾದರೂ ಪ್ರಫುಲ್ಲನ ನಿಷ್ಠಾವಂತ ಪತ್ನಿಯುವಳು. ಅವಳ ಮೈಯ ಪಾವಿತ್ರ್ಯವು ಧ್ವಂಸವಾಗಿದೆ; ಮನದ ಪಾವಿತ್ರ್ಯವು ಉಳಿದಿದೆ. ಆಚ್ಚಳಿಯದೆ ಉಳಿದಿದೆ.

ಅವಳಿಗೀಗ ೧೭ನೆಯ ವಯಸ್ಸು ಪೂರ್ತಿಯಾಗಲಿಲ್ಲ. ಆದರೂ ದಿನ ಹೋಗುತ್ತ ಅವಳಲ್ಲಿ ಬರುವ ಜನರ ಸಂಖ್ಯೆಯು ಒಮ್ಮೆಗೇ ತಗ್ಗತೊಡಗಿತು. ಒಮ್ಮೆ ಬಂದವರು ತಿರುಗಿ ಬರಲಂಜತೊಡಗಿದರು. ತಂತಮ್ಮವರೊಳಗೆ-'ಅದೊಂದು ವಿಷಕೂಪ'ವೆಂದು ಸಾರತೊಡಗಿದರು. ಅದನ್ನು ಕೇಳಿ ಸಾಮಾನ್ಯ ಉತ್ಸಾಹಿಗಳು ಹಿಂಜರಿದರು. ತೀರ ಉದ್ಧಟರುಮಾತ್ರ ಅವಳಲ್ಲಿಗೆ ಬರುವರು. ಆದರೆ ಅವರಲ್ಲಿ ಕಾಸೆಲ್ಲಿ? ಅವರನ್ನು ಪಚರಿಸಿದುದರಿಂದ

ಒಂದುಹೊತ್ತು ಊಟವೂ ಸಹ ದೊರೆಯುವಂತಿದ್ದಿಲ್ಲ.

ಇಂದು ಬೋಳಾರದ ಮಾರಿಗುಡಿ ಜಾತ್ರೆಯ ದಿನ. ಕುರಿಕೋಣಗಳನ್ನು ಕಡಿಯುವ ಭಾರಿ ಹಬ್ಬ. ಅದನ್ನು ನೋಡಲು ಅಷ್ಟೇ ಚತುರರಾದ ನೂರಾರು ಜನರು ಓಡೋಡಿ ಹೋಗುತ್ತಿರುವರು. ಸಾಲುಸಾಲಾಗಿ ಶಾಲೆಯ ಹುಡುಗರು ಕೇವಲ ತಮಾಷೆನೋಡಲು ಹೋಗುತ್ತಿದ್ದರು. ಮಾಲತಿಯು ತೀರ ಬೆಡಗಿನ ಉಡುಗೆಯನ್ನು ಧರಿಸಿಕೊಂಡು ನಿತ್ಯದಂತೆ ಹೊರಜಗುಲಿಯ ಮೇಲೆ ಕುಳಿತು ಗಾಳವನ್ನೆಸೆಯುತ್ತಿದ್ದಳು. ಒಮ್ಮೆಗೇ ಅವಳ ದೃಷ್ಟಿಯು ಓರ್ವ ತರುಣನ ಮೇಲೆ ಬಿದ್ದಿತು. ಮುಖವು ವಿವರ್ಣವಾಯಿತು. ಕೂಡಲೆ ಅವಳು ಮನೆಯೊಳಕ್ಕೋಡಿಹೋದಳು. ಅಂದವಳ ಉಪವಾಸ ವ್ರತದ ಆರನೆಯದಿನ. ಈಗೀಗ ಅವಳಿಗೆ ಉಪವಾಸವೆಂದರೆ ನಿತ್ಯದ ಆಚಾರ. ಅದರಲ್ಲಿ ಆಶ್ಚರ್ಯವೇನಿಲ್ಲ. ಆದರೂ, ಹಬ್ಬದ ನೆಪದಿಂದ ಒಂದು ತುತ್ತು ಅನ್ನವನ್ನು ನಿರೀಕ್ಷಿಸದ ಅವಳು ಅದನ್ನು ಮರೆತು ಒಳಗೋಡಿಹೋದಳು ಇದು ಆ ತರುಣನ ಕಣ್ಣಿಗೂ ಗೋಚರಿಸಿತು. ಅವನು ಹಾಗೆಯೇ ಜಾತ್ರೆಗೆ ಮುಂದರಿದನು ಬರುವಾಗ ಸಂಜೆಯಾಗಿ ಕತ್ತಲೆ ಆಯಿತು. ಗೆಳೆಯರೊಂದಿಗೆ ಮರಳುವಾಗ ಅಲ್ಲೆ ನಿಂತನು. ಜನಸಂದಣಿಯಲ್ಲಿ, ಮಾತಿನಲ್ಲಿ ಮಗ್ನರಾದ ಗೆಳೆಯರು ಮುಂದರಿದುಬಿಟ್ಟರು. ತರುಣನು — ನಿಂತಲ್ಲಿಯೇ

ಯೋಚಿಸತೊಡಗಿದನು. ಹಾದಿಹೋಕರು ಆವನನ್ನು ನೂರಾರು ಬಾರಿ ಎಡವಿ ಮುಂದೆ ಸರಿದರು. ಅವನಿಗದರ ಪರವೆಯಿದ್ದಿಲ್ಲ. ಅವನೀಗ ಮಾಲತಿ ದೇವಿಯ ದರುಶನಕ್ಕೆ ಮುಂದರಿಯಬೇಕೆಂದಿರುವನು. ಅವನ ಮನದಲ್ಲಿ ಸಂಶಯ, ಸಂತಾಪ, ಭೀತಿಗಳು ಉಕ್ಕೇರುತ್ತಿವೆ. ಕೊನೆಗೆ ಹಿಂದುಮುಂದೆ ನೋಡದೆ ಮನೆಯೊಳಕ್ಕೆ ನುಗ್ಗಿದನು.

ಮಾಲತಿಯು ಒಂದು ಮುರುಕು ಮಂಚದ ಮೇಲೆ ನಸುಗತ್ತಲಲ್ಲಿ ಕುಳಿತಿದ್ದಳು. ಎಣ್ಣೆಯಿಲ್ಲದ ದೀಪವೊಂದು ಸ್ವಲ್ಪ ದೂರದಲ್ಲಿ ತೂಕಡಿಸುತ್ತಿತ್ತು. ತರುಣನು ಏನೂ ಸಂಶಯವಿಲ್ಲದವನಂತೆ ಮುಂದರಿದು ಮಾಲತಿಯ ಬಳಿ ಹೋಗಿ ಕುಳಿತನು. ಮಾಲತಿಯು ಎದ್ದೋಡಲೆತ್ನಿಸಿದಳು. ತರುಣನು ಅವಳ ಕೈಯನ್ನು ಬಲವಾಗಿ ಹಿಡಿದನು. ಅವನ ಎದೆಯು ಆವೇಗದಿಂದ ಬಡಿಯುತ್ತಿತ್ತು. ಕಂಠವು ಗದ್ಗದಿತವಾಯಿತು. ಮಾಲತಿಯ ಪಾಡಾದರೂ ಅದೇ. ತರುಣನು ತಡೆಯಲಾರದ ದುಃಖದಿಂದ 'ಮಾಲತೀ' ಎಂದು ಅವಳನ್ನು ತಬ್ಬಿಕೊಂಡನು. ಮಾಲತಿಯು ಮಾತನಾಡಲಾರಳು. ತರುಣನು ಮಿತಿಮೀರಿದ ದುಃಖದಿಂದ ಅವಳ ಕಾಲಿಗೆರಗಿದನು. ಮಾಲತಿಯು ಅವನನ್ನೆತ್ತಿ ಹಿಡಿದಳು.

ಪಾಪದ ಪ್ರಫುಲ್ಲ! ಮಾಲತಿಯನ್ನು ಅವನು ತಿರುಗಿ ಹೀಗೆ ಕಾಣಬೇಕೆ? ಆ ದಿನ ಅವಳು ಓಡಿ

ಹೋದಮೇಲೆ ತನ್ನ ಮೂರ್ಖತೆಗಾಗಿ ಅವನು ತುಂಬಾ ಅತ್ತನು. ಆ ಕೈತಪ್ಪಿದ ಹಕ್ಕಿಗಾಗಿ ಅವಳಣ್ಣನೊಡನೆ ಊರೆಲ್ಲ ತೊಳಲಿದನು. ಆದರೆ ಎಲ್ಲಿಯೂ ಮಾಲತಿಯು ಕಾಣಸಿಗಲಿಲ್ಲ. ಅವಳು ಸಿಕ್ಕಿದರೆ— ಸಮಾಜವಲ್ಲ, ಪ್ರಪಂಚವೇ ತನ್ನೆದುರು ಬಂದರೂ, ಲಕ್ಷಿಸದೆ ಅವಳನ್ನು ವಿವಾಹಿತನಾಗುವೆನೆಂದು ಪ್ರತಿಜ್ಞೆಮಾಡಿದನು. ಹೀಗೆ ದಿನಗಳು ಸರಿದುವು, ತಿಂಗಳುಗಳೂ ಸರಿದುವು. ಅವನೀಗ ತನ್ನ ಕಾಲೇಜಿಗೆ ಬಂದಿರುವನು. ವ್ಯಾಸಂಗಮಾಡುತ್ತಿರುವನು. ಮನಸ್ಸು ಮಾತ್ರ ಸದಾ ಮಾಲತಿಯ ವ್ಯಾಸಂಗದಲ್ಲಿತ್ತು. ತಾನೆಂಥ ಹೇಡಿ ಎಂದು ಅವನಿಗೆ ಕ್ಷಣಕ್ಷಣಕ್ಕೂ ಅನಿಸುತ್ತಿತ್ತು.

ಈಗವಳನ್ನು ಕಂಡಬಳಿಕ ತಿರುಗಿ ಅವಳ ಮನೆಗೆ ಬರುವತನಕ ಅವನೇನಾಗಿದ್ದನೋ ಅವನಿಗೆ ತಿಳಿಯದು 'ಅವಳು ಅಲ್ಲೇನು ಮಾಡುತ್ತಿರುವಳು — ಅವಳ ಜೀವನವು ಹೇಗೆ ಸಾಗುತ್ತಿದೆ, ಅವಳ ಅವಸ್ಥೆಯೇನು' — ಇವನ್ನು ಯೋಚಿಸಿ ಯೋಚಿಸಿ ಬೇಸತ್ತನು. ಆಗಲೇ ಅವಳಿರುವಲ್ಲಿ ಓಡಿಬರುತ್ತಿದ್ದನು. ಆದರೆ ಅದೇ ಭೀರುತನ. ಬಳಿಯಲ್ಲಿರುವ ಗೆಳೆಯರೇನೆನ್ನುವರೋ ಎಂಬ ಅಂಜಿಕೆ! ಕೊನೆಗೆ ಅದನ್ನು ಮೀರಿ ಅಲ್ಲಿಗೆ ಧುಮುಕಲು ಶಕ್ತನಾದನು. ಪುಣ್ಯಕ್ಕೆ ಗೆಳೆಯರಾರೂ ಅವನ ಈ ಕೃತಿಯನ್ನು ಕಾಣಲಿಲ್ಲ. ಈಗವನು ತನ್ನ ಮಾಲತಿಯ ಪಾದಗಳನ್ನು ಹಿಡಿದು ತನ್ನ ಹೇಡಿತನಕ್ಕಾಗಿ ಕ್ಷಮೆಕೇಳುತ್ತಿರುವನು. ಅವನೀ ಅವಸ್ಥೆಯನ್ನು

ಕಂಡು ಮಾಲತಿಗೆ ಕನಿಕರವುಂಟಾಗಿ ಅವನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡಳು.

"ಪ್ರಫುಲ್ಲಾ, ತಿರುಗಿ ಈ ದುರ್ದೈವಿಯನ್ನು ಕಾಣಲು ಬಂದೆಯೇಕೆ?"

"ಮಾಲತಿ, ಸುಮ್ಮನೆ ನನ್ನನ್ನು ವ್ಯಥೆಗೆ ಗುರಿಮಾಡಬೇಡ. ನಾನು ಅಪರಾಧಿಯು ನಿಜ. ನನ್ನ ಭೀರುಸ್ವಭಾವದಿಂದ ನಿನಗೀ ಸಂಕಟವು ಪ್ರಾಪ್ತಿಸಿತು. ಆದರೆ, ಮಾಲತಿ ಇಂದು—ನಾನು ಸಮಾಜವನ್ನು ಮೀರಲು ಸಿದ್ಧನಿರುವೆ. ನಿನ್ನನ್ನು ಬಹಿರಂಗವಾಗಿ ವಿವಾಹಿತನಾಗಲು ಸಿದ್ಧನಿರುವೆ. ಈ ವಿಷಯದಲ್ಲಿ ನನ್ನ ಮಾತಾಪಿತೃಗಳ ಮಾತನ್ನು ಕೇಳದೆ ಇರಲೂ ಸಿದ್ಧನಿರುವೆ."

ಮಾಲತಿಯು ಮೌನ.

"ಮಾಲತಿ ನನಗೆ ಕ್ಷಮೆಯಿಲ್ಲವೇ. ನನ್ನನ್ನು ಸ್ವೀಕರಿಸಲಾರೆಯಾ?"

ಮಾಲತಿ: ನಿರುತ್ತರ.

"ಮಾಲತಿ. ನೀನು ನನ್ನನ್ನು ಪ್ರೀತಿಸುವುದಿಲ್ಲವೇ?"

ಈಗಲೂ ಅವಳು ಸುಮ್ಮನಿರಬಲ್ಲಳೇ. ಅವನ ಪ್ರೀತಿಗಾಗಿ ಕಣ್ಣೀರನ್ನು ಕೆಡೆಯದ ದಿನವಿಲ್ಲ.

"ಪ್ರಫುಲ್ಲಾ, ನಿನ್ನ ಮೇಲಿನ ನನ್ನ ಪ್ರೇಮವು ನಾನು ಸಾಯುವ ತನಕವೂ ಅಳಿಯದು. . ."

"ಹಾಗಾದರೆ ಗೆಳತಿ—ನಾವು ವಿವಾಹವಾಗೋಣವೇ?"

“ಪ್ರಫುಲ್ಲಾ ಕ್ಷಮಿಸು. ಅದು ಮೀರಿದ ಮಾತು.”

“ಏನು, ನೀನಿನ್ನು ಯಾರನ್ನೂ ವಿವಾಹಿತೆಯಾಗುವುದಿಲ್ಲೆಂದು ವಚನ ಹೊತ್ತಿರುವೆಯಾ.”

“ಇಲ್ಲ”

“ಅಂದ ಮೇಲೆ— ”

“ಗೆಳೆಯ—ನಿನ್ನ ಎದೆಯನ್ನೊಡೆಯುವ ನುಡಿಯನ್ನು ಕೇಳಲು ಸಿದ್ಧನಾಗು. ನಾನಿಂದು ಗರತಿಯಲ್ಲ—ಸೂಳೆಯು.”

ಪ್ರಫುಲ್ಲನ ತಲೆಯ ಮೇಲೆ ಸಿಡಿಲೇ ಬಡೆಯಿತು.

“ನಾನಿಂದು ನೂರಾರು ವಿಷ ಜೀವಿಗಳ ಭೋಗಾಲಯವು; ರೌರವ ನರಕವು. ನನ್ನಿಂದ ವಿಷವಲ್ಲದೆ ನಿನಗೆ ಜೀವನದಲ್ಲಿ ಅಮೃತವು ಸಿಗುವಂತಿಲ್ಲ. ಇನ್ನು ನೀನು ನನ್ನನ್ನು ವಿವಾಹವಾಗಲು ಸಾಧ್ಯವಿಲ್ಲ.”

ನಿಜ ಸೂಳೆಯನ್ನು ಪ್ರಫುಲ್ಲನು ಮದುವೆಯಾಗುವುದೇ? ವಿಧವಾವಿವಾಹಕ್ಕಿಂತ ಒಂದು ಹೆಜ್ಜೆ ಮುಂದೆ.

ಪ್ರಫುಲ್ಲನು ಏನೆಂದು ಉತ್ತರಿಸಬೇಕು. ವಿಧವಾವಿವಾಹಕ್ಕೆ ಮೊದಲಿಗೇ ಅಂಜಿದವನು ಈಗ ವೇಶ್ಯಾವಿವಾಹಕ್ಕೆ ಮುಂದರಿಯ ಬಲ್ಲನೇನು?

ಆದರೆ ಪಾಪದ ಹುಡುಗನ ಯೋಚನೆಯ ಗತಿಯು ಭಿನ್ನವಾಗಿದೆ. ‘ಅವಳನ್ನು ತಾನು ಆ ಅವಸ್ಥೆಗೆ ತಂದಿಕ್ಕಿದವನು. ಅವಳನ್ನಾದಿನ ಉಳಿಸಿದುದರಿಂದ ಅವಳಿಂದು ಸೂಳೆಯಾಗಿ ಬದುಕಿರುವಳು. ಅವಳಿಗೆ ಸುಖವನ್ನುಂಟುಮಾಡುವ ಆಸೆಯಿಂದ ಅವಳನ್ನು ಬದು

ಕಿಸಿ, ವಿವಾಹವಾಗಲು ಅಂಜಿ, ದೇಶಭ್ರಷ್ಟಳನ್ನಾಗಿ ಮಾಡಿದ ಪಾಪವು ಯಾರಿಗೆ? ಅಂಥವಳನ್ನು ವರಿಸಲು ಬಾಧ್ಯರಾರು? ನಾನೇ'—ಹೀಗೆಂದು ಅವನ ನಿರ್ಧಾರ.

"ಮಾಲತಿ, ನೀನೆಂಥವಳಿದ್ದರೂ ನಿನ್ನನ್ನು ನಾನು ವರಿಸುವೆ. ನೀನು ಇಂದು ಪಾಪಮಾರ್ಗದಲ್ಲಿದ್ದರೆ ಅದಕ್ಕೆ ಕಾರಣನು ನಾನು. ಆದುದರಿಂದ ಅದರ ಅಪಮಾನಕ್ಕೆ ನಾನೇ ಭಾಗಿಯು. ಜಗವು ಇಂದು ನನ್ನ ತಪ್ಪಿಗಾಗಿ ನನ್ನನ್ನು ಅಪಮಾನದ ಬೆಂಕಿಯಲ್ಲಿ ಉರಿಸಿದರೂ ನಾನಿಂದು ನಿನ್ನನ್ನು ಬಹಿರಂಗವಾಗಿ ವರಿಸಲು ಸಿದ್ಧನಿರುವೆ"

ಇದಕ್ಕೇನು ಉತ್ತರವನ್ನು ಮಾಲತಿಯು ಕೊಡಬಲ್ಲಳು? ಈಗ ಪ್ರಫುಲ್ಲನು ಕಾಲನ್ನು ಹಿಡಿಯುವುದು ಅವಳ ಸರದಿ. ಅದಕ್ಕಾಗಿ ಅವಳು ಅವನನ್ನು ಕುರಿತು—"ಗೆಳೆಯಾ, ಇನ್ನು ಮುಂದೆ ನನ್ನ ಯೋಚನೆಯನ್ನು ಬಿಡು. ತಿರುಗಿ ಅವಳು ಗರತಿಯಾಗಲಾರಳು. ನನ್ನನ್ನು ಸಂಪೂರ್ಣ ಮರೆಯುವುದರಲ್ಲಿಯೇ ನಿನ್ನ ಸುಖವಿದೆ. ನೀನು ಕೊನೆಗಾದರೂ ನಿನ್ನ ಹೇಡಿತನವನ್ನು ಬಿಟ್ಟೆಯೆಂಬ ಆನಂದವು ತಿರುಗಿ ನನ್ನಲ್ಲಿ ಉಳಿಯುವುದು. ಆದರೆ, ನನ್ನ ಜೀವನವು ಕೆಟ್ಟಂತೆ ನಿನ್ನ ಬಾಳ್ವೆಯನ್ನು, ನಿನ್ನ ಮೇಲಿನ ಮಮತೆಯಿಂದ ಕೆಡಿಸಲಾರೆ"—ಹೀಗೆಂದಳು. ತಿರುಗಿ ಮಾತನಾಡುವುದರಿಂದ ಏನೂ ಉಪಯೋಗವಾಗಲಿಲ್ಲ. ಪ್ರಫುಲ್ಲನು

ಅಲ್ಲಿಂದ ತನ್ನ ಕಾಲುಗಳನ್ನು ಎಳೆದುಕೊಂಡು ಹೊರಗೆ ಬಂದನು ಬಾಗಿಲಲ್ಲಿ ನಿಂತಾಗ ಮಾಲತಿಯು ಮೈಮರೆತು ಅವನ ಕಪೋಲವನ್ನು ಚುಂಬಿಸಿದಳು. ಕೊನೆಗವನ ಸುಖಕ್ಕಾಗಿ ಅವನನ್ನು ಹೊರಕ್ಕೆ ತಳ್ಳಿ ಕದವನ್ನಿಕ್ಕಿದಳು.

ಅದೇ ಮರುದಿನ, ಪ್ರಫುಲ್ಲನ ಗೆಳೆಯರು ಅವನನ್ನು ಹಾಸ್ಟೆಲಿನ ಭಾವಿಯಲ್ಲಿ ಕಂಡರಂತೆ.

## ೭. ಅಣ್ಣಾತಂಗಿಯರ ಭೇಟಿ.

ಮಹೇಶನೊಬ್ಬನಿಗಲ್ಲದೆ ಇನ್ನಾರಿಗೂ ಪ್ರಫುಲ್ಲನ ಮರಣದ ವಿಚಾರ ತಿಳಿಯದು. ಪ್ರಫುಲ್ಲನು ಸಾಯುವ ಮೊದಲು ತನ್ನ ಗೆಳೆಯನಿಗೆ ಮಾಲತಿಯ ವಿಚಾರವನ್ನೂ ಅವಳಿರುವ ಸ್ಥಳವನ್ನೂ, ಹೇಗಾದರೂ ಅವಳನ್ನು ಉಳಿಸಬೇಕೆಂಬ ಅವನ ಕಾಂಕ್ಷೆಯನ್ನೂ ತಿಳಿಸಿದನು. ಮಹೇಶನಿಗೆ ಪತ್ರವನ್ನು ಓದಿ ಎಷ್ಟು ದುಃಖವಾಗಿರಲಿಲ್ಲ. ಅದೂ ತಮ್ಮೆಲ್ಲರ ನಿರ್ದಯೆಯಿಂದ ಅವಳಿಂದು ತನ್ನ ಮಾನ ವಿಕ್ರಯಕ್ಕೆಕುಳಿತಿರಬೇಕಾಯಿತೆಂದು ತಿಳಿಯಲು ಪತ್ರದ ತುದಿಯಲ್ಲಿ—“ಮಹೇಶ, ನಾನು ನನ್ನ ಅಪರಾಧಕ್ಕಾಗಿ ಸಾಯುತ್ತೇನೆ. ನಿನಗೆ ನಿನ್ನ ತಂಗಿಯನ್ನು ಕಂಡು ದುಃಖವಾಗದೇನು? ನಾನವಳನ್ನು ಕಂಡಾಗ ಅವಳು ಕನಿಷ್ಠ ನಾಲ್ಕಾರು ದಿನಗಳ ತನಕ ಉಪವಾಸಮಾಡಿದವಳಂತೆ ಕಾಣುತ್ತಿತ್ತು. ಅವಳ ಮಾತುಗಳ ಮೇಲಿಂದಂತು ಕೇವಲ ದಾರಿದ್ರ್ಯದಲ್ಲಿ

ವಳು ಇರುವಳೆಂದೂ, ದಾರಿದ್ರ್ಯವೇ ಅವಳನ್ನು ಈ ಹೀನ ಅವಸ್ಥೆಗೆ ಮುಟ್ಟಿಸಿದುದೆಂದೂ ತಿಳಿದುಬಂದಿತು. ಅವಳ ರೀತಿಯನ್ನು ಕಂಡು ನಿನಗೆ ದುಃಖವಾಗಬಹುದು. ಆದರೆ ಅವಳ ಮೇಲೆ ಸಿಟ್ಟಾಗಬೇಡ. ಅವಳ ಬಡತನದಲ್ಲಿ ಅವಳಿಗೊಂದು ತುತ್ತನ್ನು ಕೊಡುವುದು ನಿನ್ನ ಕರ್ತವ್ಯವೆಂದು ಮರೆಯಬೇಡ."—ಎಂದು ಬರೆದಿತ್ತು. ಅಲ್ಲಿನವರೆಗೆ ತಂಗಿಯನ್ನು ಕಳೆದುಕೊಂಡ ಚಿಂತೆಯು ಅವನ ತಲೆಯಲ್ಲಿತ್ತಾದರೂ ಅವನಿಗೆ ಉಣ್ಣುವುದಕ್ಕೆ ತಿನ್ನುವುದಕ್ಕೆ ಬರಗಾಲವಿದ್ದಿಲ್ಲ. ಮಾಲತಿಯು ಉಪವಾಸವಿರುವಳೆಂಬುದು ತಿಳಿದೊಡನೆಯೇ ತಾವು ಮೂರ್ಖರೆಂದು ಅವನಿಗೆ ಮತ್ತಷ್ಟು ಸ್ಪಷ್ಟವಾಯಿತು.

ಮಧುಕರನ ತಲೆಯು ಮಾಲತಿಯ ನಿರ್ಗಮನದಿಂದ ಸ್ವಲ್ಪ ತಿರುಗಿದೆ. ಮಾಲತಿಯು ಹೊರಟುಹೋದ ದಿವಸವೇ ಅವನ ಮದುವೆ. ಮದುವಣಿಗನ ಮೋರೆಗೇ ಮಹೇಶನು ಮಾತನಾಡಿದನು. 'ಮುಪ್ಪಿನ ಕಾಲದ ನಿಮ್ಮ ಮದುವೆಯು ನಿಮಗೆ ತಪ್ಪೆನಿಸುವುದಿಲ್ಲ, ಅನಾಥ ಬಾಲೆಯ ಪುನರ್ವಿವಾಹವು ಧರ್ಮವಿರುದ್ಧವಾಗಿ ಕಾಣುವುದು, ಅವರ ಜುಟ್ಟನ್ನು ಕತ್ತರಿಸಿದರೆ ಸಂತೋಷ ಕಾಣಿಸುವುದು' ಎಂದನು. ಅವನಿಗೀಗ ತನ್ನ ಅಪರಾಧವು ತಿಳಿದಿದೆ. ಆದರೆ ತಿಳಿಯುವುದರಲ್ಲಿ ಬೆಳಗಾಗಿ ಹೋಗಿದೆ. ಮಾಲತಿಯು ಕೈತಪ್ಪಿಹೋಗಿದ್ದಳು. ಮಗನ ಬಾಯಿಯಿಂದ ತನ್ನ ಮೃತಪತ್ನಿಯ

ಮರಣವಾಕ್ಯಗಳನ್ನು ಕೇಳಿದ ಬಳಿಕಂತೂ ಅವನ ದುಃಖವು ಇಮ್ಮಡಿಯಾಯಿತು. ಆದರೆ ದಿನಗಳು ಸರಿಯಲು ಚಿಂತೆಯು ತನ್ನಂತೆಯೇ ಮಾಯವಾಯಿತು. ತಿರುಗಿ ಮನೋವಿಚಾರಗಳು ಪೂರ್ವದ ಸಂಕುಚಿತ ಮೇರೆಯನ್ನೇ ತಾಳಿದುವು. ಆದುದರಿಂದ ಮಾಲತಿಯು ವೇಶ್ಯೆಯಾಗಿರುವಳು ಎಂಬ ವಿಚಾರವನ್ನು ಅವನಿಗೆ ತಿಳಿಸಿದರೆ ಅವನು ಕನಿಕರ ಪಡುವ ಬದಲು ಕುಪಿತನಾಗುವನು ಎಂಬುದು ಮಹೇಶನಿಗೆ ತಿಳಿದಿತ್ತು. ಆದುದರಿಂದವನು ಸದ್ದಿಲ್ಲದೆ, ಏನೋ ಒಂದು ನೆಪದಿಂದ ಮಂಗಳೂರಿಗೆ ಬಂದನು. ಬಂದ ದಿನವೇ, ತನ್ನ ಗೆಳೆಯನು ತಿಳಿಸಿಹೋದ ವಿಳಾಸದ ಮೇಲಿಂದ ಮಾಲತಿಯ ಮನೆಯನ್ನು ಹುಡುಕಾಡ ತೊಡಗಿದನು. ರಾತ್ರಿ ೧೧ ಘಂಟೆಯ ಸಮಯಕ್ಕೆ ಅತಿ ಕಷ್ಟದಿಂದ ಸರಿಯಾದ ಮನೆಯು ಸಿಕ್ಕಿತು. ಮನೆಯ ಕದವು ಇಕ್ಕಲ್ಪಟ್ಟಿತ್ತು. ಮಹೇಶನಿಗೆ ಅದನ್ನು ತಟ್ಟುವ ಧೈರ್ಯವಾಗಲಿಲ್ಲ. ಮೆಲ್ಲನೆ "ಮಾಲತಿ" ಎಂದು ಒಂದೆರಡು ಬಾರಿ ಕರೆದನು. ಮಾಲತಿಯು ನಿರಶನ ವ್ರತದ ಸುಖವನ್ನುಂಡು ಮಲಗಿದ್ದಳು. ಶರೀರಾಯಾಸದಿಂದ ಬೇಗನೆ ಎಚ್ಚರವಾಗುವಂತಿದ್ದಿಲ್ಲ. ಅರೆ ಮಿಣುಕು ದೀಪವೊಂದು ಬಳಿಯಲ್ಲಿ ಉರಿಯುತ್ತಿತ್ತು. ಅವಳು ಮೈಮೇಲೆ ಧರಿಸಿದ ನಕಲಿ ಜರತಾರಿಯ ಶೀರೆಯ ಮೇಲೆ ಅದರ ಬೆಳಕು ಬಿದ್ದು ಮಿರುಗುತ್ತಿತ್ತು. ಮಹೇಶನು ಹೊರ ಜಗುಲಿಯ ಮೇಲೆ ನಿಂತು ಅರ್ಧ ತಾಸಾಯಿತು.

ಇದೇ ಮನೆ ಅಹುದೇ ಅಲ್ಲವೇ ಎಂಬ ಸಂಶಯವು ಬಂದಿತು. ಸ್ವಲ್ಪ ಗಟ್ಟಿಯಾಗಿ ಕರೆದನು. ಆದರೂ ಮರುತ್ತರವಿಲ್ಲದುದನ್ನು ಕಂಡು ಮರಳುವ ನಿಶ್ಚಯ ಮಾಡಿದನು. ಆದರೆ, ಹೊರಡುವ ಮುಂಚೆ ಬಾಗಿಲನ್ನೊಮ್ಮೆ ಗಟ್ಟಿಯಾಗಿ ತಟ್ಟುವ ಸಾಹಸಮಾಡಿದನು.

ಬಾಗಿಲ ಬಡಿತದ ಸದ್ದು ಮಾಲತಿಯನ್ನು ಎಚ್ಚರ ಮಾಡಿತು. ಅವಳು ಕೂಡಲೆ ಎದ್ದು ಕುಳಿತಳು. ಮೈಮೇಲಿನ ಸೆರಗನ್ನು ಸರಿಪಡಿಸಿಕೊಂಡು, ಒಮ್ಮೆಗೇ ಕದದ ಕಡೆಗೆ ಹೋದಳು. ಅಂಥ ಸದ್ದನ್ನು ಕೇಳದೆ ಆರೆಂಟು ದಿನಗಳ ಮೇಲಾಗಿತ್ತು. ಈಗಾದರೂ ಒಂದು ತುತ್ತು ಅನ್ನ ದೊರೆಯುವುದೆಂಬ ಆಸೆಯಿಂದ ಓಡೋಡಿ ಕದವನ್ನು ತೆರೆಯಹೋದಳು. ಬಾಗಿಲಿನಿಂದ ಅವಳು ಮಲಗಿದ್ದ ಕೊಟಡಿಯ ತನಕ ಚಿಕ್ಕದೊಂದು ಪಡಸಾಲೆಯಿತ್ತು. ಅಲ್ಲಿ ಬೆಳಕಿಲ್ಲದ ಕಾರಣ, ಬಾಗಿಲು ತೆರೆದೊಡನೆಯೇ ಬಂದ ವ್ಯಕ್ತಿಯಾರೆಂದು ಅವಳಿಗೆ ತಿಳಿಯಲಿಲ್ಲ. ಅವನಿಗಾದರೂ ಅದು ಮಾಲತಿಯೆಂಬುದು ಹೊಳೆಯಲಿಲ್ಲ. ಮಾಲತಿಯು ತನ್ನ ಆ ದಿನದ ಅನ್ನದಾತನಾರೆಂದು ಮಾತನಾಡಿಸುವ ಗೋಜಿಗೆ ಹೋಗದೆ ಅವನನ್ನು ಆದರದಿಂದ ಬರಮಾಡಿದಳು ಅವನ ಕೈಯ್ಯನ್ನು ಹಿಡಿದುಕೊಂಡು ಒಳ ಕೊಟಡಿಗೆ ಒಯ್ಯಲು ಹೊರಟಳು. ಹಾದಿಯಲ್ಲಿ ತನ್ನ ಅತಿಶಯ ಪ್ರೇಮವನ್ನು ತೋರಿಸುವವಳೆನ್ನುವಂತೆ ನವೀನ ವ್ಯಕ್ತಿಯ ಕಪೋಲವನ್ನು ಚುಂಬಿಸಿದಳು. ಮಹೇಶಗೆ ದಿಗ್ಭ್ರಮೆ

ಯಾಯಿತು. ತಾನೆಲ್ಲಿಗೆ ಬಂದಿರುವೆ ಎಂಬುದು ತಿಳಿಯುದಾಯಿತು. ಕುರುಡನಂತೆ ಅವಳನ್ನು ಹಿಂಬಾಲಿಸಿದನು. ಉಸಿರೆತ್ತುವ ಸಾಹಸವು ಅವನಿಗಿಲ್ಲ. ದುರ್ದೈವಕ್ಕೆ ಸರಿಯಾಗಿ, ಇವರು ಮರಳುವಷ್ಟರಲ್ಲಿ ಎಂಣೆಯಿಲ್ಲದ ಆ ದೀಪದ ಆಯುಸ್ಸು ಪೂರ್ತಿಯಾಗಿತ್ತು. ಮಾಲತಿಯು ಅವನನ್ನು ನಿಲ್ಲಿಸಿ ಒಳಗೆ ಬಂದು ಬೆಂಕಿಪೆಟ್ಟಿಗೆಯನ್ನು ತರಲು ಹೋದಳು. ಅದರಲ್ಲಿ ಕಡ್ಡಿಯೂ ಸಹ ಇದ್ದಿಲ್ಲ. "ಅಯ್ಯೋ, ಬೆಳಕಿಲ್ಲದ ಮನೆಯಲ್ಲಿ ಅವರನ್ನು ಉಪಚರಿಸಲೆಂತು" ಎಂದು ಕಂಡಿತು. ತಾನು ಮೊದಲೇ ದರಿದ್ರೆಯೆಂದು ಕಂಡರೆ ಅವರ ಕೈಯು ಮತ್ತಷ್ಟು ಬಿಗಿಯಾಗುವುದೋ ಎಂದು ಭೀತಿಯಾಯಿತು. ಆದರೆ ಉಪಾಯವಿಲ್ಲ. ಅವಳು ಮರಳಿ ಬಂದು ಅವನನ್ನು ತನ್ನ ಕೊಟಡಿಗೊಯ್ದು ತನ್ನ ಪರ್ಯಂಕದ ಮೇಲೆ ಕುಳ್ಳಿರಿಸಿದಳು. "ದಯವಿಟ್ಟು ಕ್ಷಮಿಸಿರಿ. ನಾನು ಬಡವೆ; ದೀಪ ಉರಿಸಲು ಎಣ್ಣೆ ಸಹ ಇಲ್ಲ. ಪುಣ್ಯಾತ್ಮರಾದ ನಿಮ್ಮ ಮುಖವನ್ನು ಕಾಣಲು ಬೆಳಕು ಇಲ್ಲ"—ಎಂದಳು. ಇದುವರೆಗೆ ವೇಶ್ಯೆಯರ ಜೀವನದಲ್ಲಿ ಈ ಮಾತನ್ನಾಡುವ ಪ್ರಸಂಗವು ಬಂದಿರಲಿಕ್ಕಿಲ್ಲ; ಬಂದರೂ ಅವರು ತೋರಿಸಿಕೊಳ್ಳಲಿಕ್ಕಿಲ್ಲ. ಆದರೆ ಮಾಲತಿಯು ತೋರಿಸಿಕೊಳ್ಳಲೇ ಬೇಕಾಯಿತು "ಕ್ಷಮಿಸಿರಿ" ಎಂದಳು. ಯಾರನ್ನು? ಎನ್ನನ್ನು?

ಮಹೇಶನಿಗೆ, ಅವಳ ಸ್ವರದ ಮೇಲಿಂದ ಅದು ಮಾಲತಿಯೇ ಇರಬೇಕೆಂದು ತೋರಿತು. ಆದರೆ

ಹಸಿವೆ, ನವೀನ ಬಾಳ್ವೆ ಇವುಗಳ ದೆಸೆಯಿಂದ ಅದು ತೀರ ಕರ್ಕಶವಾಯಿತು. ಒಮ್ಮೆಗೆ, ತಾನು ಕಿಸೆಯಲ್ಲಿ ಒಂದು ವಿದ್ಯುತ್ ಲಾಂದ್ರವನ್ನು ತಂದಿರುವೆನೆಂಬ ನೆನಪಾಯಿತು. "ಬೆಳಕು ನನ್ನಲ್ಲಿದೆಯೆಂದು" ಅದರ ಜ್ಯೋತಿಯನ್ನು ಅವಳ ಮುಖದ ಮೇಲೆ ಹಾಯಿಸಿದನು. ಪಾಪ, ಸ್ವತಃ ಅಂಣನಿಗೆ ತನ್ನ ಮಾಲತಿಯ ಗುರುತು ಹತ್ತಲಿಲ್ಲ. ಹುಗಿದುಹೋದ ದೊಡ್ಡ ದೊಡ್ಡ ಕಣ್ಣುಗಳು, ಬಾಡಿದ ಕಪೋಲ ಇವೆಲ್ಲವುಗಳನ್ನು ಕಂಡು, ಇದೇ ಸರಿಯಾದ ಮನೆ ಅಹುದೇ ಅಲ್ಲವೇ ಎಂಬ ಸಂಶಯವು ಬಂದಿತು. ಅಷ್ಟರಲ್ಲಿ ಮಾಲತಿಯು — "ನಿಮ್ಮ ಮುಖವನ್ನು ನಾನು ಕಾಣಬಾರದೇ" ಎಂದಳು. ಆದರೆ ಮಹೇಶನಿಗೆ ಆ ಧೈರ್ಯವಿಲ್ಲ. ಮಾಲತಿಯು ಗರತಿಗೊಪ್ಪದ ಬಗೆಯಿಂದ ಅವನ ಕೈಯನ್ನು ತಿರುವಿ ಅವನ ಮೋರೆಯ ಮೇಲೆ ಬೆಳಕು ಬೀಳುವಂತೆ ಮಾಡಿದಳು. ಯಾರನ್ನು ನೋಡುತ್ತಾಳೆ? . . . .

"ಮಹೇಶಾ" ಎಂದು ಚೀರಿದಳು; ಮರುಕ್ಷಣದಲ್ಲಿ ನಿಶ್ಚೇಷ್ಟಿತೆಯಾಗಿ ಬಿದ್ದಳು. ಅವಳನ್ನು ಮಹೇಶನು ತೊಡೆಯ ಮೇಲೆ ಎತ್ತಿಕೊಂಡು ಉಪಚರಿಸತೊಡಗಿದನು. ಬೆಳಕಿನ ಸಹಾಯದಿಂದ ಬಳಿಯಲ್ಲಿದ್ದ ಒಂದು ಬಿಂದಿಗೆಯಿಂದ ನೀರಿಷ್ಟನ್ನು ತಂದು ಅವಳ ಕಣ್ಣುಗಳಿಗೆ ಸವರಿದನು; ಬಾಯಿಗೂ ಬಿಟ್ಟನು. ಸ್ವಲ್ಪ ಸಮಯದಲ್ಲಿ ಚೇತನವಾಯಿತು. ತಾನು ತನ್ನಂಣನ ತೊಡೆಯ ಮೇಲೆ ಮಲಗಿರುವೆನೆಂಬ ಕಲ್ಪನೆಯಾಯಿತು. ಒಮ್ಮೆಗೇ

ಅವಳು, "ಅಣ್ಣಾ—ನನ್ನಣಕಿಸಲು ಇಲ್ಲಿಯ ತನಕ ಬಂದೆಯಾ. ನಡುರಾತ್ರಿಯಲ್ಲಿ ನನ್ನೆದೆಯ ಮೇಲೆ ವಜ್ರಘಾತಮಾಡಲು ಬಂದೆಯಾ" ಎಂದಳು.

ಮಹೇಶನು ಏನೆಂದು ಉತ್ತರಿಸಬೇಕು? "ತಂಗಿ, ನಿನ್ನ ದುರ್ದಸೆಯನ್ನು ಕೇಳಿ ಬಂದೆ"— ಎಂದನು.

"ನನ್ನ ದುರ್ದಸೆ ಸುದೆಸೆಗಳ ಚಿಂತೆ ನಿಮಗೇಕೆ? ಅದನ್ನು ನಾನೇ ಕಂಡುಕೊಳ್ಳುವೆ. ಯಾವ ಪಾಪಿಯು ನನ್ನ ನೆಲೆಯನ್ನು ನಿಮಗೆ ತಿಳಿಸಿದನು? ಆ ಮೂರ್ಖ ಪ್ರಫುಲ್ಲನೇ? ಪ್ರಾಯಶಃ ನಾನವನನ್ನು ತಿರಸ್ಕರಿಸಿದೆ ನೆಂದು ಅವನೀರೀತಿಯ ಸೇಡನ್ನು ಹೊತ್ತಿರಬೇಕು."

"ಅಹುದು, ಅವನೇ ತಿಳಿಸಿದನು. ತನ್ನ ಸೇಡಿ ಗಾಗಿ ಆತ್ಮಹತ್ಯೆಯನ್ನು ಮಾಡಿಕೊಂಡನು"—ಎಂದಳ ತೊಡಗಿದನು.

"ಏನು, ಪ್ರಫುಲ್ಲನು ಆತ್ಮಹತ್ಯೆ ಮಾಡಿಕೊಂಡನೆ?"

"ಅಹುದು"

ಮಾಲತಿಯು ಅಳುವುದರಲ್ಲಿ ಶಿಶುವಿಗಿಂತ ಚಿಕ್ಕವ ಳಾದಳು. ಕ್ಷಣಕಾಲ ಅವಳ ಹೃದಯವನ್ನಾಕರ್ಷಿ ಸಿದ ನಿಷ್ಟುರೋಕ್ತಿಯು ಅವಳನ್ನು ಬಿಟ್ಟು, ಕರುಣೆಯು ಆ ಸ್ಥಾನದಲ್ಲಿ ಬಂದು ನಿಂತಿತು. ಪ್ರಫುಲ್ಲನು ತನ ಗಾಗಿ ಸತ್ತನೆಂದು ತಿಳಿದು ತಾನೂ ಬದುಕಿರಬೇಕೇಕೆ ಎಂದು ತೋರಿತು. ನಿಜವಾಗಿ ಆ ದಿನ ಮಹೇಶನಲ್ಲಿ ಇಲ್ಲದಿರುತ್ತಿದ್ದರೆ ಮಾಲತಿಯು ಸೂರ್ಯೋದಯವನ್ನು ಕಾಣುವಳೆನ್ನುವ ಧೈರ್ಯವು ಇದ್ದಿಲ್ಲ. ಈಗವಳು

ಅಣ್ಣನನ್ನು ಹುಚ್ಚಿಯಂತೆ ಎಳೆಯುುವಳು, ಮುದ್ದಿಸು ವಳು— ಅಳುವಳು. ಆಗಾಗ "ಪ್ರಫುಲ್ಲಾ ನೀನು ಬದುಕಿದರೂ ಸತ್ತರೂ ನನ್ನವನೇ. ನಾನೀಗ ಬೇಕಾದರೆ ವಿಧವೆಯು. ನಿತ್ಯ ಸುಮಂಗಲೆಯಾದರೂ ವಿಧವೆಯು"— ಹೀಗೆಂದು ತನ್ನ ಕುಂಕುಮುವನ್ನು ಒರಸಿಕೊಂಡಳು.

ಆ ಬಡ ಜೀವಿಗೆ ಅತ್ತು ಅತ್ತು ಆಯಾಸದಿಂದ ನಿದ್ರೆಬಂದಿತು ಮಹೇಶನೂ ತಂಗಿಯನ್ನು ತೊಡೆಯ ಮೇಲೆ ಮಲಗಿಸಿಕೊಂಡು ನಿದ್ರಿಸಿದನು. ಒಳಗಿನ ಸೂರ್ಯಕಿರಣವು ಅವರೀರ್ವರ ಮುಚ್ಚಿದ ಕಣ್ಣುಗಳನ್ನು ತೆರೆಯಿತು.

ಬೆಳಗಾದೊಡನೆಯೇ ಮಹೇಶನು ತಂಗಿಯನ್ನು ಕುರಿತು—"ಮಾಲತಿ, ಉಂಣದೆ ಎಷ್ಟು ದಿನಗಳಾದುವು?" ಎಂದು ಕೇಳಿದನು.

ಈಗವಳಿಗೆ ನಿಷ್ಟುರೋಕ್ತಿಯನ್ನಾಡುವ ಸಾಹಸ ವಿಲ್ಲ; ಮಹೇಶನು ತನ್ನವನೆಂಬುದು ತಿಳಿದಿದೆ. ಅದಕ್ಕಾಗಿ ಅವಳು, ಸಮಾಧಾನವನ್ನು ತೆಗೆದುಕೊಂಡು, ಒಂದೊಂದಾಗಿ ಹೇಳತೊಡಗಿದಳು. "ಉಂಣದೆ ಆರೇಳು ದಿನಗಳಾದುವು" ಎಂದಳು

ಮಹೇಶನು ತಾನು ತಂದಿದ್ದ ಫಲಾಹಾರದೊಡವೆಗಳನ್ನು ಅವಳ ಮುಂದಿರಿಸಿ "ಮಾಲತೀ, ತೆಗೆದುಕೊ. ನಾವು ಮನೆಯಲ್ಲಿ ಉಂಡುತಿಂದು ಮೆರೆಯಬೇಕು, ನೀನು ಕ್ಷಾಮಪೀಡಿತಳಾಗಿರಬೇಕೆ?" ಅಂದನು. ಮುಂದೆ ಮಾತನಾಡುವಷ್ಟರಲ್ಲಿ ಅಳುಬಂದಿತು.

ಮಾಲತಿಗೆ ಹಣ್ಣುಗಳನ್ನು ಮುಟ್ಟುವ ಮನವಾಗಲಿಲ್ಲ. ಅನ್ನಕ್ಕಾಗಿ ಅವಳಿದುವರೆಗೆ ಮಾನವಿಕ್ರಯ ಮಾಡಿದಳು. ಈಗ ಮಾನ ವಿಕ್ರಯವಿಲ್ಲದೆ ದೊರೆತ ಅನ್ನವು ತನ್ನದಲ್ಲವೆಂದು ಅವಳಿಗನಿಸಿತು ಆದರೆ— ಅಣ್ಣನ ಕಣ್ಣೀರನ್ನು ಕಂಡು ಅವಳು ತನ್ನ ಮನೋಭಾವಗಳನ್ನು ಅಡಗಿಸಿಟ್ಟು, ಸ್ವಲ್ಪ ಫಲಾಹಾರಮಾಡಿದಳು. ಆದರಲ್ಲಿಯೇ ಸ್ವಲ್ಪವನ್ನು ತೆಗೆದು ಅವನ ಬಾಯಿಯಲ್ಲಿರಿಸಿದಳು. ವೇಶ್ಯಾಚರ್ಯೆಯಂತಲ್ಲ; ಅಣ್ಣನ ಮೇಲಿನ ಅತಿಶಯ ಪ್ರೇಮದಿಂದ. ಮಹೇಶನು ಅದನ್ನು ಹೇಗೆ ತಿಂದನೋ ತಿಳಿಯದು. ಆದರಿಂದವನ ದುಃಖವು ಇನ್ನೂ ಹೆಚ್ಚಿತು. ಅವನ ಹೃದಯವನ್ನಾರೋ ಕ್ರೂರ ಪುರುಷರು ಎರಡು ಭಾರವಾದ ಕಲ್ಲುಗಳೆಡೆಯಲ್ಲಿರಿಸಿ ಒತ್ತುತ್ತಿದ್ದಂತೆ ಕಂಡಿತು. ಉಸಿರಾಡುವುದೂ ಅವನಿಗೆ ಕಷ್ಟವಾಯಿತು.

“ತಂಗಿ,— ಸಾಕು ಬಾ ಮನೆಗೆ.”

“ಅಣ್ಣಾ, ಬೇರೆ ಏನನ್ನು ಹೇಳುವುದಿದೆಯೇ? ತಾರೆ ಹೇಗಿರುವಳು? ಅವಳಿಗೆ ನನ್ನ ಆ ದಿನದ ಉದ್ಧಟವೃತ್ತಿಯನ್ನು . . . ಕುಂಕುಮವನ್ನು . . .”— ತಿರುಗಿ ಅಳುವಿನ ಸಂತೆ.

“ತಂಗಿ—ಎಲ್ಲರೂ ಕ್ಷೇಮದಿಂದಿರುವರು. ಒಂದು ದಿನ ಅಪ್ಪನಿಗೂ ಸಹ ತನ್ನ ಮೂರ್ಖತೆಗಾಗಿ ಅಳುಬಂದಿತು.”

“ಆದಿರಲಿ, ತಾರೆಯು ತವರುಮನೆಗೆ ಹೋಗಿರುವಳೇ? ನಿನ್ನೊಡನೆಯೇ ಇರುವಳೇ.”

"ನಮ್ಮಲ್ಲಿಯೇ ಇರುವಳು. ನಿನ್ನನ್ನು ಹೇಗಾದರೂ ಮಾಡಿ ಕರೆದು ತಾ ಎಂದಿರುವಳು."

"ನಾನು ಬರುವ ವಿಚಾರವನ್ನು ಬಿಡು."

"ಅಂದರೆ . . . . .?"

"ಬರುವುದಾಗಿದ್ದರೆ— ಹೊರಡುತ್ತಲೇ ಇದ್ದಿಲ್ಲ."

"ಮಾಲತಿ, ತಂದೆಯ ಮನೆಯಲ್ಲಿ ನೀನಿರಲಾರೆಯಾದರೆ ನಿನಗೆ ಬೇರೆಯೊಂದು ಮನೆಮಾಡಿ ಕೊಡುವೆ. ನಿನ್ನೊಡನೆ ನಾನೂ ತಾರೆಯೂ ಇರುವೆವು. ಅದಾದರೂ ಸಮ್ಮತವಷ್ಟೆ ಮಾಲತಿ ನನಗೆ ನಿನ್ನ ಮೇಲೆ ಕೋಪವಿದೆಯೇ? ಬಾ, ಈ ದುಃಖವು ಸಾಕು. ದೇವರು ನಿನ್ನನ್ನು ಇದಕ್ಕಾಗಿ ಸೃಷ್ಟಿಸಲಿಲ್ಲ. ಮಾಲತಿ— ನನ್ನ ತಂಗಿಯು ವ್ಯಭಿಚಾರಿಣಿಯ ಬಾಳ್ವೆಯನ್ನು ಹೊಟ್ಟೆಪಡಿಗಾಗಿ ಮಾಡಬೇಕೆ?"

"ಅಣ್ಣಾ— ಮಾಡಬೇಕಾಯಿತು. ಇನ್ನಾದರೂ ಮಾಡಬೇಕೆಂದು ತೋರುವುದು. ವ್ಯಭಿಚಾರಕ್ಕಾಗಿ ನಾನು ಸೂಳೆಯಾಗಲಿಲ್ಲ. ಊಟಕ್ಕಾಗಿ ಆದೆ; ಆದುದರಿಂದ ಉಂಡೆ. ನಾನಾತರದ ಬೇನೆಗಳನ್ನೂ ವೇದನೆಗಳನ್ನೂ ಅನುಭವಿಸಿದೆ. ಇನ್ನೂ ಅದೇ ನನ್ನ ಭಾಗ್ಯವು. ನನ್ನ ಶರೀರವು ತೀರ ಕಲುಷಿತವಾಗಿದೆ. ಅದನ್ನು ಮರಣವೊಂದೇ ಪವಿತ್ರಗೊಳಿಸಬಲ್ಲುದು. ಆದರೆ ನನ್ನ ಮನಸ್ಸು ನನ್ನ ಪ್ರಫುಲ್ಲನಿಗರ್ಪಿತವಾಗಿದೆ. ."

"ತಂಗಿ, ಬಾ. ನೀನು ನನ್ನನ್ನವನ್ನು ಉಂಣಬಾರದೆಂದಿಲ್ಲ. ಊರೆಲ್ಲ ನಿನ್ನನ್ನು ಕರೆತಂದುದಕ್ಕೆ ನನ್ನನ್ನು

ಹೀಯಾಳಿಸಿದರೂ ನಾನು ನಿನಗಾಗಿ ಸಹನಮಾಡುವೆ."

"ನನಗಾಗಿ ನಾನು ಸಹಿಸುತ್ತಿರುವುದೇ ಸಾಕು. ಇನ್ನಿತರರು ದುಃಖಪಡುವುದು ಬೇಡ."

"ಮಾಲತಿ, ಅಣ್ಣತಂಗಿಯರಾಗಿ ಹುಟ್ಟಿ, ಬೆಳೆದು-ಒಬ್ಬರಿಗಾಗಿ ಇನ್ನೊಬ್ಬರು ದುಃಖಿಸಬಾರದೆಂದರೆ ಆಗುವುದೇ? ಹೇಳು ನಿನ್ನಿಂದ ಆಗುವುದೇ"?

"ಆಗದಿದ್ದರೆ ಆಗುವಂತೆ ಮಾಡಬೇಕು. ಸಾಕು. ಮಹೇಶಾ, ನಾನು ಆಣೆಮಾಡಿ ಹೇಳುತ್ತೇನೆ. ನಾ ನಿನ್ನ ನನ್ನ ದುಡಿತದಿಂದ ಬದುಕುವೆ. ಅದು ನೀಚವೋ ಉಚ್ಚವೋ, ಅದರ ಎಣಿಕೆ ನನಗಿಲ್ಲ. ಶ್ವಾನನ ಬಾಳ್ವೆ ಯನ್ನಾದರೂ ಬಾಳುವೆ; ದಾನದ ಬಾಳ್ವೆ ಬೇಡ. ಇದು ನನ್ನ ನಿರ್ಧಾರ. ನಿನ್ನ ಕೊರಳಾಣೆಯಾಗಿ ಇದು ಬದಲಾಗದು."

ಮಹೇಶನ ವಾಣಿಗೆ ಮಾಲತಿಯನ್ನು ಸೆಳೆಯು ವಷ್ಟು ಶಕ್ತಿಯಿಲ್ಲದಾಯಿತು. ಯುಕ್ತಿಗಳೆಲ್ಲವನ್ನೂ ವಿನಿ ಯೋಗಿಸಿದನು. ಆದರೆ ಅವನ ಕಾರ್ಯವು ನೆರವೇರದೆ ಹೋಯಿತು. ಈಜು ಬಾರದಿದ್ದವನು ಮುಣುಗುತ್ತಿ ರುವ ತನ್ನ ಗೆಳೆಯನನ್ನು ದಂಡೆಯ ಮೇಲಿಂದಲೇ ನೋ ಡುವಂತೆ, ನೋಡುತ್ತ ಮಾಲತಿಯನ್ನು ಅಗಲಿದನು. ಮಾಲತಿಯ ಅವಸ್ಥೆಯಾದರೂ ಈ ಸಮಯದಲ್ಲಿ ಬೇರೆ ರೀತಿಯಾಗಿದ್ದಿಲ್ಲ. ತಾನು ಇನ್ನು ಮಹೇಶನ ಜತೆಯ ಲ್ಲಿದ್ದರೂ, ಅವನಿಗೆ ಇಲ್ಲದ ಅಪವಾದಗಳು ಬರುವು ವೆಂದು ಅವಳಿಗೆ ತಿಳಿದಿತ್ತು. ಅಷ್ಟೇ ಅಲ್ಲ—ಮುಣು

ಗಿದ ತನಗೆ ಉದ್ಧಾರದ ಮಾರ್ಗವೇ ಇಲ್ಲವೆಂದು ಅವಳ ಕಲ್ಪನೆಯಾಗಿತ್ತು. ಈಗವಳು ಬದುಕಿರುವುದಾದರೆ ಅದು ಒಂದೇ ಆಸೆಗೆ— ತನ್ನನ್ನು ಕಂಡಾದರೂ ಹಿರಿಯರು ತಮ್ಮ ಬಾಲವಿಧವಾ ಕನ್ಯೆಯರ ಮೇಲೆ ಕನಿಕರ ತೋರಲಿ, ಎಂಬುದರ ಸಲುವಾಗಿ. ಅದೂ ಹೇಗೆ ಆಗುವುದು— ಎಂಬುದರ ಎಣಿಕೆ ಅವಳಿಗಿಲ್ಲ. ಅವಳು ಯತ್ನಕ್ಕೂ ಹೋಗಲಿಲ್ಲ. ಅವಳಿಗಿಂದು ಉಂಣುವ ಯೋಚನೆಯೇ ಬಲವಾಗಿತ್ತು. ಸರಿ, ಆ ದಿನವೆಲ್ಲಾ ಹಾಗೆಯೇ ಸರಿಯಿತು. ಸಂಜೆಯಾಗುತ್ತಾ, ಹುಳುಹಪ್ಪಟಗಳಿಗಾಗಿ ಕಾದಿರುವ ಗೌಳಿಯಂತೆ ಅವಳು ಜಗುಲಿಯ ಮೇಲೆ ಕುಳಿತಳು. ಸಂಜೆ ಆರು ಘಂಟೆಯ ವೇಳೆಗೆ, ತಿರುಗಿ ಮಹೇಶನು ಕಾಣಿಸಿಕೊಂಡನು. ಮಾಲತಿಯು ಮನೆಯೊಳಕ್ಕೋಡಿಹೋಗಿ ಕದವನ್ನಿಕ್ಕಿಕೊಂಡಳು. ಮಹೇಶನಿಗೆ ದೂರದಿಂದಲೇ ತಿಳಿಯಿತು— ತನ್ನ ಯತ್ನವು ನಿಷ್ಫಲವೆಂದು. ತಿರುಗಿ ಹೋಗಿ ಹೇಗಾದರೂ ಮಾಡಿ ಅವಳೊಡನೆ ಮಾತನಾಡಿ ಬರೋಣವೇ ಎಂದು ಮುಂದರಿದನು. ಅವಳು ಜಗುಲಿಯ ಮೇಲೆ ಕುಳಿತುದೇಕೆಂಬುದು ನೆನಪಿಗೆ ಬರಲು, ತನ್ನಿಂದ ಅವಳ ಆ ಹೊತ್ತಿನ ಅನ್ನ ಹೋಗಬಾರದೆಂದು ಕನಿಕರಗೊಂಡು ಮರಳಿದನು. ತಿರುಗಿ ಅವನು ಅಲ್ಲಿ ತಲೆಯನ್ನು ತೋರಲಿಲ್ಲ. ಆದರೆ ಮಾಲತಿಯು ಕದವನ್ನು ತೆರೆಯುವಷ್ಟು ಸಾಹಸವುಳ್ಳವಳಾಗಲಿಲ್ಲ. ತಿರುಗಿ ಅಂಣನು ಬಂದರೆ, ಅವಳ ದುರ್ಬಲ ಮನವು ಅವನ

ಹೇಳಿಕೆಗೆ ಒಡಂಬಟ್ಟರೆ....ಎಂದೆಲ್ಲ ಅವಳ ಯೋಚನೆ. ರಾತ್ರಿ ೧೦ ತಾಸಿನ ವರೆಗೆ ಒಳಗೇ ಕುಳಿತು ನೋಡಿದಳು. ಬಳಿಕ, ಸಾಹಸಮಾಡಿ ಬಾಗಿಲನ್ನು ತೆರೆದಳು. ಬಾಯಾರಿಕೆಯಾಗದಿದ್ದರೆ ಅದನ್ನೂ ಮಾಡುತ್ತಿದ್ದಿಲ್ಲ. ಸುದೈವಕ್ಕೆ ಯಾರೂ ಇದ್ದಿರಲಿಲ್ಲ. ಅತ್ತಿತ್ತ ಇಣಿಕಿನೋಡಿ ಒಂದಿಷ್ಟು ನೀರನ್ನು ಪಕ್ಕದ ಬಾವಿಯಿಂದ ಸೇದಿಕೊಂಡು ಬಂದಳು.

ಬರಗಾಲ ಪೀಡಿತರಂತೆ ಗುಟುಗುಟನೆ ಕುಡಿದಳು. ಕಣ್ಣಿಗಿಷ್ಟನ್ನು ಸವರಿಕೊಂಡಳು. ತಿರುಗಿ ಅಂಣನು ನಿನ್ನೆ ಬಂದಂತೆ ಬಂದರೆ ಎಂಬ ಸಂಶಯುವಾಯಿತು. ತನ್ನ ಇರವು ಅವರಿಗೆ ತಿಳಿದ ಬಳಿಕ ತಾನಲ್ಲಿ ಇರುವುದು ಉಭಯತರ ಕ್ಷೇಮಕ್ಕೂ ಒಳಿತಲ್ಲವೆಂದುಕೊಂಡು ಆಕೆಯು ಅಂದೇ ಮಂಗಳೂರಿನಿಂದ ಪರಾರಿಯಾಗುವ ಯೋಚನೆ ಮಾಡಿದಳು. ಇದ್ದೊಂದೆರಡು ಬಟ್ಟೆಗಳನ್ನೂ ಒಂದೆರಡು ಪಾತ್ರೆಗಳನ್ನೂ ಗಂಟುಕಟ್ಟಿದಳು. ಮನೆಯ ಯಜಮಾನನಿಗೆ ಬಾಡಿಗೆ ಸಂದಿಲ್ಲವೆಂಬುದು ತಿಳಿಯಿತು. ವಂಚಕಳೆಂಬ ಅಪವಾದಕ್ಕೆ ಗುರಿಯಾಗಬಾರದೆಂದು, ಪಾತ್ರೆಗಳನ್ನು ಅಲ್ಲೆ ಬಿಟ್ಟು ಕದವನ್ನಿಕ್ಕಿಕೊಂಡು ಪರಾರಿಯಾದಳು.

## ೮. ಎರಡನೆಯ ಯಾತ್ರೆ.

ಮಹೇಶನಿಂದು ಹತಾಶನಾಗಿ ಮರಳಿದನಷ್ಟೆ. ಅವನ ಒಡಲು ಮುದುರಿ ಮುದ್ದೆಯಾಗಿತ್ತು. ಒಂದೆರಡು ದಿನ

ಗಳ ದುಃಖಕುಂಡದ ಈಜಾಟದಿಂದ ಅವನು ಒಂದು ತಿಂಗಳ ಕಾಹಿಲೆ ಬಿದ್ದವರಂತೆ ಕಾಣಿಸ ತೊಡಗಿದನು. ತಿರುಗಿ ತಾನು ಮನೆಗೆ ಹೋಗಬಾರದೆಂದು ಅವನಿಗೆ ಕಂಡಿತು. ತಂಗಿಯು ನರಳುತ್ತಿರಲು ತಾನು ಸುಖಿಸುವುದು ಅನ್ಯಾಯವೆಂದು ಅನಿಸಿತು. ಎಲ್ಲಾದರೂ ಭಿಕಾರಿಯಾಗಿ ಅಂಡಲೆಯುವೆನೆಂಬ ನಿರ್ಧಾರವನ್ನು ಮಾಡಿದನು. ಮರುಕ್ಷಣದಲ್ಲಿ ತಾರೆಯು ನೆನಪಾಯಿತು. ತನ್ನ ಅಗಲುವಿಕೆಯಿಂದ ತಾರೆಯು ಮಾಲತಿಯ ಹಾದಿಯನ್ನು ಹಿಡಿದರೆ . . .! ಎಂಬ ಯೋಚನೆಯಾಯಿತು. ಅದರ ಸ್ಮರಣೆಯನ್ನೆ ಅವನು ಸಹಿಸದಾದನು. ತಿರುಗಿ ನಿರ್ಧಾರವನ್ನು ಬದಲಿಸಿ ಮನೆಗೆ ಹೋಗುವ ನಿಶ್ಚಯುವನ್ನು ಮಾಡದನು. ಆದರೆ ಹೊರಡುವುದರೊಳಗೆ ಮೂರನೆ ಆವೃತ್ತಿಯ ಯತ್ನಮಾಡುವ ಆಸೆಯಾಯಿತು. ಫಲವು ಹೀಗಾಗುವುದೆಂದು ತಿಳಿದಿತ್ತಾದರೂ ತನ್ನ ಕರ್ತವ್ಯವನ್ನು ಮುಗಿಸುವೆನೆಂದು ಬೋಳಾರಕ್ಕೆ ಹೊರಟನು. ನಡು ಹಾದಿಯಲ್ಲಿ, ಮಾಲತಿಯು ಮುಂಚಿನ ದಿನ ಕದವನ್ನಿಕ್ಕಿಕೊಂಡ ವಿಚಾರವು ಹೊಳೆದು ಹತಾಶನಾಗಿ ಮರಳಿದನು. ಆದರೂ ಮನಸ್ಸು ಸಮಾಧಾನವಿಲ್ಲ. ಕೇವಲ ಅದಕ್ಕಾಗಿ ಒಂದು ಪತ್ರವನ್ನು ಅವಳಿಗೆ ಬರೆದು ಅಂಚೆಯಲ್ಲಿ ಹಾಕಿದನು. "ತಂಗೀ, ನಾನು ಎಂದೆಂದೂ ನಿನ್ನವನು. ದಯವಿಟ್ಟು ಆಪತ್ತಿನಲ್ಲಿ ಸಹಾಯ ಪಡೆಯುವ ಆಸೆಯಾದರೆ ನನಗೊಂದು ಪಂಕ್ತಿಯನ್ನು ಬರೆ"—ಎಂದೆ

ರಡು ಮಾತುಗಳನ್ನು ಬರೆದು ಅಂಚೆ ಡಬ್ಬಿಯಲ್ಲಿ ಕೆಡವಿ ಸ್ವಗ್ರಾಮಕ್ಕೆ ಮರಳಿದನು. ಊರಿಗೆ ಮರಳುವಾಗ ತಂದೆಯು ಮನೆಯಲ್ಲಿದ್ದಿರಲಿಲ್ಲ. ನೆರೆಯೂರಿಗೆ ಹೊಸ ಮಾವನ ಮನೆಗೆ ಹೋಗಿದ್ದನು. ಅವನು ಬರುವ ತನಕ ಮಹೇಶನು ಕೊಟಡಿಯಲ್ಲೆ ಕುಳಿತಿರುವನು. ತಾನು ಬಂದವನೇ ತನ್ನ ದುಃಖದ ಕಾರಣವು ತಾರೆಗೆ ತಿಳಿಯಬಾರದೆಂದು ನೆಪಮಾಡಿಕೊಂಡು ಅವಳನ್ನು ತವರುಮನೆಗೆ ಕಳುಹಿಸಿದನು. ಈಗ ಅವನಿಗೆ ಬೇರೆ ಕೆಲಸವಿಲ್ಲ. "ಮನೆಯಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಅಲೆಯುವುದು. ತನ್ನ ತಂಗಿಯ ಕೋಣೆಗೆ ಹೋಗುವುದು. ಮಾಲತಿ, ಮಾಲತಿ ಎಂದು ಅಳುವುದು. ಅವಳದೇನಾದರೂ ಒಡವೆಯು ಕಣ್ಣಿಗೆ ಬಿತ್ತೆಂದರೆ— "ಮಾಲತಿ, ನಿನ್ನ ಜತೆಯಲ್ಲಿ ಇದನ್ನೇಕೆ ಒಯ್ಯಲಿಲ್ಲ?" ಎಂದು ಉದ್ಗರಿಸುವುದು. ಮಾಲತಿಯು ಮುಟ್ಟಿದ ವಸ್ತುವೆಲ್ಲಾ ಅವನಿಗೆ ಪ್ರಾಣ. ಇನ್ನೊಬ್ಬರು ಇದೇ ಪ್ರಸಂಗದಲ್ಲಿ ಮಾಲತಿಯ ಹೆಸರನ್ನು ಕೇಳಲು ಕಿವಿಗೊಡುತ್ತಿದ್ದಿಲ್ಲ. ಆದರೆ ಮಹೇಶನ ಹೃದಯವು ಅಂಥದಲ್ಲ. ಅದು ತೀರ ಭ್ರಾತೃರಸಭರಿತವಾದುದು.

ಮಧುಕರನ ಸವಾರಿಯು ಈಗ ಮಾವನ ಮನೆಯಿಂದ ಬಂದಿದೆ. ಬಂದವನ ಕರದಲ್ಲಿಯೇ ಒಂದು ಪತ್ರವನ್ನು ಅಂಚೆಯವನು ತಂದುಕೊಟ್ಟನು. ಅದರ ಮೇಲೆ ಹಲವು ಊರುಗಳ ಗುರುತು ಇತ್ತು. ಕೊನೆಗೆ ಅದನ್ನು D. L. O. ಆಫೀಸಿನವರು ಮರಳಿ ಕಳುಹಿಸಿ

ದ್ದರು. ಮಹೇಶನ ಕಡೆಗೆ ಕಳುಹಿಸಲ್ಪಟ್ಟ ಪತ್ರವದು. ಆದರೂ ಮಧುಕರನು ಕುತೂಹಲದಿಂದ ಒಡೆದು ನೋಡಿದನು. ಮಾಲತಿಗೆ ಮಹೇಶನು ಬರೆದ ಪತ್ರ. ಅಲೆದಲೆದು ಅದು ಮರಳಿ ಬಂದಿತ್ತು. "ಈ ವಿಳಾಸದಾರರು ಸ್ಥಳವನ್ನು ಬದಲಾಯಿಸಿರುವರು" ಎಂದು ಒಂದು ಚಿಕ್ಕ ಟಿಪ್ಪಣಿಯೂ ಇದ್ದಿತ್ತು. ಒಮ್ಮೆಗೇ ಆತುರದಿಂದವನು ಮಹೇಶನನ್ನು ಕರೆದು ಮಹೇಶ, ಇದರ ಅರ್ಥವೇನು? ಅವಳೆಲ್ಲಿರುವಳು ನಿನಗೆ ತಿಳಿದಿದೆಯೇ? ನನ್ನ ಮಗು—ನನ್ನ ಮಗು . . . ಎಂದನು . . ಪತ್ರವು ಮರಳಿ ಬಂದುದನ್ನು ಕಂಡು ಮಹೇಶನಿಗೆ ಇದ್ದ ಆಸೆಯೂ ನಾಶವಾಯಿತು. ಅವನು ತಂದೆಂದು "ಮಗೂ ಮಗೂ . . . ." ಎಂಬ ಮಾತನ್ನು ಕೇಳುತ್ತ ಅವನ ಒಡಲು ಪಲ್ಲಟವಾಗಿದೆಯೆಂದು ತಿಳಿದು, ಯಾವದ್ವಿಷಯಗಳನ್ನು ವಿವರಿಸಿ ಹೇಳಿದನು.

"ಏನು, ಅವಳೀಗ ಸೂಳೆಯೇ? ನನ್ನ ಮಗಳು ಸೂಳೆಯೇ? ಅಂಥವಳಿಗೆ ನೀನು ಸಹಾಯಮಾಡುವಿಯೆಂದು ಬರೆಯುವುದೇ? ನಿನ್ನ ತಲೆಯೆಲ್ಲಿದೆ" ಎಂದು ಪ್ರತ್ಯುತ್ತರವು ಹೊರಟಿತು.

ತನ್ನ ಪತ್ರ ಮರಳಿ ಬಂದ ವ್ಯಥೆಯಲ್ಲದಿದ್ದರೆ, ಮಹೇಶನು ಯಾವ ರೀತಿಯ ಉತ್ತರವನ್ನೀಯುತ್ತಿದ್ದನೆಂದು ಹೇಳುವುದು ಸಾಧ್ಯವಿಲ್ಲ. ತಂದೆಯ ಸ್ವರವನ್ನು ನಿಲ್ಲಿಸಿ ಅವನು ಒಳಗೆ ಹೋಗುತ್ತಿದ್ದನು. ಈಗ ಹಾಗೆ ಮಾಡಲು, ಅವನ ದುಃಖಿಮನಕ್ಕೆ ತ್ರಾಣವಿದ್ದಿಲ್ಲ.

"ನೀವೆಲ್ಲ ಕಟುಕರು" ಎಂಬೆರಡೇ ಶಬ್ದಗಳಿಂದ ಸಂಭಾಷಣೆಯನ್ನು ಸಮಾಪ್ತಿಗೊಳಿಸಿ ತನ್ನ ಕೊಟಡಿಗೆ ಹೋಗಿ ಕದವನ್ನಿಕ್ಕಿಕೊಂಡು ಕುಳಿತನು. ಈ ಶೋಕದಿಂದ ಅವನು ಚೇತರಿಸಲು ಕೆಲವು ತಿಂಗಳುಗಳೇ ಹಿಡಿದುವು. ಆದರೂ, ಅವನು ಮಾಲತಿಯನ್ನು ಮರೆಯಲಾರನಾದನು. ಅವಳ ನೆನಪಾದಾಗಲೆಲ್ಲ ತನ್ನ ತಾರೆಯೊಂದಿಗೆ ದುಃಖವನ್ನು ಹಂಚಿಕೊಳ್ಳುವನು.

ನಾವೀಗ ಮಾಲತಿಯನ್ನೆಲ್ಲಿ ಬಿಟ್ಟೆವು? ಮನೆಯಿಂದ ಹೊರಟವಳ ಒಂದನೇ ಯಾತ್ರೆಯು ಮಂಗಳೂರಿನಲ್ಲಿ ಮುಗಿಯಿತು. ಎರಡನೆ ಯಾತ್ರೆಯನ್ನು ತೊಡಗಿರುವಳು. ಅದಾವ ಪುಣ್ಯಕ್ಷೇತ್ರಕ್ಕೆ ಬಂದು ಸೇರುವಳೋ ನಿರೀಕ್ಷಿಸುವ. ಈ ಬಾರಿ ಅವಳು ಹೊರಡುವಾಗ ಕಳೆದಾವೃತ್ತಿಗಿಂತ ಶ್ರೀಮಂತಳು. ಕಾರಣ, ಕಳೆದಾವೃತ್ತಿ ಉಟ್ಟ ಬಟ್ಟೆಯೊಂದಲ್ಲದೆ; ಬೇರೇನೂ ಒಡವೆಗಳು ಅವಳ ಬಳಿಯಲ್ಲಿದ್ದಿಲ್ಲ. ಈ ಬಾರಿ ಒಂದೆರಡು ನಕಲಿಯಾದರೂ ಜರತಾರಿ ಸೀರೆಗಳಿವೆ. ಮೈಮೇಲೆ ೧೦—೧೦೦ ರೂಪಾಯಿಗಳ ಚಿನ್ನಾಭರಣಗಳಿವೆ. ನಗದಿಯಿಂದ ಕಾಸೊಂದೂ ಇದ್ದಿಲ್ಲ. ಬೆಳಗಾಗುವುದರಲ್ಲಿ ಅವಳು ಕಾಲ್ನಡೆಯಿಂದ ಪಾಣೆಮಂಗಳೂರನ್ನು ಸೇರಿದಳು. ಬರೆ ೧೬ ಮೈಲಿಯ ಹಾದಿ. ಮೊದಲೇ ಉಪವಾಸದಿಂದ ಬಳಲಿ, ಬಗೆಬಗೆಯ ಬೇನೆಗಳಿಂದ ದಣಿದ ಆ ಕಾಲುಗಳು ಹೇಗೆ ಅವಳನ್ನು ಒಯ್ದುವೋ ಅವಳಿಗೇ ತಿಳಿಯದು. ತಿರುಗಿ ಮಂಗಳೂರಲ್ಲಿದ್ದರೆ

ಸುಖವಿಲ್ಲವೆಂಬ ಚಿಂತೆಯೇ ಅವಳನ್ನು ಅಷ್ಟು ವೇಗ ವಾಗಿ ಓಡಿಸಿತು. ಅವಳೀಗ ಭೀತಿಯ ಕೇಂದ್ರದಿಂದ ಪಾರಾದಳು. ಆದರೆ ಆ ಊರು ಅವಳಂಥವಳಿಗೆ ನೆಲೆಸಲು ತಕ್ಕ ಸ್ಥಳವಲ್ಲ. ಮುತ್ತೂರೆನಿಸಿದ ಪುತ್ತೂ ರು ಸಹ ಅವಳ ಭಾವಿ ಕೇಂದ್ರಕ್ಕೆ ಯೋಗ್ಯ ಭೂ ಮಿಯಲ್ಲವೆಂದು ಕಂಡಿತು. ಅದು ದೊಡ್ಡ ವ್ಯವಸಾಯ ಕೇಂದ್ರವೆಂದು ಅವಳಿಗೆ ತಿಳಿದಿತ್ತು. ಆದರೆ 'ತನ್ನ ಅಣ್ಣನು ಅಲ್ಲಿಗೂ ಬಂದರೆ'?—ಎಂಬ ಭೀತಿಯಿಂದ ಅವಳು ದಕ್ಷಿಣ ಕನ್ನಡ ಜಿಲ್ಲೆಯನ್ನು ಬಿಡುವ ಯೋ ಚನೆ ಮಾಡಿದಳು. ಪಾಣೆಮಂಗಳೂರಿನಲ್ಲಿ ತನ್ನ ಕಿವಿ ಯ ಆಭರಣವೊಂದನ್ನು ಕಳಚಿ ವಿಕ್ರಯ ಮಾಡಲು ಮುಂದಾದಳು. ಗಿರಾಕಿಯು ಚತುರ ಅಂಗಡಿಕಾರ ನೊಬ್ಬ. ಬಗೆಬಗೆಯಿಂದ ಅವಳನ್ನು ಉಪಚರಿಸಿದನು. ಅವಳಿಗಾಗಿ ಕಾಫಿ ತಿಂಡಿ ತರಿಸಿಕೊಟ್ಟನು. ಎಂಥ ದಯೆ! ಕೊನೆಗೆ, ೪೦ ರೂಪಾಯಿಯ ಬೆಲೆಯ ಮಾ ಲಿಗೆ ೧೦ ರೂಪಾಯಿ ಬೆಲೆಯನ್ನು ಕಟ್ಟಿ--"ಆಗುವು ದಾದರೆ ಕೊಡುವುದು" ಎಂದನು. ಆಗುವುದೇನು? ಹೋಗುವುದೇನು? ವಿಕ್ರಯ ಮಾಡಿದ್ದಾಯಿತು. ಬಂದ ಕಾಸನ್ನು ಕಟ್ಟಿಕೊಂಡು—ಮೋಟಾರು ಗಾಡಿಯನ್ನು ನಿರೀಕ್ಷಿಸಿದ್ದಾಯಿತು. ವೇಳೆಗೆ ಸರಿಯಾಗಿ ಬಂಡಿಯು ಬಂದೇ ಬಂದಿತು. ಆದರೆ ಜಾಗವಿದ್ದಿಲ್ಲ. ನಮ್ಮ ೧೦ ರೂಪಾಯಿಯ ಗಿರಾಕಿಯು, "ಪಾಪದ ಹೆಣ್ಣು ಹೆಂಗು ಸು" ಎಂದು ಶಿಫಾರಸು ಮಾಡಿದನು ಮೋಟಾರು

ಚಾಲಕನು –"ಆಯಿತು, ಬರಲಿ. ಪುತ್ತೂರಿಗಲ್ಲವೇ" ಅಂದನು. "ಅಲ್ಲ, ಮೈಸೂರಿಗೆ" ಎಂದು ಮಾಲತಿಯು ಉತ್ತರಕೊಡಲು ಅವನ ಉತ್ಸಾಹವು ನಿಮಿಷ ಮಾತ್ರದಲ್ಲಿ ಮರೆಯಾಯಿತು. ಕಾರಣ, ಅವನು ಪುತ್ತೂರಿಂದ ಮುಂದೆ ಸಾಗುವವನಲ್ಲ. ಆದರೂ ಧೈರ್ಯ ಮಾಡಿ—"ಏಕೆ, ಒಂದೆರಡು ದಿನಗಳಿದ್ದು ಹೋಗಬಾರದೇ. ಏನೂ ತೊಂದರೆಯಿಲ್ಲ. ಎಲ್ಲಾ ಅನುಕೂಲತೆಯನ್ನು ಮಾಡಿಕೊಡಬಹುದು"— ಎಂದನು.

ಅಷ್ಟರಲ್ಲಿ 'ಏಜಂಟ್' ಸಾಹೇಬರು, ಮೈಸೂರಿಗೆ ಟಿಕೇಟು ಬರೆದಾಗಿತ್ತು. ಅವರು ಆರಾಣೆ ಮುನಾಫೆ ವ್ಯಾಪಾರವನ್ನು ಬಿಟ್ಟು ಕೇವಲ ಒಂಬತ್ತು ಕಾಸಿನ ಲಾಭ ದೊರೆಯುವ ಪುತ್ತೂರಿಗೆ ಟಿಕೇಟು ಕೊಡುವರೇ? ಸರಿ ಬಸ್ ಹೊರಟಿತು. ಬಂಡಿ ಸಾಗುತ್ತ ಸಾಗುತ್ತ, ತನ್ನ ರಕ್ತಸಂಬಂಧಿಗಳು ದೂರಾದರೆಂದು ಮಾಲತಿಯು ಹರುಷಗೊಂಡಳು.

ಸರಿ, ಪುತ್ತೂರು ಬಂದಿತು. ಮುತ್ತಿನ ಊರಂತೆ ಪುತ್ತೂರು. ಅಲ್ಲಿ ಮಹಾಲಿಂಗೇಶನ ಗುಡಿಯ ಬಳಿಯಲ್ಲಿ ತುಂಬಾ ಮುತ್ತುಗಳು ಸಿಗುವುವಂತೆ! ಅದರ ಮಹಿಮೆಯನ್ನು ಡ್ರೈವರನು ಬಣ್ಣಿಸತೊಡಗಿದನು. ಆದರೆ ಮಾಲತಿಗೆ ಕೇಳಕ್ಕೇಳಿಯುವ ಮನವಿಲ್ಲದುದನ್ನು ಕಂಡು ಅವನು ಹತಾಶನಾದನು. ತನ್ನ ಕೆಲಸವನ್ನು ವಹಿಸಿಕೊಳ್ಳುವ ಡ್ರೈವರನಿಗೆ, "ಈ ಅಮ್ಮನವರನ್ನು ಸುರಕ್ಷಿತವಾಗಿ ಮೈಸೂರಿಗೆ ಮುಟ್ಟಿಸಿ, ಎಲ್ಲಾ ವ್ಯವಸ್ಥೆಯನ್ನು

ಮಾಡು” ಎಂದನು. ಡ್ರ್ಯೈವರನ ಸುದೈವವೆಂಬಂತೆ—“ಇಂದು ನೀನೇ ಮೈಸೂರಿಗೆ ಹೋಗು; ನನಗೆ ಮಂಗಳೂರಲ್ಲಿ ಸ್ವಲ್ಪ ಕೆಲಸವಿದೆ” ಎಂದನು. ಪಾಪದ ಪ್ರಾಣಿ, ಊಟದ ಗೊಡವೆಯನ್ನು ಮರೆತು ಬಂಡಿಯನ್ನು ವಾಯುವೇಗದಿಂದ ಸಂಪಾಜೆಘಟ್ಟವನ್ನು ಹತ್ತಿಸಿದನು.

ಮಧ್ಯಾಹ್ನ ಮಡಿಕೇರಿಯ ಶ್ರೀ ಆನಂದ ವಿಲಾಸ ಊಟದ ಹೋಟೇಲಿನಲ್ಲಿ ಎರಡು ಸ್ಪೆಶಲ್ ಊಟಗಳ ಏರ್ಪಾಡಾಯಿತು. ಈ ರೀತಿಯ ಆದರೋಪಚಾರಕ್ಕೆ ರೂಢಿಗೊಂಡ ಮಾಲತಿಯು ತನ್ನ ಅದೃಷ್ಟವನ್ನು ಸ್ಮರಿಸಿ ಕೊಂಡು ಸ್ವೀಕರಿಸಿದಳು. ಸರಿ, ಎರಡು ಘಂಟೆಗೆ ಮಡಿಕೇರಿಯಿಂದ ಹೊರಟ ಬಂಡಿಯು ೮೦ ಮೈಲಿ ದೂರವನ್ನು ಸಾಗಿ ಸಂಜೆ ೫ ತಾಸಿಗೆ ಹೋಗಿ ಮುಟ್ಟಿತು. ನಿಲ್ದಾಣವನ್ನು ಸೇರಲಾಗಿ ಡ್ರ್ಯಾವರನ ಗೆಳೆಯರು—“ಏನು ಬಂಡಿಯಿಷ್ಟು ಬೇಗ ಬಂದಿತು? ವಿಶೇಷವೇನು” ಎಂದರು. ಕೇವಲ ನಗುವಿನಿಂದಲೇ ಮರುತ್ತರವನ್ನು ಅವರಿಗೆ ಸಲ್ಲಿಸಿ ಒಂದು ಬಂಡಿಯಲ್ಲಿ ಮಾಲತಿಯನ್ನು ಕುಳ್ಳಿರಿಸಿ, ತಾನೂ ಏರಿ—“ಚಲೋ ಮುಂಬಯಿ ಹೋಟೇಲ್” ಎಂದನು.

ಹಾದಿಯಲ್ಲಿ ಮಾಲತಿ ತಾನು ಆ ಊರಲ್ಲಿ ನೆಲೆಸುವ ಇಷ್ಟವುಳ್ಳವಳಾಗಿರುವಳೆಂದೂ, ತನಗೆ ಯೋಗ್ಯ ಮನೆಯೊಂದನ್ನು ಗಳಿಸಿಕೊಡಬೇಕೆಂದೂ ಹೇಳಿದಳು. ಹೇಳದೆ ಅಷ್ಟನ್ನು ಮಾಡಲು ಸಿದ್ಧನಿದ್ದ ಅವನು, ಹೇಳಿದ ಬಳಿಕ ಮಾಡುವನೇನು? ಸರಿ, ಬಂಡಿಯು ಮುಂಬಯಿ ಹೋ

ಟೇಲಿನ ಮುಂದಿಳಿಯಿತು. ಇಬ್ಬರೂ ಉಪಾಹಾರಾ ಗ್ರಹವನ್ನು ಪ್ರವೇಶಿಸಿದರು. ಹೀಗೆ ಅವಳು ದೊರೆಸಾನಿ ಯಾದುದು ಪ್ರಥಮ ಬಾರಿ. ಆದರೆ—ಇಷ್ಟನ್ನು ಮಾ ಡದೆ ಅವಳ ಚಕ್ರ ತಿರುಗಬೇಕಲ್ಲ.

ಹೋಟೇಲಿನಲ್ಲಿ ಉತ್ತಮ ಉಪಹಾರದ ವ್ಯವಸ್ಥೆ ಯಾಗಲಾಗಿ ಅವರಿಬ್ಬರು ಮಹಡಿಯನ್ನೇರಿದರು. ಮಹ ಡಿಯ ಮೇಲಿರುವುದು ಅತಿಥಿ ನಿವಾಸಗೃಹ. ಕೂಡಲೆ ಒಂದು ಕೊಟಡಿಯು ಇವರಿಗಾಗಿ ಖಾಲಿಮಾಡಿ ಕೊಡ ಲ್ಪಟ್ಟಿತು.

ಮಾಲತಿಯು ಇಷ್ಟನ್ನೆಲ್ಲಾ ಕಂಡು—"ನನಗೆ ಈ ಹೋಟೇಲಿನಲ್ಲಿರಲು ಇಷ್ಟವಿಲ್ಲ. ನನ್ನಲ್ಲಿ ಅಷ್ಟು ಹಣವೂ ಇಲ್ಲ. ತಾವು ನನಗೊಂದು ಚಿಕ್ಕ ಬಿಡಾರ ಮಾಡಿಕೊ ಟ್ಟರೆ . . . . "ಎಂದಳು.

"ಊಹುಂ. ನಿಮಗೆ ಆ ಚಿಂತೆಬೇಡ. ಬೇರೆ ಯೋಗ್ಯ ಮನೆ ಸಿಗುವ ವರೆಗಾದರೂ ನೀವಿಲ್ಲಿರಬಹುದು. ಇನ್ನು ಹಣದ ಚಿಂತೆಯು ನಿಮಗೆ ಬೇಡ. ನಾನಿರುವೆ. ಇದರ ಚಾಲಕರು ನನ್ನ ಪರಿಚಿತರು. ನೀನಿಲ್ಲಿಯೇ ಇರುವೆಯಾದರೆ ಅವರಿಗೂ ಲಾಭವುಂಟು. ನಿನಗೆ ಆಕ್ಷೇಪವಿಲ್ಲದಿದ್ದರೆ—ಇರುವಷ್ಟು ದಿನವೆಲ್ಲಾ ಇಲ್ಲಿರ ಬಹುದು" — ಎಂದು ನುಡಿದನು. ಅಷ್ಟರಲ್ಲಿಯೇ ಹೋ ಟೇಲು ಯಜಮಾನರು ಬಂದರು. ಅವರು ಮಾತಿನಲ್ಲಿ ನಮ್ಮ ಡ್ರ್ಯಾಯವರ ಮಹಾಶಯರಿಗಿಂತಲೂ ಮೃದುಭಾಷಿ ಗಳು. ಬಂದವರೇ—"ಸುಬ್ಬು, ಈ ಅಮ್ಮನವರಿಗೆ

ಏನೇನು ಬೇಕೋ ಅದನ್ನು ತಂದು ಕೊಡು. ಅವರು ಕೆಲವು ದಿವಸ ಇಲ್ಲಿಯೇ ಇರುತ್ತಾರೆ. ಕೆಲವು ದಿವಸ ಎಂದರೇನು? ಮೈಸೂರು ಬಿಟ್ಟರೆ, ಇಲ್ಲಿ ಬಿಟ್ಟಹಾಗೆ. ಏನು—ನಿಗಾ ಇರಲಿ"-ಎಂದರು. ಮಾಲತಿಗೆ ತಾನು ತೀರ ವಿಚಿತ್ರ ಪ್ರಪಂಚದಲ್ಲಿ ಕಾಲಿಟ್ಟಂತೆ ಕಂಡಿತು. ಮೊದಲನೆಯ ಯಾತ್ರೆಯಲ್ಲಿ ಅವಳನ್ನು ಮೂಸಿ ನೋಡಿ ದವರಿಲ್ಲ. ಇಂದಾದರೆ ಬೇಡೆಂದರೂ ಉಪಚರಿಸು ವವರೇ?

ಸರಿ ರಾತ್ರೆಯಂತು ಮಾಲತಿ ಈ ಮಹಾನುಭಾವ ರಲ್ಲಿಯೇ ಕಳೆದಳು. ಬೆಳಗ್ಗೆ ಬೇಗನೆ ಡ್ರೈವರ ಸಾಹೇ ಬರೊಡನೆ ಉಪಾಹಾರವಾಯಿತು. ಅವರೀಗ ಪುತ್ತೂ ರಿಗೆ ಮರಳ ಬೇಕಾಗಿದೆ. ಕಾಲು ಹೇಗೆ ಬರುವುದೋ ತಿಳಿಯದು. "ನೀವೇನು ಯೋಚನೆಮಾಡಬೇಡಿ. ನಮ್ಮ ರಾಯರು ಎಲ್ಲಾ ಅನುಕೂಲತೆ ಮಾಡಿಕೊಡುವರು. ನಿಮಗೆ ಬೇರೆ ಮನೆಯೇ ಬೇಕೆಂಬುದು ನಿಜವಾದರೆ ಅವರಿಗೆ ತಿಳಿಸಿದರೆ ಅದನ್ನು ಒದಗಿಸಿಕೊಡಲು ಅಡ್ಡಿ ಯಿಲ್ಲ. ಈಗ ನಾನು ಹೊರಡಲೇ" ಎಂದು.

ಮಾಲತಿಯು ತನ್ನನ್ನು ಎರಡನೆಯ ಕ್ಷೇತ್ರಕ್ಕೆ ಮುಟ್ಟಿಸಿದ ಪುಣ್ಯಾತ್ಮನಿಗೆ ನಮಸ್ಕರಿಸಿ ಬೀಳ್ಕೊಟ್ಟಳು. ಆಗಾಗ ಬರುತ್ತಿರಬೇಕೆಂದೂ ಉಪಚರಿಸಿದಳು. ಅಂತು ಅವಳಿಗಾದರೂ ಆ ಠಾಣೆಯನ್ನು ತತ್ಕಾಲಕ್ಕೆ ಬಿಡುವ ಮನಸ್ಸು ಬರಲಿಲ್ಲ. ಒಮ್ಮೆ ತಾನೇ ತನ್ನಿಷ್ಟ ಬಂದಂತೆ ವರ್ತಿಸಿದರೆ, ಏನಪಾಯವು ಬರುವುದೋ—ಎಂದು

ಅಂಜಿ ಅಲ್ಲೇ ನೆಲೆಯಾಗಿ ನಿಲ್ಲುವ ನಿಶ್ಚಯಮಾಡಿದಳು. ಅಲ್ಲಿ ವಾಸವಾಗಿರುವ ಭಾರಿ ಭಾರಿ ಮನುಷ್ಯರನ್ನೂ ಬಂದುಹೋಗುವ ಜನಸಂದಣಿಯನ್ನೂ ಕಂಡು, ತನ್ನಂಥವಳಿಗೆ ಅದಕ್ಕೂ ಮೇಲೆನಿಸಿದ ಸ್ಥಳವು ದೊರೆಯಲಾರದೆಂದು ತಿಳಿದುಕೊಂಡಳು.

## ೯. ಮಾಲತಿಯ ನವನಾಯಕ.

ಮಾಲತಿಯು ಮೈಸೂರಿಗೆ ಬಂದು ಇಂದಿಗೆ ಒಂದು ತಿಂಗಳಾಗುತ್ತ ಬಂದಿತು. ಮುಂಬಯಿ ಹೋಟೇಲಿನವರ ಕೃಪೆಯಿಂದ ಯಾವ ಕೊರತೆಯೂ ಅವಳಿಗಿದ್ದಿಲ್ಲ. ತನ್ನ ಪಾಲಿನ ಕ್ಷಾಮದ ದಿನಗಳು ನಿವಾರಣೆಯಾದುದಕ್ಕಾಗಿ ಅವಳು ಸಂತಸಗೊಂಡಳು. ಆದರೆ ಲಜ್ಜೆಯ ದಿನಗಳು ಹೋಗುವುದಿಲ್ಲೆಂದು ಅವಳಿಗೆ ತಿಳಿದಿತ್ತು. ಇದ್ದುದರಿಂದಲೇ ಅವಳು ತೃಪ್ತಳಾಗಿ ಆ ಮಹಡಿಯ ಮೇಲೆಯೇ ದಿನವನ್ನು ಕಳೆಯುತೊಡಗುವಳು. ಬೇಸರವಾಯಿತೆಂದರೆ ಹಾಡುತ್ತ ಕುಳಿತುಕೊಳ್ಳುವಳು. ಹೊರಗೆ ಕಿಟಕಿಯಿಂದ ಕೇಳುತ್ತಲೂ ಇರುವಳು. ಒಳಗೆ ಬರಲು ಎಲ್ಲರಿಗೂ ಸಾಹಸವಾಗುತ್ತಿರಲಿಲ್ಲ. ಕೆಲವರ ತಿಳಿವಿನಲ್ಲಿ ಅವಳು ಹೋಟೇಲು ಚಾಲಕರ ನಾಯಕಿಯೆಂಬ ಗ್ರಹಿಕೆಯಿತ್ತು. ಆದುದರಿಂದ ಯಾರೊಬ್ಬರೂ ಅವಳನ್ನು ಪೀಡಿಸ ಹೋಗಲಿಲ್ಲ. ಅವಳಾದರೂ ತನ್ನ ಊದಿಹೋದ ಕಣ್ಣುಗಳನ್ನು ತಿರುಗಿಸುವ ಗೋಜಿಗೆ ಹೋಗಲಿಲ್ಲ.

ಹಸಿದ ಹುಲಿಯಾದರೆ ಮನುಷ್ಯನನ್ನಾದರೂ ಹರಿದು ತಿನ್ನುವುದು, ಹೊಟ್ಟೆತುಂಬಿತೆಂದರೆ ಅದರ ಕಣ್ಮುಂದೆಯೇ ಇತರ ಪ್ರಾಣಿಗಳು ಹಾರಿಹೋದರೂ ಅದಕ್ಕೆ ಪರವೆ ಇರುವುದಿಲ್ಲ. ಅಂದು ಮಾಲತಿಯು ಹಸಿದ ಹುಲಿಯಾಗಿದ್ದಳು. ಆ ಕ್ಷುಧೆಯನ್ನು ನಿವಾರಿಸಲು ಅವಳು ತನ್ನ ಮಾನವನ್ನು ತಿಂದಳು, ಬಳಿಕ ಬಂದ ಬಂದವರ ಮಾನವನ್ನೂ ತಿಂದಳು. ಅವಳಾಗಿ ತಿಂದ ಳೆನ್ನಲು ಬಾರದಿದ್ದರೂ, ಪರರ ದೆಸೆಯಿಂದಲಾದರೂ ತಿಂದಳು. ಕೊನೆಕೊನೆಗೆ ಅವಳಾಗಿಯೇ ಹಾದಿ ಹೋಕರನ್ನು ಕರೆಯಲು ಹಿಂಜರಿಯಲಿಲ್ಲ. ಆದರೆ, ಈಗಂಥ ವೃತ್ತಿಗೆ ಅತಿ ಉತ್ಕೃಷ್ಟ ರಂಗಭೂಮಿಯು ದೊರೆತಿದೆ. ಶ್ರೀಮಂತರು, ತರುಣರು, ವಿಲಾಸಿಗಳು ಬಂದುಹೋಗುವ ಸ್ಥಳ. ಇವಳ ಕೊಟಡಿಯ ಮುಂದೆ ಅಂಗಣದಲ್ಲಿ ನಿತ್ಯವೂ ಭಾರಿ ಮನುಷ್ಯರ ಇಸ್ಪಿಟು ಮಂಡಳವು ಕೂಡುತ್ತಿತ್ತು. ಆ ಮಂಡಳದವರ ಕಿವಿಗೆ ಮಾಲತಿಯ ಹಾಡು ಬಿತ್ತೆಂದರೆ “ವಹವ್ವಾ”—“ವಹ ಹವ್ವಾ” ಎನ್ನುವರು. ಹಾಗೆ ಅವರಲ್ಲಿಯೇ ಒಬ್ಬಿಬ್ಬರು ಅವಳಿರುವಲ್ಲಿಗೆ ಹೋಗಿ, ದೇವಿಯನ್ನು ಭಕ್ತಿಪೂರಿತ ನಯನಗಳಿಂದ ಕಾಣುವ ಮುಗ್ಧ ಭಕ್ತರಂತೆ, ಇವರಾದರೂ ಅವಳ ಮುಂದೆ ಕಣ್ದೆರೆದು, ಅವಳ ಸೌಂದರ್ಯವನ್ನು ಆರಾಧಿಸುತ್ತ ಕುಳಿತುಕೊಳ್ಳುವರು. ಒಮ್ಮೆ ಅವಳಲ್ಲಿ ಸೌಂದರ್ಯವು ಕಾಣಿಸದಿದ್ದರೆ—ಅವಳಲ್ಲಿ ಇಲ್ಲದ ಸೌಂದರ್ಯವನ್ನು ಆ ವಿಚಕ್ಷಣರು ಊಹಿಸಬಲ್ಲರು.

“ಅಲ್ಲಲ್ಲಿ ಹೇಗಿರುವಿರಿ. ಎಲ್ಲ ಕ್ಷೇಮ ತಾನೇ” ಎಂದೊಂದೆರಡು ಮಾತುಗಳನ್ನು ಆಡುವರು. ಮಾಲತಿಯು ಮುಗುಳ್ನಗೆಯಿಂದಲೇ ಅವರನ್ನು ತೃಪ್ತಿಗೊಳಿಸಿ ಕಳುಹಿಸುವಳು. ಅವಳಿಗಿಂದು ಮೊದಲಿನ ಹಸಿವೆಯಿಲ್ಲ.

ಅದರ ಬದಲು ಒಮ್ಮೊಮ್ಮೆ ವ್ಯಥೆಯಾಗುವುದೂ ಉಂಟು. ಪ್ರಫುಲ್ಲ, ಮಹೇಶರ ನೆನಪಾದರೆ ಅಳುವಳು. ತಿರುಗಿ—‘ಛಿ, ಇನ್ನವರ ನೆನಪುಮಾಡಿಕೊಂಡು ಉಪಯೋಗವೇನು’ ಎಂದುಕೊಳ್ಳುವಳು. ಆದರೆ ಇನ್ನೊಂದು ವಿಚಾರದ ದೆಸೆಯಿಂದ ಅವಳು ಮೆಲ್ಲಗೆ ಯೋಚನೆಗೀಡಾಗಿರುವಳು. ನಿತ್ಯವೂ ಅವಳ ಕೊಟಡಿಯ ಮುಂದೆ ಅವಳ ಗಾಯನಕ್ಕೆ ಮರುಳಾಗಿ, ಅವಳ ದರುಶನಕಾಂಕ್ಷಿತರಾಗಿ, ಬಂದು ನಿಲ್ಲುವ ತರುಣರು ಕೆಲವರನ್ನು ಕಂಡು, ಒಂದು ದಿನ ತನ್ನ ಗಾನವನ್ನು ನಿಲ್ಲಿಸಿದಳು. ಆದರೆ ಇವರು ಎಂದಿನಂತೆಯೇ ಅಲ್ಲಿಂದ ಕದಲರು. ಹಾಗಾದರೆ ಅವರು ಗಾನಕ್ಕೆ ಬಂದವರಲ್ಲವೆಂಬುದು ಮಾಲತಿಗೆ ಸ್ಪಷ್ಟವಾಯಿತು. ಮನವಿದ್ದರೆ ಈ ನವಯುವಕರನ್ನು ಯಾವ ಗಳಿಗೆಯಲ್ಲೂ ಅವಳು ನರಕಕ್ಕೆಳೆಯಬಹುದು. ಆದರೆ ಅವಳಿಂದದು ಆಗದ ಕೆಲಸವಿದು. ಹಸಿವೆಯಾದರೆ ವನ್ಯಮೃಗವು ಒಂದು ಮೃಗವನ್ನು ಕೊಲ್ಲುವುದೆಂದು ಸುಮ್ಮನೆ ಕೊಲ್ಲುವುದೇ. ಅವಳಿಗಿಂದು ಹೊಟ್ಟೆ ಹಸಿವೆಯಿಲ್ಲ; ಮುಂದಿನ ಯೋಚನೆಯಿಲ್ಲ. ಕಾಮದ ಹಸಿವೆಯು ಇಲ್ಲವೇ ಇಲ್ಲ. ಸಾಮಾನ್ಯವಾಗಿ ವೇಶ್ಯೆಯರಲ್ಲಿ ಕಾಮದ

ಕಾಮಾಗ್ನಿಮಾಂದ್ಯವೇ ತಟ್ಟುವುದು. ಆದರೆ ಹಣ ಕ್ಕಾಗಿ, ಇಂದಿನ ಯೋಚನೆಯಲ್ಲದಿದ್ದರೆ ಅವರು ಆ ನಿಯಮವನ್ನು ಮೀರುವರು. ಅದರಿಂದ ಅನೇಕ ಬೇನೆಗಳನ್ನು ಸಹಿಸುವರು. ಒಮ್ಮೆಗೆ ಮನೆಗೆ ಬಂದ ಗಿರಾಕಿಯನ್ನು ತಮಗೆ ಹಸಿವಿಲ್ಲವೆಂದು ಕಳೆದರೆ, ನಾಳೆ ಅವರು ಬರುವುದುಂಟೇ? ಆದರೆ ಮಾಲತಿಗೆ ನಾಳಿನ ಚಿಂತೆಯಿಲ್ಲ. ಅದರ ಬದಲು, ತನ್ನಿಂದ ಈ ತರುಣ ಪ್ರಾಣಿಗಳು ಕೆಡುವುವಲ್ಲಾ ಎಂದು ಅವಳು ಯೋಚನೆ ಗೀಡಾದಳು. ವ್ಯಭಿಚಾರವು ನೀಚವೃತ್ತಿಯೆಂದು ಅವಳು ತಿಳಿಯದೆ ಇರಲಿಲ್ಲ. ಬರಗಾಲದಲ್ಲಿ ಹಸಿದವನು ಕಸಕಡ್ಡಿ, ಹುಳುಹುಪ್ಪಟಗಳನ್ನೂ ಸಹ ಹೆಕ್ಕಿ ತಿನ್ನುವಂತೆ ಅವಳು ಬಾಳ್ವೆಗಾಗಿ ಆ ವೃತ್ತಿಯನ್ನು ಕೈಕೊಂಡಳು. ಅವಳಂತೆಯೇ ವಿಧವೆಯರಿಗೆ ತಮ್ಮ ಕಾಮಾಗ್ನಿಯ ತೃಪ್ತಿಗಾಗಿ ವೇಶ್ಯೆಯರಾಗುವವರೂ ಉಂಟು. ಆದರೆ ಮಾಲತಿಯು ಅಂಥವಳಲ್ಲ. ಹಿಂದೆ ಹೇಳಿದ ಸ್ತ್ರೀಯರು ಸಹ—ವ್ಯಭಿಚಾರದ ಹಾದಿಗ ಕೆಲವು ದಿನ ಬಿದ್ದರೆಂದರೆ ಮುಂದೆ ಅವರ ಕ್ರಿಯೆಗಳೆಲ್ಲ ಕೇವಲ ಯಾಂತ್ರಿಕವಾಗಿ ನಡೆಯುವುವಲ್ಲದೆ ಅದರಲ್ಲಿ ಮಾನಸಿಕ ಆಸೆ ಉತ್ಸಾಹಗಳು ಕೂಡಿರುವುದಿಲ್ಲ. ಹೀಗಿರುವಲ್ಲಿ ಮಾಲತಿಯ ಮನಸ್ಸು ಯೋಚನೆಗೀಡಾದುದರಲ್ಲಿ ಆಶ್ಚರ್ಯವಿಲ್ಲ.

ಅಲ್ಲಿ ನೆರೆಯುವವರಲ್ಲಂತು ಓರ್ವ ತರುಣನು, ಅವಳ ಕೊಟಡಿಯ ಮುಂದೆ ಮುಂದೆ ತನ್ನ ಬೈಟಕನ್ನೆ

ಬೆಳೆಯಿಸುವಂತೆ ತೋರಿತು. ಒಂದೆರಡು ದಿನಗಳ ವರೆಗೆ ಅವನು ಪುಸ್ತಕವನ್ನು ಒಯ್ಯುತ್ತಿದ್ದುದನ್ನು ಕಂಡು ಯಾವನೋ ಓರ್ವ ಪ್ರೌಢ ವಿದ್ಯಾರ್ಥಿಯಿರಬೇಕೆಂದು ಅವಳು ಊಹಿಸಿದಳು. ಆದರೆ ಇವಳು ಅವನ ದೃಷ್ಟಿಗೆ ಗೋಚರಿಸಿದ ದಿನದಿಂದ ಅವನ ಪುಸ್ತಕಗಳು ಪೆಟ್ಟಿಗೆಯಲ್ಲಿಯೇ ಉಳಿದುವು. ಶಾಲೆಯು ಅಲ್ಲಿಯೇ ಉಳಿಯಿತು. ಅವನೀಗ ಮಾಲತಿಯ ಆರಾಧ್ಯದೇವತೆಯಾಗಿರುವನು. ಅವನ ನಯನಗಳಲ್ಲಿ ಪ್ರಣಯಯಾಚನೆಯೇ ಕಾಣಿಸುತ್ತಿತ್ತು.

ಒಂದು ದಿನ ಮಾಲತಿಯು ಸೆಕೆಯಾಯಿತೆಂದು ಮಹಡಿಯ ಮಾಡನ್ನೇರಿ ಆ ಅಂಗಣದ ಮೇಲೆ ಬೀಸುತ್ತಿದ್ದ ಅಲ್ಪ ಸ್ವಲ್ಪ ತಂಗಾಳಿಯನ್ನು ಸೇವಿಸುತ್ತಿದ್ದಳು ಆಕಾಶವನ್ನು ನೋಡುತ್ತ ಸುಮ್ಮನೆ ಕುಳಿತಿದ್ದಳು. ಮೆಲ್ಲನೆ ಅವಳ ಕಂಠದಿಂದ ಧ್ವನಿಯು ಹೊರಡತೊಡಗಿ ಹಾಡಿನರೂಪನ್ನು ಧರಿಸಿತು. ಅವಳೀಗ ತನ್ನಷ್ಟಕ್ಕೆ ಕಿರುದನಿಯಿಂದ ಹಾಡುತ್ತಿರುವಳು. ಅಷ್ಟರಲ್ಲಿ ಹಿಂದೆ ಹೇಳಿದ ತರುಣನು ಅವಳ ಮುಂದೆ ಬಂದು ನಿಂತನು. ಮಾಲತಿಯು ಅವನನ್ನು ಕಂಡರೂ ಕಾಣದವಳಂತೆ ಹಾಡುತ್ತ ಕುಳಿತಳು. ತರುಣನು ಧೈರ್ಯದಿಂದ ಅವಳ ಬಳಿಯಲ್ಲಿ ಕುಳಿತನು. ಆದರೂ ಮಾಲತಿಯು ಅವನ ಕಡೆಗೆ ಗಮನಕೊಡಲಿಲ್ಲ. ತರುಣನು ಸಾಹಸದಿಂದ ಅವಳನ್ನು ಮಾತನಾಡಿಸುವ ಪೂರ್ವಪೀಠಿಕೆಯೆಂಬಂತೆ ತನ್ನ ಕೈಯನ್ನವಳ ಹೆಗಲ

ಮೇಲಿರಿಸಿದನು. ಮಾಲತಿಗೆ ಸಿಟ್ಟುಬಂತು. ಅದನ್ನು ಕಿತ್ತು ಕೆಳಕ್ಕೆಸೆಯುವ ಎಂದು ಅವನ ಕೈಯನ್ನು ಹಿಡಿದಳು. ಆದರೆ ಅಷ್ಟು ನಿಷ್ಕರುಣಿಯಾಗಲು ಅವಳಿಂದಾಗದಾಯಿತು. ಕೂಡಲೆ ಅವಳು ಅವನ ಕೈಯನ್ನು ಕೆಳಕ್ಕೆ ತೆಗೆದು ತನ್ನೆರಡು ಕೈಗಳಿಂದ ಹಿಡಿದಳು. ತರುಣನಿಗೆ ತನ್ನ ಮನೋರಥವು ನೆರವೇರಿತೆಂದು ಮನವು ಉಬ್ಬಿತು. ಅವಳೇನು ಮಾತನಾಡುವಳೆಂದು ಕುತೂಹಲಗೊಂಡನು.

"ಸ್ವಾಮಿ, ನೀವು ಸುಮ್ಮನೆ ನನ್ನ ಗೆಳೆತನಕ್ಕೆ ಬಿದ್ದು ನಿಮ್ಮ ಜೀವವನ್ನು ನಿರರ್ಥಕಮಾಡಿಕೊಳ್ಳಬೇಡಿ. ನನಗೆ ನಾನಾರೆಂದು ತಿಳಿದಿದೆ."

ತರುಣನು ಚಕಿತನಾದನು. ಈ ಉತ್ತರವು ಬಂದೀತೆಂದು ಅವನು ಎಣಿಸಿರಲಿಲ್ಲ. "ಹಾಗೆ ಹೇಳಕೂಡದು" ಎಂದಿಷ್ಟೇ ಅವನ ಪ್ರಾರ್ಥನೆ.

"ನೀವು ಏನುಮಾಡುತ್ತಿರುವಿರೆಂದು ನಿಮಗೆ ತಿಳಿಯದು. ಬೇಡ, ಕೆಳಗೆ ಹೋಗಿರಿ. ನನ್ನ ಆಸೆಯಿಂದ ನಿಮ್ಮ ವ್ಯಾಸಂಗಕ್ಕೂ ಸುಖಕ್ಕೂ ಕೆಡುಕಾಗಬಾರದು."

"ನೀನು ಹಾಗಾದರೆ ವೇಶ್ಯೆ. . . ."

"ಅಹುದು. ಆದರೆ ಅವಳು ಹೀಗೆಯೇ ಇರಬೇಕೆಂದಿಲ್ಲ. ನಾನೆಂಥ ವೇಶ್ಯೆಯೆಂದು ನಿಮಗೆ ತಿಳಿಯದು."

"ವೇಶ್ಯೆಯರಲ್ಲಿ ಎಂಥ ವೇಶ್ಯೆಯರಿರುವರು?"

"ಇರುವರು".

“ಅದು ಹೇಗೆ?”

“ಅದು ನಿನಗೆ ಬೇಡದ ಮಾತು”.

ಒಮ್ಮೆಗೇ ಬಹುವಚನವು ಮಾಯುವಾಗಿ ಏಕವಚನವು ಬಂದಿತು. ಇದರಿಂದ ತರುಣನಿಗೆ ಅಸಮಾಧಾನವಾಗುವುದರ ಬದಲು ಅವಳು ತನ್ನನ್ನು ಪ್ರೀತಿಸತೊಡಗಿರುವಳು ಎಂದು ತೋರಿತು. ಅದರಿಂದವನು ಕಿಸೆಯಿಂದ ೧೦ ರೂಪಾಯಿ ನೋಟನ್ನು ತೆಗೆದು ಅವಳ ಕರದ ಮೇಲಿರಿಸಿದನು.

“ಇದು ನಿನ್ನಲ್ಲೇ ಇರಲಿ. ನನ್ನ ಮಾತನ್ನು ಪೂರ್ಣ ಕೇಳಿಕೋ. ನಿನಗೆ—ನಿನಗೆ ಅನ್ನುತ್ತಿರುವುದನ್ನು ಕ್ಷಮಿಸು. ನಿನ್ನ ಮೇಲಿನ . . .”

“ಪ್ರೇಮದಿಂದ”

“ಅಲ್ಲ, ಕನಿಕರದಿಂದ ನುಡಿಯುತ್ತಿರುವೆ. ಪ್ರೇಮವೂ ಆಹುದು. ನೀನು ಕೆಡಬಾರದೆಂಬ ಮಮತೆ. ಇದುವರೆಗೆ ವೇಶ್ಯೆಯಾದವಳು ಅಂಥ ಕೆಲಸವನ್ನು ಮಾಡಿರಲಾರಳು. ಹೀಗೆಂದು ಆಶ್ಚರ್ಯಪಡಬೇಡ. ಇರಲಿ, ನಿನಗೆ ಮನೆಯಲ್ಲಿ ತಂದೆತಾಯಿಗಳಿಲ್ಲವೇ?”

“ಇರುವರು.”

“ಅವರಿಗೆ ತಿಳಿದರೆ.

“ನಾನು ಲಕ್ಷಿಸುವುದಿಲ್ಲ.”

“ಅದು ನನಗೆ ಬೇಕಿಲ್ಲ, ತಿಳಿದರೆ ಅವರಿಗೆಷ್ಟು ವ್ಯಥೆಯಾದೀತೆಂದು ಗೊತ್ತಿಬೆಯೇ?”

ಮೌನ.

“ನಿನಗೆ ವಿವಾಹವಾಗಿದೆಯೇ?”

“ಇಲ್ಲ. ಬೇಕಾದರೆ ನಿನಗಾಗಿ ಆಗದೆಯೂ ಇರುವೆನು.”

“ನನಗಾಗಿ ನೀನೇನು ಮಾಡಲೂ ಬೇಡ.”

“ನನ್ನ ಗೆಳೆತನವನ್ನು ಮಾಡಿದವರ ಅವಸ್ಥೆಯೇನೆಂಬುದು ನಿನಗೆ ತಿಳಿದಿದೆಯೇ?”

“ನಾನು, ತಿಳಿಯಲು ಬಯಸುವುದಿಲ್ಲ.”

“ಅದೇ ಮರುಳಾಟಿಕೆ. ನಾನು ವೇಶ್ಯೆಯು ನಿಜ; ಆದರೆ ಬಂದವರ ಪ್ರಣಯವನ್ನು ಸ್ವೀಕರಿಸುವುದು ನನ್ನ ಲೌಕಿಕಧರ್ಮ. ಆದರೆ ನಿನ್ನಂಥ ತರುಣರ ಜೀವನವನ್ನು ನಷ್ಟಮಾಡುವುದು ನನಗೆ ಪಾಪವೆಂದು ತೋರುವುದು.”

“ವೇಶ್ಯೆಯರಿಗೆ ಪಾಪಪುಣ್ಯದ ಎಣಿಕೆಯಿದೆಯೇ?”

“ಇರುವವರಿಗೆ ಇರಬಾರದೆಂದಿಲ್ಲ. ನೀನಿಂದು ಪ್ರಣಯಾಂಧನು. ಏನನ್ನೂ ಮಾಡುವೆ. ಆದರೆ ಚೆನ್ನಾಗಿ ತಿಳಿದಿರು—ನಾನು ನೂರಾರು ಶಾರೀರಿಕ ರೋಗಗಳಿಂದ ನರಳುತ್ತಿರುವೆ. ನಾನಿಂದು ವಿಷಸರ್ಪ. ನನ್ನ ಬಳಿಗಾರೂ ಬರುವುದು ಒಳಿತಲ್ಲ. ಅದರಲ್ಲೂ, ಜೀವನದ ಆಕಾಶದಲ್ಲಿ ಹಾರಲು ಈಗಷ್ಟೆ ತೊಡಗಿದ ನಿನಗೆ ಬೇಡದ ವಿಚಾರವದು.”

ಮೌನ.

“ತರುಣಾ, ನಿನ್ನೀ ಮನಸ್ಸನ್ನಿಷ್ಟೇ ಅಲ್ಲ, ಆರೋಗ್ಯವನ್ನು ಕ್ಷಣಿಕ ವಿಲಾಸಕ್ಕಾಗಿ ಮಸಣದಲ್ಲಿ ಒಗೆ

ಯಲು ನೀನು ಸಿದ್ಧನಿರುವೆಯಾ? ಹಾಗಾದರೆ ನೀನು ಮೂರ್ಖನೇ ಸರಿ . . . ನಡಿ, ಸುಮ್ಮನೆ ನನ್ನಂಥವಳಿಗಾಗಿ ಸಾಯಬೇಡ. ಯಾವಳಾದರೊಬ್ಬಳು ಕನ್ನೆಯನ್ನು ವಿವಾಹಿತನಾಗಿ ಸುಖವಾಗಿರು. ಗಣಿಕೆಯರ ಸಹವಾಸಬೇಡ."

ಆದರೆ ಪ್ರಣಯಕ್ಕೆ ಕಣ್ಣಿಲ್ಲ; ರೆಕ್ಕೆಯಿದೆ. ಅದು ನೋಡುವುದಿಲ್ಲ, ಹಾರುವುದಷ್ಟನ್ನೇ ಬಲ್ಲುದು. ಹಾರಾಟವು ಎಲ್ಲಿಗೆ ಒಯ್ಯುವುದು ಎಂಬುದನ್ನು ಅದು ಯೋಚಿಸದು. ಹಾಗಾಯಿತು ನಮ್ಮ ವೀರೇಶನ ಪಾಡು.

ವೀರೇಶನು ಮಾಲತಿಗೆ ಉತ್ತರವನ್ನೀಯಲಾರದೆ ತನ್ನ ಕೊಟಡಿಗೆ ಬಂದನು. ಮಾಲತಿಯ ಶಾಂತಿ ಭಂಗವಾಗಿ ಅವಳು ತನ್ನ ಶಯ್ಯಾಗೃಹಕ್ಕೆ ಮರಳಿದಳು. ರಾತ್ರೆಯೆಲ್ಲ ಅವಳಿಗೆ ತನ್ನ ದುರ್ಜೀವನದ ನೆನಪಾಗತೊಡಗಿತು. ತಿರುಗಿ ಸ್ವಗ್ರಾಮಕ್ಕೆ ಮರಳುವ ಮನಸ್ಸೂ ಆಗಾಗ ಆಗತೊಡಗಿತು. ಒತ್ತಟ್ಟು ಅಭಿಮಾನ, ಅದಕ್ಕೂ ಮಿಗಿಲೆನಿಸಿ ತನ್ನಂತಹ ಕಲಂಕೆಯು ಬಂಧುಗಳನ್ನು ಸೇರಿಕೊಂಡು ಅವರ ಮೇಲೆ ಸಾಮಾಜಿಕ ವಿಪತ್ತನ್ನು ಕೆಡೆಯಬಾರದೆಂದು ಕಂಡಿತು. ಪುನರ್ವಿವಾಹದ ವಿಚಾರವಾಗಿ ಅವಳು ಹಾಗೆ ತಿಳಿದಿಲ್ಲ. ತನಗೆ ಎರಡನೇ ಮದುವೆಯ ಅಧಿಕಾರವಿದೆಯೆಂದು ಅವಳು ತಿಳಿದಿದ್ದಳು. ಆದರೆ "ಸೂಳೆಯಾದವಳನ್ನು ಒಡನಾಡಿಗಳು ಕೂಡಿರುವುದೆಂದರೆ? . . . ಅವಳ ನ್ಯಾಯಶಾಸ್ತ್ರಕ್ಕೂ ಸರಿ ಕಾಣದಾಯಿತು." "ಇಲ್ಲ—ನಾನು ನಿತ್ಯ

ಸುಮಂಗಲಿಯಾಗಿಯೇ ಸಾಯುದ ಮಾರ್ಗವಿಲ್ಲೆಂದು ಕೊಂಡು— ಮಲಗಿದಳು

ವೀರೇಶನು ತನ್ನ ಕೊಟಡಿಯನ್ನು ಸೇರಿ ಮಲಗಿಕೊಂಡನೆಂಬುದು ನಿಜ. ಆದರೆ ನಿದ್ರೆ ಹತ್ತಬೇಕೆ? ಪ್ರಣಯ ಮಾರುತವು ಒನ್ಮೆ ಬೀಸತೊಡಗಿದರೆ ಆಗುವಷ್ಟು ಅನರ್ಥವನ್ನೆಲ್ಲಾ ಉಂಟುಮಾಡಿ, ಬಳಿಕ ಅದು ಶಾಂತವಾಗುವುದಂತೆ. ಆ ಸುಳಿಗಾಳಿಯಲ್ಲಿ ಸಿಲುಕಿದ ವೀರೇಶನಂಥ ಅವಿಚಾರಿಯ ಗತಿಯೇನು? ಮನೆಯಲ್ಲಿ ಅಪಾರ ಸಂಪತ್ತಿದೆ! ಈಗದರೊಡನೆ ಪ್ರಣಯದ ಮೂರ್ಖತೆಯೂ ಬೆರತಿದೆ. ಅವನೀಗ ಆವಳನ್ನು ಮರೆಯದಾದನು. "ತಾನು ವಿಷಜೀವಿ" ಎಂದವಳ ಮಾತನ್ನು ಕೇಳಿದ್ದರೂ-ಅದರ ಪರವೆಯಿಲ್ಲದವನಂತೆ, ಆವಳಿಗಾಗಿ ಬದುಕಬೇಕು; ಇಲ್ಲವೆ ಸಾಯುಬೇಕು — ಎಂದವನಿಗೆ ತೋರಿತು.

ಯೋಚಿಸಿ ಯೋಚಿಸಿ ಯೋಚಿಸಿ ಬೇರೆ ಉಪಾಯುವನ್ನು ಕಾಣಲಾರದೆ ಮಾಲತಿಗೊಂದು ದೀರ್ಘ ಪತ್ರವನ್ನು ಬರೆಯತೊಡಗಿದನು. ಎರಡು ಮೂರಾವರ್ತಿ ಬರೆದು ಹರಿದನು. ಬೆಳಗಾಗುವುದರೊಳಗೆ, ಕಾರಣ— ಅಲ್ಲಿಯ ತನಕ ಅವನ ಯೋಚನೆ ಲೇಖನಗಳೇ ನಡೆದುವು, ಒಂದು ಮನವಿಯೂ ತಯಾರಾಯಿತು ಬೆಳಗಿನ ಉಪಹಾರ ಮೊದಲಾದುವು ತೀರಿದ ಬಳಿಕ ಶಾಲೆಗೆ ವೇಳೆಯಾಗಲು, ಪುಸ್ತಕಗಳನ್ನು ಹಿಡಿದುಕೊಂಡು ಎದ್ದನು. "ಇದು ತನ್ನ ವಿದ್ಯಾರ್ಥಿ ಜೀವನದ ಕೊನೆಯ

ದಿನ" ವೆಂದು ಅವನಿಗೆ ನಿಶ್ಚಯವಾಗಿ ತಿಳಿದಿತ್ತು. ಹೊರ ಟವನು, ಮಾಲತಿಯ ಕೊಟಡಿಯ ಮುಂದೆ ಬಂದು ನಿಂತನು. ಕದವು ಇಕ್ಕಲ್ಪಟ್ಟಿತ್ತು. ಅತ್ತಿತ್ತ ನೋಡಿ ದನು. ಯಾರೂ ಕಾಣಿಸಲಿಲ್ಲ. ಆ ಪತ್ರವನ್ನು ಬಾಗಿಲ ಸಂದಿನಿಂದ ಒಳಕ್ಕೆ ತಳ್ಳಿ ನೇರಾಗಿ ಸಾಲೆಗೆ ಹೋದನು.

ಮಾಲತಿಯ ಕಣ್ಣಿಗೆ ಪತ್ರವು ಬಿದ್ದಿತು. ಅದರಲ್ಲಿ— ತಾರುಣ್ಯದ ಮೂರ್ಖತನವೆಲ್ಲ ತುಂಬಿತ್ತು. ತಾನು ಅವಳ ಯಾವಜ್ಜೀವ ನಾಯಕನಾಗಲು ಬಯಸುವೆ ನೆಂದೂ, ಅಪಾರ ಶ್ರೀಮಂತಿಕೆಯಿರುವುದೆಂದೂ ತಿಳಿಸಿ ದ್ದನು. ಕೊನೆಯಲ್ಲಿ ಅವನ ಪವಿತ್ರ ನಿರ್ಧಾರ (?)ವೂ ಇತ್ತು. "ನೀನು ಕೊನೆಗೂ ನನ್ನನ್ನು ನಿರಾಕರಿಸು ವಿಯಾ? ನನ್ನ ಸುಖದ ಎಣಿಕೆ ನಿನಗೇಕೆ? ನಿನ್ನಲ್ಲಿ ಬೇನೆಗಳಿದ್ದರೆ ವೈದ್ಯರ ಸಹಾಯದಿಂದ ನಿನಗೆ ಸುಖ ವನ್ನು ನೀಡುವೆನು . . . . ನನ್ನ ಕೊನೆಯ ಮಾತಿದು. ನಾನು ಸಾಯಬಾರದು, ಬದುಕಬೇಕು ಎಂಧಿದ್ದರೆ ನನ್ನ ಪ್ರಾರ್ಥನೆಯನ್ನು ನಿರಾಕರಿಸಬೇಡ."—

ಮಾಲತಿಯು ಈ ಪತ್ರಕ್ಕೇನು ಉತ್ತರವನ್ನೀಯ ಬೇಕು. ಕೊನೆಯ ವಾಕ್ಯವನ್ನು ಕಂಡ ಅವಳಿಗೆ ಪ್ರಫುಲ್ಲನ ನೆನಪಾಯಿತು. ತನಗಾಗಿ ಅವನು ಆತ್ಮ ಹತ್ಯ ಮಾಡಿಕೊಂಡನೆಂದು ಭೀತಿಯಾಯಿತು. ವೇಶ್ಯೆ ಯಾದ ತನ್ನಿಂದ ಇನ್ನೊಂದು ಪ್ರಾಣಿಯು ಅದೇ ಹಾದಿ ಯನ್ನು ಹಿಡಿಯಬೇಕೇ ಎಂದು ತೋರಿತು. ಆಗ ಅವಳ ನಿರ್ಧಾರವು ಮುರಿಯಿತು . . . .

ವೀರೇಶ ಮಾಲತಿಯರು ತಿರುಗಿ ಅದೇ ರಾತ್ರಿ ಮಹಡಿಯ ಮೇಲ್ಭಾಗದಲ್ಲಿ ಹಿನ್ನ ದಿನದಂತೆ ಸೇರಿದ್ದರು. ಕಂಭದಂತೆ ಕುಳಿತಿದ್ದ ಮಾಲತಿಯ ಮುಂದೆ ವೀರೇಶನು ಕಣ್ಣೀರನ್ನು ತಗೆದು ನಿಂತಿದ್ದನು. ಹೇಗೆ ಮಾತನ್ನು ತೊಡಗಬೇಕೆಂದೇ ತೋಚದು. ಮಾಲತಿಯೇ "ಏಕೆ ಬಂದೆ" ಎಂದು ಪ್ರಸ್ತಾಪವನ್ನು ತೊಡಗಿದಳು. "ನನ್ನ ಪತ್ರಕ್ಕೆ ಉತ್ತರ . . . . ?"

ಮಾಲತಿಯು ಮೌನ.

"ಏನು ಮಾತಾಡೆಯಾ . . ನಾನು ಸಾಯು. . . . .

ಮಾಲತಿಗೆ ದುಃಖವು ಉಕ್ಕೇರಿ ಬಂತು. "ಬೇಡ . . . ಬೇಡ" ಎಂದು ಆ ವೀರೇಶನನ್ನು ತಬ್ಬಿಕೊಂಡಳು.

## ೧೦. ಮಾಲತಿಯ ತೃತೀಯ ಯುಕ್ತಿ.

ಮಾಲತಿ ಇಂದು ತನ್ನ ಮೂರನೆಯ ಯಾತ್ರೆಗೆ ಅಣಿಮಾಡುತ್ತಿರುವಳು. ಕಾರಣ ವೀರೇಶನಿಗೆ ಇನ್ನು ಓದು ಸಾಕೆಂದು ತೋರಿತು. ಅವನು ಆ ದಿನವೇ ಮನೆಗೆ ಪತ್ರ ಬರೆದಿದ್ದನು—"ನನಗಿನ್ನು ಓದುಬರಹದ ಮೇಲೆ ಮನಸ್ಸಿಲ್ಲ. ಅಂಗಡಿ ವ್ಯಾಪಾರದಲ್ಲಿ ನಿಮಗೆ ಸಹಾಯವಾಗಬೇಕೆಂಬುದೇ ನನ್ನಾಸೆ" ಎಂದು. ಅವನ ತಂದೆತಾಯಿಗಳ ಮನಸ್ಸಿಗೆ 'ಊಟಕ್ಕಿರುವ ಮಕ್ಕಳು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಹಣವ್ಯಯಿಸುವುದು ಮರುಳಾಟಕೆಯೆಂದು' ತೋರುತ್ತಿತ್ತು. ಒಂದೆರಡು ಬಾರಿ ಅವನ ತಾಯಿಯು—'ಮಗೂ, ಓದುಬರಹವೆಂದು ಪರ

ಊರಲ್ಲಿ ಏಕೆ ಆಯುಷ್ಯ ಕಳೆಯಬೇಕು? ನಿನಗೇನು ಉಣಲಿಕ್ಕಿಲ್ಲವೇ, ಉಡಲಿಕ್ಕಿಲ್ಲವೇ? ಸ್ವಸ್ತವಾಗಿ ಮನೆಯಲ್ಲಿರಬಾರದೇ? ನಿನ್ನ ತಂದೆಯವರಂತು ವಯಸ್ಸಿನ ದೆಸೆಯಿಂದ ಅಂಗಡಿ ಕೆಲಸ ನಿರ್ವಹಿಸಲು ಅಶಕ್ತರು. ಏಕೆ ಮನೆಯಲ್ಲಿರಬಾರದು?' ಎಂದಿದ್ದಳು. ಅಂತಹ ಹಿರಿಯರಿಗೆ ಮಗನ ಈ ಪತ್ರವನ್ನು ನೋಡಿ ಎಷ್ಟು ಹರುಷವಾಗಲಿಕ್ಕಿಲ್ಲ. ಒತ್ತಟ್ಟು—"ಮಗೂ, ಈಗಾದರೂ ನಿನಗೆ ತಿಳಿವು ಬಂತಷ್ಟೆ" ಎಂದು ಬರೆದರು; ಇನ್ನೊತ್ತಟ್ಟು ವೀರೇಶನ ಮದುವೆಯ ಯೋಚನೆ ಮಾಡತೊಡಗಿದರು. ವೀರೇಶನ ತಾಯಿಯ ಕಣ್ಣಿನ ಮುಂದೆ ೧೦೦ ೨೦೦ ಕನ್ನೆಯರು ಮಗನ ಪಾಣಿಗ್ರಹಣಕ್ಕಾಗಿ ಹಾತೊರೆದು ಬಂದು ನಿಂತಂತೆ ಕಾಣುತ್ತಿತ್ತು. ಯಾರನ್ನು ಆರಿಸಲಿ, ಯಾರನ್ನು ಬಿಡಲಿ?

ತನ್ನ ಪತ್ರಕ್ಕೆ ಪ್ರತ್ಯುತ್ತರವು ದೊರೆತ ದಿನವೇ ಮಾಡರ್ನ ಹೋಟೇಲಿನ ಮಹಡಿಯ ಮೇಲೆ ಗೆಳೆಯರೆಲ್ಲರಿಗೂ ಒಂದು ಭಾರಿ ಉಪಹಾರ. ಹೂವು, ಹಣ್ಣು, ತಿಂಡಿ, ತೀರ್ಥಗಳು. ತಿನ್ನತಿನ್ನುತ್ತ ಒಬ್ಬ ತರುಣನು— "ಇಷ್ಟೆಲ್ಲಾ ಇದ್ದು, ವೀರೇಶಾ, ಸಂಗೀತವಿಲ್ಲವೆಂದರೆ ಏನೋ:" ಎಂದನು. ಇನ್ನೊಬ್ಬನು "ಮೊದಲೇ ಸೂಚನೆ ಮಾಡಿದ್ದರೆ ಏನಾದರೂ ಮಾಡಬಹುದಿತ್ತು; ಈಗ ಹೇಳಿದರೆ ಅವನೇನು ಮಾಡಬೇಕು?" – ಎಂದನು. "ಮೊದಲೇ ಹೇಳುವುದೆಂದರೆ ಹೇಗೆ? ಈ ಪ್ರಾಣಿಯಿಂದ ನನಗೆ ಆಮಂತ್ರಣ ಸಿಕ್ಕಿದುದೇ ನಾಲ್ಕು ಘಂಟೆಗೆ; ಐದು

ಘಂಟೆಗೆ ನಾನು ಇಲ್ಲಿ ಇರಲೇ ಬೇಕಾಗಿದೆ. ಸ್ವಲ್ಪವಾದರೂ ಹಸಿವೆಯಿತ್ತೇ; ಗೆಳೆಯನ ಮನಸ್ಸನ್ನು ನೋಯಿಸಬಾರದೆಂದು ಬಂದೆ."

"ಅದಕ್ಕಾಗಿ ಏನು, ನಮಗಿಂತ ಇಮ್ಮಡಿ ತಿನ್ನುತ್ತಿರುವುದು?"— ಎರಡನೆಯವನೆಂದನು.

"ಇನ್ನು ತಿರುಗಿ ಅವನು ನಮಗೆ ತಿಂಡಿ ಕೊಡುವುದಿದೆಯೇ? ಅವನ ಸ್ನೇಹದ ಋಣವನ್ನು ಹೇಗೆ ಸಲ್ಲಿಸಬೇಕು?"

ಅಷ್ಟರಲ್ಲಿ ಮೂರನೆಯ ಮಂಡೆಯೊಂದು— "ಆಹುದೇ, ರಾಮು ಸಂಗೀತದ ವಿಚಾರ ಮರತೆಯಲ್ಲ. ಇಲ್ಲೇ ಒಂದು ಹಾಡಿನ ಬುರುಡೆಯಿದೆ . . . . "— ಅಂದಿತು. ವೀರೇಶಗೆ ತನ್ನ ಎಲ್ಲ ಗುಟ್ಟು ರಟ್ಟಾಗುವುದೋ ಎಂದು ಭೀತಿಯಾಯಿತು.

ಅದೇ ತರುಣನು ತಿರುಗಿ—"ವೀರೇಶಾ, ಅಂತು ಇಷ್ಟೆಲ್ಲಾ ಮಾಡಿ ಸಂಗೀತವಿಲ್ಲದಿದ್ದರೆ ಶೋಭೆಯಿಲ್ಲ. ಈ ವಿಚಾರದಲ್ಲಿ ನನ್ನ ರಾಮುವಿನೊಂದಿಗೆ ನನ್ನ ಮತ. ಏನು? ಇವಳನ್ನು ಕರೆದರೆ ಬರಲಾರಳೇ? ಕೋಣೆಯ ಒಳಗೊಳಗೇ ಕುಳಿತು ಗೊಣಗುಟ್ಟುತ್ತಿರುವಳಲ್ಲ; ಏಕಂತೆ? ಬಂದರೆ ಇಷ್ಟು ನಾಚುಮಾಡಲಿ. ಆಗಬಾರದೇ ರಾಮು" ಎಂದನು.

ರಾಮು:— ಬೇಷಪ್ಪಾ ನಿನ್ನ ತಲೆ! ಒಳಗೆ ಮಿದುಳಿಲ್ಲದಿದ್ದರೂ ಎಂತಹ ಉತ್ತಮ ಸಲಹೆಯನ್ನಿತ್ತೆ. ವೀರೇಶ, ಹೋಗಿ ಕೇಳಬಾರದೇನು?

ವೀರೇಶನ ಎದೆ ಬಡಬಡ ಬಡಿಯುತ್ತೊಡಗಿತು. ಅವನಿಗವನದೇ ಅಂಜಿಕೆ. ವೀರೇಶನು ತನಗವಳ ಪರಿಚಯುವಿಲ್ಲವೆಂಬಂತೆ ನಟಿಸಿ—"ಏನು ಹುಚ್ಚೋ ನಿನಗೆ; ಯಾರನ್ನು ಕೇಳುವುದಂತೆ?" ಎಂದನು.

ರಾಮು:-ಯಾರನ್ನೆಂದರೆ. . . ಅವಳ ಹೆಸರೇನು? ಮಾಲತಿಯೊ ಪೀಲತಿಯೋ? ಅವಳನ್ನು. ಇಲ್ಲಿಯೇ ವಾಸಿಸುತ್ತಿರುವೆ. ಅವಳ ಗುರುತಿಲ್ಲವೇ ನಿನಗೆ. ನಾನಾ ದರೆ ಇಷ್ಟರಲ್ಲಿ ವೋಸ್ಟ್ ಇಂಟಿಮೆಟ್ ಆಗಿಬಿಡುತ್ತಿದ್ದೆ. ನಡಿ ನಡಿ, ಹೋಗಿ ವಿಚಾರಿಸಿ ಬಾ.

ವೀರೇಶ:—ನನ್ನಿಂದಾಗದು.

ರಾಮು:—ಆಗದಿದ್ದರೆ ನಾನಿರುವೆ.

ಗೆಳೆಯನೊಬ್ಬ:—ಬೇಷ್ ರಾಮು. ಪ್ರತಾಪ ವೆಂದರೆ ಹಾಗಿರಬೇಕು. ಸುಮ್ಮನೆ ವೀರೇಶನಂತೆ ಗಂಡು ಸುತನವಿಲ್ಲದಿದ್ದರೆ ಉಪಯೋಗವಿದೆಯೇ? ನಡಿಯಪ್ಪಾ ಮಗೂ . . . . ನಿನ್ನಿಂದ ನಮ್ಮ ಕಿವಿ ತಂಣಗಾಗಲಿ.

ರಾಮು:—ಅದಕ್ಕಡ್ಡಿಯಿಲ್ಲ; ಆದರೆ ಅವಳ ಕೈ ಬಿಸಿ ಮಾಡುವವರಾರು?

ಮೂರನೆ:—ಯಾರೆಂದರೆ? ನಮಗಿಲ್ಲಿಯ ತನಕ ಬರಲು ಆಗ್ರಹ ಪಡಿಸಿದ ವೀರೇಶನು. ಏನು, ಹತ್ತು ರೂಪಾಯಿ ಕೇಳಬಹುದು. ಅವನಿಗೆ ಕೊಡಲೇನು ಸಂಕಟ? ನಾಳೆ ನಾವವನ ಮನೆಗೆ ಬರುತ್ತೇವೆಯೇ?

ರಾಮು:-ಕೇಳಿದೆಯೋ ವೀರೇಶ. ಏನು? ನೀನು ಕಾ ಸು ಬಿಚ್ಚುವೆಯಾದರೆ, ನಾನು ಕರೆದುಕೊಂಡು ಬರುವೆ.

ವೀರೇಶನಿಗೆ ಹೂಂ ಎನ್ನಲೂ ಬಾರದು; ಸುಮ್ಮನಿರಲೂ ಬಾರದು.

ವೀರೇಶ:— ಸುಮ್ಮನೆ ಇಲ್ಲದ ರಗಳೆ ಬೇಡ.

ರಾಮು:— ಹೋಗಲಿ ಬಿಡು, ನೀನು ಕೊಡದಿದ್ದರೆ ನಾವಿಲ್ಲಿ ನಾಲ್ವತ್ತು ಮಂದಿ ಇದ್ದೇವೆ. ಒಬ್ಬೊಬ್ಬರು ನಾಲ್ಕಾಣೆ ಕೊಟ್ಟರೆ ಹತ್ತು ರೂಪಾಯಿಗಳಾಗುವುವು; ಬೇಕಾದರೆ ಈ ಟೀಪಾರ್ಟಿ ಸಹ ನಮ್ಮ ಖರ್ಚಿನಿಂದಲೇ ಆಗಲಿ. ಏನು ಗೆಳೆಯರೇ? ಇಂದಿನ ಸನ್ಮಾನವು ನಮ್ಮದೇ "ಸೆಂಡಾಫ್" ಆಗಲಿ.

ವೀರೇಶ:— ನಿನ್ನ ಮನೆ ಹಾಳಾಯಿತು. ಇಕೋ ತೆಗೆದುಕೋ; ಹತ್ತು ರೂಪಾಯಿಗಳನ್ನು.

ರಾಮು:— ನೀನು ಕೊಡದೆ ಇದ್ದರೆ ನಿನ್ನಪ್ಪ ಕೊಡುತ್ತಾನೆ. ಇರಲಿ; ನಮ್ಮ ವೀರೇಶನೆಂದರೆ ದಾನದಲ್ಲಿ ಕರ್ಣ; ಭೋಗದಲ್ಲಿ ಇಂದ್ರ . . . . (ತೆರಳುವನು.)

ವೀರೇಶನಿಗೆ ಇವನಿಷ್ಟೆಲ್ಲಾ ಮಾತುಗಳನ್ನು ತನ್ನ ಸಲುವಾಗಿ ಉದ್ದೇಶಪೂರಿತವಾಗಿಯೇ ನುಡಿಯುತ್ತಿರುವನೋ ಎಂದು ತೋರಿತು. ಇನ್ನು ಮಾಲತಿಯು ಬಂದರೆ ಏನು ಅನರ್ಥವಾಗುವುದೋ ಎಂದು ಅಂಜಿಕೊಂಡನು.

ರಾಮುವಿನ ಸವಾರಿಯು ವೀರನಂತ ಮಾಲತಿಯ ಕೊಟಡಿಯನ್ನು ಪ್ರವೇಶಿಸಿತು. ಮಾಲತಿಯು ಕುಳಿತಿದ್ದಳು. ಆವಳಲ್ಲಿ ಮೃದು ನುಡಿಗಳಿಂದ ತನ್ನ ವಿನಂತಿಯನ್ನು ಮಾಡಿಕೊಂಡನು. "ನಾನು ಬರುವುದಿಲ್ಲ"

ಎಂದು ಉತ್ತರವಿತ್ತಳು. ರಾಮುವಿನ ಮೋರೆಗೆ ಮಸಿ ಬಳೆದಂತಾಯಿತು. ಅವನು ಉಪಾಯ ಕಾಣದೆ ಮರಳಿ ಬಂದು—"ಅವಳ ಕಂಠ ಬಿದ್ದಿದೆಯಂತೆ" ಎಂದನು. ಎಲ್ಲರೂ ನಕ್ಕರು. ಆದರಲ್ಲೊಬ್ಬನು ಎದ್ದು ನಿಂತು, "ತೀರ ಸುಳ್ಳು, ನಾನಾಗಷ್ಟೆ ಅವಳ ಹಾಡನ್ನು ಕೇಳಿದ್ದೆ. ನಿನ್ನಿಂದಾಗಲಿಲ್ಲ ಎನ್ನು"—ಎಂದನು ರಾಮುವೂ ನಕ್ಕುಬಿಟ್ಟನು. "ಅಹುದಪ್ಪ ಅಹುದು. ಅವಳು ಭಾರಿ ಗವಯಿ. ನಮ್ಮಂಥ ಹುಡುಗರ ಮುಂದೆ ಹಾಡುವಳೇ. ಮಹಾರಾಜರ ಮುಂದೋ ಯುವರಾಜರ ಮುಂದೋ, ಆಸ್ಥಾನದಲ್ಲೋ, ಅರಮನೆಯಲ್ಲೋ, ತೆರೆಯುವ ಬಾಯಿ ಅದು. ನಮ್ಮಂಥ ದುಡ್ಡುದುಗ್ಗಾಣಿಯ ಜನರೆದುರಿಗೆ ಹಾಡುವುದುಂಟೇ"—ಅಂದನು.

ಸೂರನೆ:— ನೀನು ಪ್ರಾಯಶಃ ಹಣಕೊಡುವವನಲ್ಲವೆಂದೋ, ಅಥವಾ ಚೇಷ್ಟೆ ಮಾಡುವವನೆಂದೋ ಅವಳು ಬರುವುದಿಲ್ಲವೆಂದಿರಬೇಕು. ಕೊಡು ಇಲ್ಲಿ, ಆ ರೂಪಾಯಿಗಳನ್ನು. ನಾನವಳನ್ನು ಕರೆದುಕೊಂಡು ಬಾರದಿದ್ದರೆ ಮೀಸೆ ತೆಗೆಯುತ್ತೇನೆ. ಎಂದು ತೀರ ಪರಾಕ್ರಮದಿಂದ ರಾಮುವಿನಿಂದ ಹಣವನ್ನು ಕಿತ್ತುಕೊಂಡು ತಾನೇ ಮಾಲತಿಯ ಕೊಟಡಿಯ ಕಡೆಗೆ ಸಾಗಿದನು. ಒಮ್ಮೆ ನೋಡಿದರೆ, ಅವನಿಗೆ ಮೀಸೆ ಮೊದಲೇ ಇಲ್ಲ; ಆದುದರಿಂದಷ್ಟು ಧೈರ್ಯ. ಹೋದವನು ದಯಾದಾಕ್ಷಿಣ್ಯವಿಲ್ಲದೆ ಅವಳ ಮುಂದೆ ಹೋಗಿ ಹತ್ತು ರೂಪಾಯಿಗಳ ನೋಟನ್ನೆಸೆದನು. ಆವಳು ಕದಲಲಿಲ್ಲ.

"ಇನ್ನು ನಿನ್ನ ಹಾಡನ್ನು ಕೇಳಿ ಹೆಚ್ಚಿನ ಇನಾಮನ್ನು ಕೊಡುವಾ, ಬಾ ಬಾ, ಬೇಗ" ಎಂದನು. ಮಾಲತಿಗೆ ನಗು ಬಂತು. ಅವಳು ಆ ಹಣವನ್ನು ಆವನ ಕಡೆಗೆ ಎಸೆದು—"ಹೂಂ ನಡಿಯಿರಿ" ಎಂದಳು. ಆಸಾಮಿಯು ಹಿಗ್ಗಿನಿಂದ ಓಡಿ ಬಂದು ಸುವಾರ್ತೆಯನ್ನು ತಿಳಿಸಿದನು. ಎಲ್ಲರೂ ಉಪಾಹಾರವನ್ನು ಬೇಗ ಬೇಗನೆ ಮುಗಿಸಿ ಸಂಗೀತ ಕೇಳಲು ಸಜ್ಜಾಗಿ ಕುಳಿತರು. ಆದರೆ ಮಾಲತಿಯು ಇನ್ನೂ ಬಾರಳು. ತಿರುಗಿ ನಮ್ಮ ಭೂಪನು ಆವಳಿರುವಲ್ಲಿಗೆ ಹೋದನು. ಆಗ ಮಾಲತಿಯು ಒಳಗಿಂದ ಅಗಳಿಯನ್ನಿಕ್ಕಿ ಕದವನ್ನಿಕ್ಕಿಕೊಂಡಿದ್ದಳು. ಬಾಗಿಲು ತಟ್ಟದರೆ—"ನೀವು ಹೋಗುವಿರೋ ಇಲ್ಲವೋ, ನಾನು ಬರುವವಳಲ್ಲ" ಎಂದಳು. ಮಿಕ್ಕವರು ಮಾಲತಿಯ ಆಗಮನವನ್ನು, ಹಿಂದಿನ ಕವಿಗಳು ಹೇಳುವಂತೆ, ಚಾತಕ ಪಕ್ಷಿಯು ಮಳೆಯನ್ನಿದಿರು ಕಾಯುವಂತೆ, ನಿರೀಕ್ಷಿಸುತ್ತಿದ್ದರು. ಒಂದು ತಾಸೇ ಸಂದಿತು. ನಮ್ಮ ಆಸಾಮಿಯು ಮರಳಿ ಬರಲು ನಾಚಿಕೆಗೊಂಡು ಪರಾರಿಯಾದನು. ರಾಮುವು ತಿರುಗಿ ಮುಂದಾದನು. ಅಲ್ಲಿಯ ತನಕ ಹೋಗಿ—"ಅವಳು ಬರುವಂತಿಲ್ಲ" ಎಂಬ ಹೃದಯಬೇಧಕ ವಾರ್ತೆಯನ್ನು ತನ್ನ ಗೆಳೆಯರಿಗೆ ತಿಳಿಸಿದನು. ವೀರೇಶನಿಗೆ ಹೋದ ಪ್ರಾಣವೇ ಬಂದಿತು. ಅಂದು ರಾತ್ರಿ ಅವರೆಲ್ಲ ವೀರೇಶನನ್ನು ಬೀಳ್ಕೊಡುವ ಸಲುವಾಗಿ ರೈಲ್ವೆ ನಿಲ್ದಾಣದಲ್ಲಿ ಸರಿ ಹತ್ತು ಘಂಟೆಗೆ ಸೇರುವುದೆಂದಾಯಿತು. ವೀರೇಶನು—"ಸುಮ್ಮನೆ

ನನಗಾಗಿ ನಿಮ್ಮ ಪಾಠಗಳನ್ನು ಕೆಡಿಸಿಕೊಳ್ಳಬೇಡಿರಿ” ಎಂದೆಷ್ಟು ಬಿನ್ನೈಸಿಕೊಂಡರೂ ಅವರು ಕೇಳರು. ವೀರೇಶನಂಥ ಗೆಳೆಯನು ವಿದ್ಯೆಯನ್ನು ಬಿಟ್ಟು ಅವರನ್ನ ಗಲುವ ಗಳಿಗೆಯಲ್ಲಿ ಅವರು ಅವನನ್ನು ಸನ್ಮಾನದಿಂದ ಬೀಳ್ಕೊಡಬೇಡವೇ? ಆ ಮೂಲಕವಾದರೂ ಆ ದಿನದ ಉಪಹಾರದ ಋಣವನ್ನು ತೀರಿಸಬೇಡವೇ?

ಅವನು ತನ್ನ ಗಂಟುಗಳನ್ನೆಲ್ಲಾ ಸಿದ್ಧಪಡಿಸಿಕೊಂಡನು. ಮಾಲತಿಗೂ ಹಾಗೆಯೇ ಅಣಿಯಾಗಿರಲು ಹೇಳಿದನು. ಮಾಲತಿಯು ಸಂಜೆ ಏಳು ಘಂಟೆಗೇನೆ ಹೋಟೇಲು ಮಾಲಿಕರೊಡನೆ ತಾನು ಸಿನೇಮಾಕ್ಕೆ ಹೋಗಿಬರುವೆನೆಂದು ನೆಪಹೇಳಿ ಹೊರಟಳು. ವೀರೇಶನು ಅವಳ ಸಾಮಾನುಗಳನ್ನೂ ತನ್ನವೆಂದೇ ಸಾಗಿಸಿಕೊಂಡು ಹೊರಟು ಮುಂಚಿತವಾಗಿ ರೈಲ್ವೆ ನಿಲ್ದಾಣವನ್ನು ಸೇರಿ ಎರಡನೇ ತರಗತಿಯ ವಿಶ್ರಾಂತಿ ಮಂದಿರದಲ್ಲಿ ಕುಳಿತನು. ಮಾಲತಿಯು ಸ್ತ್ರೀಯರ ಕೊಟಡಿಯಲ್ಲಿ ಒಬ್ಬಳೇ ಕುಳಿತಳು. ಅವಳನ್ನು ಸಾಮಾನಿನೊಂದಿಗೆ, ಚಾಮರಾಜನಗರದಿಂದ ಬಂಡಿಯು ಬಂದೊಡನೆಯೇ, ವ್ಯವಸ್ಥೆಯಿಂದ ಕುಳ್ಳಿರಿಸಬೇಕೆಂದು ಒಬ್ಬ ರೈಲ್ವೆ ನೌಕರನಿಗೆ ತಿಳಿಸಿ ತಾನು ಅತ್ತಿತ್ತ ಜಗುಲಿಯಲ್ಲಿ ಅಡ್ಡಾಡತೊಡಗಿದನು. ಸರಿ ಒಂಭತ್ತಕ್ಕೆ ಅವನ ಗೆಳೆಯರು ಅಲ್ಲಿ ಕಲೆತರು. ಸರಿ. ಒಂಭತ್ತರಿಂದ ಹತ್ತು ಘಂಟೆಯ ತನಕ ಅವರು ಸಮಯವನ್ನು ಕಳೆಯಬೇಕಾಗಿದೆ. ಆ ಮಾತು ಈ ಮಾತುಗಳೆಂದು ವೇಳೆಯು ಸಂದಿತು.

ಒಂಡಿಯೂ ಬಂದಿತು. ಅವನ ಗೆಳೆಯರೆಲ್ಲರು ಸೇರಿ ಅವನಿಗೆ ಮಾಲೆಯನ್ನು ಹಾಕಿದರು. ಒಬ್ಬೊಬ್ಬರೊಡನೆ ಪಾಣಿಗ್ರಹಣವಾಯಿತು. ಬಂಡಿಯನ್ನೇರಿದನು. ಗೆಳೆಯರ "ಹಿಪ್ ಹಿಪ್ ಹುರ್ರಾ" ಜಯಘೋಷವಾಯಿತು. ಗೆಳೆಯರು ಅವನನ್ನು ಕಾಣುತ್ತ ನಿಂತರು. ಸಿಳ್ಳಾಗಿ ಬಂಡಿಯು ಹೊರಟಿತು. ರಾಮುವು ಬಂಡಿಯನ್ನು ಹಿಡಿದು ಪತ್ತು ಹೆಜ್ಜೆ ಓಡಿದನು. ಅವನು ಬಂದುದನ್ನು ಕಂಡು, ವೀರೇಶನು—"ಏನು, ಏನು?" ಎಂದು ಕೇಳಿದನು. ರಾಮುವು ಅವನ ಕಿವಿಯಲ್ಲಿ—"ಪಕ್ಕಾ ಕಳ್ಳನೋ ನೀನು" ಎಂದನು. ಸರಿ; ರಾಮುವು ಕೆಳಕ್ಕಿಳಿದನು. ರಾಮುವಿನ ತಿಳುವಳಿಕೆಯಲ್ಲಿ ವೀರೇಶನೆಂದರೆ ಬಾಯಿಬಾರದ ಮಗು ಎಂದಿತ್ತು. ಆದರೆ ಅವನು ಕುಳಿತ ಬಂಡಿಯಲ್ಲಿ ಮಾಲತಿಯಿದ್ದುದನ್ನು ಕಂಡು ಅವನಿಗೆ ಸಂಶಯವಾಯಿತು. ಇದೆಲ್ಲ ತನ್ನ ಬಾಯಿಬಾರದ ಮಗುವಿನದೇ ಜಾಣತನವೆಂದು ಹೊಳೆದು ಅವನು ವೀರೇಶನಿಗೆ ಆ ಪ್ರಶಂಸೆಯನ್ನು ಅರ್ಪಿಸಿದುದು.

ಸುಮಾರು ಎರಡು ತಾಸಿನ ವರೆಗೆ ವೀರೇಶನ ತಲೆ ತಿರುಗುತ್ತಿತ್ತು. ಎಲ್ಲಾದರೂ ರಾಮುವಿನ ದೆಸೆಯಿಂದ ತನ್ನ ಬಂಣ ಬಯಲಾಗುವುದೋ ಎಂದು. ಆದರೆ ರಾಮುವು ಆ ವಿಚಾರದಲ್ಲಿ ಅಷ್ಟು ಉದ್ಧಟನಾಗಲಾರನು. ಅವನಿಗೆ ತಿಳಿದ ಗುಟ್ಟುಗಳೆಂದರೆ ಕಬ್ಬಿಣದ ಪೆಟ್ಟಿಗೆಗಳಲ್ಲಿರಿಸಿದ ಹಣದಂತೆ. ಅಷ್ಟೇ ಅಲ್ಲ, ಎಲ್ಲಾ

ದರೂ ಬೆಂಗಳೂರಿಗೆ ಹೋದರೆ, ಅವನಾದರೂ ತನ್ನ ಗೆಳೆಯನ ಗೆಳತಿಯ ದರುಶನ ಮಾಡಿಕೊಂಡು ಬರಬಹುದಲ್ಲವೇ? ಮರುದಿನದಿಂದ ಮುಂಬಯಿ ಹೋಟೇಲಿನ ನಿವಾಸಿಗಳ ಉತ್ಸಾಹವೆಲ್ಲ ಕಂದಿತು. ಅಲ್ಲಿ ನಿವಾಸಕ್ಕಿದ್ದ ಪ್ರೌಢ ತರುಣರಿಗಂತು "ಗಿಣಿಯು ಪಂಜರದೊಳಗಿಲ್ಲ"ದಾದುದನ್ನು ಕಂಡು ತುಂಬಾ ನಿರಾಶೆಯಾಯಿತು. ಒಂದು ತಿಂಗಳ ವರೆಗೆ ಅವರು ಈ ವಿದ್ಯುತ್ ಘಾತದಿಂದ ಸ್ವಸ್ಥರಾಗಲಿಲ್ಲ.

ಇತ್ತ ರೈಲುಬಂಡಿಯು ಮದ್ದೂರನ್ನು ಸೇರುವ ತನಕ ವೀರೇಶನ ಯೋಚನೆಗಳು ನಡೆಯುತ್ತಲೇ ಇದ್ದುವು. ಮಾಲತಿಯನ್ನು ಬೆಂಗಳೂರಿಗೆ ಒಯ್ದ ಬಳಿಕ ಎಲ್ಲಿ ಕರೆದೊಯ್ಯಬೇಕು? ಮನೆಯವರಿಗೆ ತಿಳಿಯದಂತೆ ಅವಳಿಗೊಂದು ನಿವಾಸವನ್ನು ನಿಶ್ಚಯ ಮಾಡುವುದು ಹೇಗೆ ಎಂದೆಲ್ಲಾ ಯೋಚಿಸತೊಡಗಿದನು. ಹಾಗೇ ಏನೋ ಏನೋ ನಿಶ್ಚಯಗಳು ನಡೆಯಲು ಮದ್ದೂರು ಬಂದಿತು. ಮದ್ದೂರಿನಲ್ಲಿ ಉಗಿಬಂಡಿಗೂ ಸಹ ನಿದ್ರೆ ಬರುವ ರೂಢಿಯಿದೆ; ಹೀಗಿರಲು ಪ್ರಯಾಣಿಕರ ಅವಸ್ಥೆಯೇನು?

ವೀರೇಶನು ಆ ನಿಶ್ಶಬ್ದದಲ್ಲಿ ಬಂಡಿಯಿಂದಿಳಿದನು. ಅವನ ಕಿವಿಗೆ—"ಕ್ಹಾಫೀ — ಕ್ಹಾಫೀ . . . ." ಎಂಬ ಸದ್ದೊಂದಲ್ಲದೆ ಇನ್ನೇನೂ ಕೇಳಿಸುತ್ತಿದ್ದಿಲ್ಲ. ಕೊಳ್ಳುವರಿಲ್ಲದೆ ಆ ಸದ್ದೂ ಅಡಗಿತು. ಅವನಾಗ ಮಾಲತಿಯನ್ನು ನೋಡಲು ಮುಂದರಿದನು. ಅವಳಾಗ ಎರ

ಡನೇ ತರಗತಿಯಲ್ಲಿ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದಳು. ಅವಳನ್ನೆಬ್ಬಿಸುವುದು ಯುಕ್ತವಲ್ಲೆಂದು ಅವಳ ಬಳಿಯಲ್ಲೆ ಒರಗಿ ಕುಳಿತನು. ಅವನಿಗೂ ಅದೇ ಬೇನೆ ಅಂಟಿತು. ಎಚ್ಚರವಾಗುವಾಗ "ಬೆಂಗಳೂರು."

## ೧೧. ವೀರೇಶನ ಮದುವೆಗೆ.

ಮಾಲತಿಯು ಈಗ ಮಲ್ಲೇಶ್ವರದಲ್ಲಿ ಚಿಕ್ಕದೊಂದು 'ಹವಾಮಹಲಿ'ನಲ್ಲಿ ವಾಸಮಾಡುತ್ತಿರುವಳು. ಅದು ಅವಳ ನೂತನ ಮನೆಯ ಹೆಸರು. ಮನೆಯ ಸುತ್ತ ಚಿಕ್ಕದೊಂದು ಹೂದೋಟ. ಮನೆಯ ಕೆಲಸಕ್ಕೆ ಜನರು. ಅವಳೀಗ ಅಡುಗೆಮಾಡಬೇಕೆಂದಿಲ್ಲ. ಬಟ್ಟೆ ಒಗೆಯಬೇಕೆಂದಿಲ್ಲ. ತನ್ನ ಮನೆಯಲ್ಲಿ ಚಿಕ್ಕವಳಿರುವಾಗ ಹೇಗಿದ್ದಳೋ ಅದಕ್ಕೂ ಹೆಚ್ಚೆನಿಸಿದ ಶರೀರ ಸುಖವಿದೆ. ಮನೆಯ ಒಳಗೂ ಸುಸಜ್ಜಿತವಾಗಿ ಇತ್ತು. ಅವಳಿಗಿಂದು ಉಡಿಗೆ ತೊಡಿಗೆಗಳಿಗೆ ಬರಗಾಲವಿಲ್ಲ. ಬೇಸರವಾದರೆ ಮೋಟಾರುಕಾರು ಬಾಡಿಗೆಮಾಡಿಕೊಂಡು ತಿರುಗಾಡಿ ಬರುವಳು. ಬೇಕೆಂದು ತೋರಿದರೆ ಸಿನೆಮಾಕ್ಕೆ ಹೋಗಿ ತೀರ ಹಿಂದಿನ ಕುರ್ಚಿಯ ಮೇಲೆ ಕುಳಿತುಕೊಳ್ಳುವಳು. ಅವಳ ದೇಹಾರೋಗ್ಯವೂ ಸ್ವಲ್ಪ ಸುಧಾರಿಸಿದೆ. ಒಡಕು ಕನ್ನಡಿಯು ಪೂರ್ಣವಾಗಲಾರದಾದರೂ ಒಡಕನ್ನು ಕೂಡಿಸಿಡಲು ಬರುವುದಷ್ಟೆ. ಅಂತೆಯೇ ಅವಳೀಗ ವೈದ್ಯಕೀಯ ಚಿಕಿತ್ಸೆಯಿಂದ ಸ್ವಲ್ಪಮಟ್ಟಿಗೆ ಬೇನೆಯ ಪೀಡೆಗಳಿಂದ

ದೂರಾಗಿರುವಳು. ಮೊದಲವಳ ಬಳಿಯಲ್ಲಿ ಚಿಕಿತ್ಸೆಗೆ ಕಾಸು ಸಹ ಇದ್ದಿರಲಿಲ್ಲ. ಈಗ ಹಾಗಲ್ಲ; ಸಾವಿರ ರೂಪಾಯಿಗಳನ್ನೂ ವ್ಯಯಿಸಬಲ್ಲಳು. ಆದರೆ ಮೊದಲಿನಿಂದವಳಿಗೆ ಹಣದ ಆಸೆಯಿಲ್ಲ. ವೀರೇಶನು ನಿತ್ಯ ಸಾಯಂಕಾಲ ಅವಳಲ್ಲಿಗೆ ಬರುವನು, ರಾತ್ರಿ ಒಂಭತ್ತು ಘಂಟೆಯ ತನಕ ಇದ್ದು ತನ್ನ ಮನೆಗೆ ಹೋಗುವನು. ಅವನೀಗ ತಂದೆಯ ಭಾರಿ ವಹಿವಾಟನ್ನು ನಡೆಯಿಸುತ್ತಿರುವನು. ಹಣದ ಗಣನೆಯಿಲ್ಲ. ಮಗನು ಏನುಮಾಡಿದರೂ ತಂದೆ ಮಾತನಾಡುವುದಿಲ್ಲ. ಇದ್ದೊಬ್ಬ ಮಗನು ಖರ್ಚುಮಾಡದೆ ಇನ್ನಾರು ವ್ಯಯಿಸಬೇಕು? ಆದರಿಂದ ದಿನದಿನಸಕ್ಕೆ ಹೊಸ ಒಡವೆಗಳು ಮಾಲತಿಯ ಮನೆಗೆ ಬರುವುವು. ಅವಳು ಪ ತಿಯೊಂದನ್ನೂ ನಿರಾಕರಿಸುವಳು; ಕೊನೆಗೆ ವೀರೇಶನ ಸಲುವಾಗಿ ಧರಿಸುವಳು. ಈ ಬಡಪಾಯಿಯನ್ನು ಕಂಡು, ಅವಳಿಗೆ ಪ್ರೇಮಕ್ಕಿಂತಧಿಕವಾಗಿ ಕರುಣೆಯುಂಟಾಗಿದೆ. ಅವಳೂ ಮೆಲ್ಲನೆ ಅವನನ್ನು ಪ್ರೀತಿಸದೆ ಇರದಾದಳು. ಆದರೆ ಮನಸ್ಸಿನಿಂದ ಪ್ರಫುಲ್ಲನ ನೆನಪು ಅಳಿದುಹೋಗಲಿಲ್ಲ. ಅವನ ನೆನಪಾದರೆ, ವೀರೇಶನನ್ನು ಪ್ರೀತಿಸುವುದು ತನ್ನ ನಡತೆಗೆ ವಿಹಿತವೇ ಎಂಬ ಸಂಶಯವುಂಟಾಗುವುದು. ಕೊನೆಗೆ, ವೇಶ್ಯೆಯಾದವಳು ತನ್ನ ಅನ್ನದಾತನಿಗೆ, ಅದರಲ್ಲೂ ವೀರೇಶನಂಥ ಉದಾರಿಗೆ ಕೃತಜ್ಞತೆಯನ್ನು ತೋರಬೇಡವೇ? ಅವನು ಇವಳನ್ನು ಭ್ರಾಂತನಂತೆ ಪ್ರೀತಿಸುತ್ತಿರಲು ಇವಳು ಕೇವಲ ವ್ಯಾಪಾರಿದೃಷ್ಟಿ

ಯಿಂದ ವರ್ತಿಸುತ್ತಿರಬೇಕೇ? ಇದುವರೆಗೆ ತನ್ನ ವಿಟರಿಗೆ ತೋರಿದಂತೆ ಕೃತಕ ಪ್ರೇಮವನ್ನು ತೋರಿಸಬೇಕೇ? ಅದು ಅವಳ ಸಹಜ ನಡೆತೆಗೆ ಸರಿಕಾಣದ್ದಾಯಿತು. ಅವಳವನನ್ನು ನಿಜವಾಗಿಯೂ ತನ್ನವನನ್ನಾಗಿ ತಿಳಿಯತೊಡಗಿದಳು.

ವೀರೇಶನು ಬಂದರೆ ಎಷ್ಟು ಬಗೆಗಳಿಂದ ಅವನನ್ನು ಪಚರಿಸುವುದು ಶಕ್ಯವೋ ಅಷ್ಟೊಂದು ಬಗೆಗಳನ್ನು ಅನುಸರಿಸುವಳು. ಅವನಿಗೆ ಅಲ್ಲಿಗೆ ಬಂದರೆ ಮರಳುವ ಇಚ್ಛೆಯೇ ಇರುವುದಿಲ್ಲ. ಅವಳೇ 'ಒಂಭತ್ತು ಘಂಟೆಯಾಯಿತು; ಮನೆಗೆ ಹೋಗಿರಿ. ತಂದೆತಾಯಿಗಳು ಬೈದಾರು'—ಎನ್ನುವಳು. "ಅವರೇನೂ ಮಾಡಲಿ" ಎಂದಿವನ ಉತ್ತರ. ಆಗವಳಿಗೆ ವ್ಯಥೆಯಾಗುವದು. ತನ್ನ ದೆಸೆಯಿಂದ ಆ ಮುದುಕರ ಮನಸ್ಸು ನೋಯುವುದಾಗಲಿ, ಅವರ ಮನಸ್ಸನ್ನು ಉದ್ಧಟ ನುಡಿಯಿಂದ ವೀರೇಶನು ತಿರಸ್ಕರಿಸುವುದಾಗಲೀ ಅವಳಿಗೆ ಸರಿಯೆನಿಸದು. ಅವಳು ನಾನಾ ಬಗೆಯಿಂದ ವೀರೇಶನಿಗೆ ಹೇಳಿನೋಡುವಳು. ಕೊನೆಗೆ ಅವನು ಹಟಮಾರಿಯಾದರೆ ತಾನು ಸಿಟ್ಟಾದವಳಂತೆ ನಟಿಸುವಳು. ಅದು ಶಕ್ಯ ಕೆಲಸವನ್ನು ಮಾಡಿಸುವುದು.

ಇದೇ ರೀತಿಯಲ್ಲಿ ಐದಾರು ತಿಂಗಳುಗಳು ಕಳೆದುವು. ಒಂದುದಿನ ಸಂಜೆ ವೀರೇಶನು ಮಾಲತಿಯಲ್ಲಿಗೆ ಬಂದವನು ತಾಸು ೧೦ ಬಾರಿಸಿದರೂ ಹೋಗಲಾರನು. ಮಾಲತಿಯು ಬೈದು ನೋಡಿ

ಯಾಯಿತು. "ನೀನು ಹೀಗೇಕೆ ಮಾಡುವೆ" ಎಂದು ಕೇಳಿದಳು.

"ನಾನಿಂದು ಹೋಗುವುದಿಲ್ಲ. ಮನೆಯಲ್ಲಿ ಹಾಗೆಯೇ ಹೇಳಿಬಂದಿರುವೆ."

"ಹಾಗೆಯೇ ಅಂದರೆ — ?"

"ಗೆಳೆಯರ ಮನೆಗೆ ಹೋಗುವೆನೆಂದೂ ರಾತ್ರಿ ಬರುವುದಿಲ್ಲೆಂದೂ . . ."

"ನಾಳೆ ಹೇಗೆ ಹೇಳುವುದೇ ಹವ್ಯಾಸವಾದರೆ . . ."

"ಆಗಲಿ — "

"ಅಂದರೆ ನಿಮ್ಮ ತಂದೆತಾಯಿಗಳನ್ನು ದುಃಖಕ್ಕೀಡುಮಾಡಿದ ಪಾಪಕ್ಕೆ ನಾನು ಭಾಗಿಯಾಗಬೇಕೇ? ಇದೊಂದೇ ದಿನವಾದರೆ ನಿಮ್ಮ ಮಾತನ್ನು ಕೇಳುವೆ. ಅಲ್ಲದೆ ನಿತ್ಯವೂ ಹೀಗಾಗುವುದಾದರೆ ನಾನು ಈ ಸ್ಥಳವನ್ನು ಬಿಡಲೇ ಬೇಕಾಗುವುದು."

ವೀರೇಶನು ಮೌನ ತಾಳಿದನು ಬಲು ಹೊತ್ತಿನ ತನಕ ಹಾಗೆಯೇ ಇದ್ದು ಕೊನೆಗೆ:—

"ಇಲ್ಲ, ಮಾಲತಿ ಇದೊಂದುದಿನ ಮಾತ್ರ ಹಾಗಿರುವೆ. ನಿನ್ನೊಡನೆ ಮಹತ್ವದ ವಿಚಾರವೊಂದನ್ನು ತರ್ಕಿಸಲಿರುವುದರಿಂದ ಈ ರೀತಿ ನಿರ್ಧಾರಮಾಡಿ ನಾನು ಬಂದೆ. ಅದನ್ನು ಹೇಳದೆ ಹೋಗಬೇಕೆನ್ನುವಿಯಾದರೆ ಹೋಗುವೆ."

"ಇಲ್ಲ, ನಾನೇನಷ್ಟು ನಿರ್ದಯಿಯಲ್ಲ. ಏನದು, ಅಂಥ ವಿಚಾರ? ನನ್ನೊಡನೆ ತರ್ಕಿಸತಕ್ಕುದು."

"ನಿನಗೂ ನನಗೂ ಸಂಬಂಧಿಸಿದ ಒಂದು ವಿಷಯು. ನೀನು ಕೇಳಿ ಸಿಟ್ಟಾಗುವುದಿಲ್ಲವಾದರೆ ಎಲ್ಲವನ್ನೂ ಒಂದೊಂದಾಗಿ ಹೇಳುವೆ. ಈ ವಿಷಯುದಲ್ಲಿ ನನಗೆ ಏನುಮಾಡುವುದೆಂದೇ ತೋರುವುದಿಲ್ಲ."

"ಯಾವ ವಿಷಯುದಲ್ಲಿ? ನನಗೇನೂ ಬೇಸರವಿಲ್ಲ. ನನ್ನ ಮನಸ್ಸಿಗೆ ತೋರಿದ ಸಲಹೆಯನ್ನು ನಾನೂ ಕೊಡುವೆನು. ಆದರೆ ನನ್ನ ಮಾತಿಗೊಂದು ಬೆಲೆ ಬರಬೇಕು. ಮೊದಲನೆಯದಾಗಿ, ನನ್ನನ್ನು ಯಾವ ವಿಷಯುದಲ್ಲಿ ಕೇಳುವ ಅಗತ್ಯವೂ ಇಲ್ಲ; ಒಮ್ಮೆ ಕೇಳಿದ ಬಳಿಕ ಅದು ಕೇಳಿ ಕೇಳದಂತಾಗಬಾರದು."

"ಇಲ್ಲ, ನಿನ್ನ ಅಭಿಮತದಂತೆ ವರ್ತಿಸುವುದೇ ನನ್ನ ಇಷ್ಟ."

"ಸರಿ ವಿಷಯುವೇನೆಂದು ತಿಳಿಸಿರಿ . . ."

"ಮಾಲತಿ, ನೀನು ನನ್ನೊಡನೆ ಸದಾ ತಂದೆತಾಯಿಗಳ ಮನಸ್ಸನ್ನು ನೋಯಿಸಬಾರದು ಎನ್ನುತ್ತಿರುವೆ . . ."

"ಅಹುದು? ಅದು ತಪ್ಪೇ."

"ನನ್ನ ಮಾತುಗಳನ್ನು ಪೂರ್ಣವಾಗಿ ಕೇಳು. ನಾನಿಂದು ಅವರನ್ನು ಮೀರುವ ಪ್ರಸಂಗ ಬಂದಿದೆ. ನನಗವರು ಮದುವೆಮಾಡಿಕೊಳ್ಳೆಂದು ಬಲವಂತ ಮಾಡುತ್ತಿರುವರು. ನನಗದು ಇಷ್ಟವಿಲ್ಲದಾಗಿದೆ. ಹುಡುಗಿಯ ಮನೆಯಿಂದ ತುಂಬಾ ಸಂಪತ್ತು ಸಿಗುವುದೂ

8*

ಉಂಟು. ಹುಡುಗಿಯ ಕಡೆಯವರಾದರೂ ಬಹಳ ವಾಗಿ ಬಲ್ಲವಂತ ಮಾಡುತ್ತಿರುವರು."

"ಹುಡುಗಿಯು ಚೆನ್ನಾಗಿರುವಳೇ?"

"ಸಾಮಾನ್ಯ ರೂಪಿದೆ; ಓದು ಬರಹ ಬಲ್ಲವಳು. ವಯಸ್ಸು ೧೬."

"ಹಾಗಾದರೆ—ಮಾಡಿಕೊಳ್ಳಬಾರದೇಕೆ?"

"ಆದರಲ್ಲಿ ಎರಡು ವಿಚಾರಗಳಿವೆ. ಮೊದಲನೆಯದು ನನ್ನ ಪ್ರೇಮವು ನಿನ್ನಲ್ಲಿ ನೆಲಸಿರಲು ಬೇರೆಯವಳನ್ನು ನಾನು ಪ್ರೀತಿಸಲು ಸಾಧ್ಯವಾಗದು. ಎರಡನೆಯದಾಗಿ ನಾಳೆ ನಿನಗೂ ಆದರಿಂದ ಬೇಸರವಾಗಬಹುದು."

"ನಾನು ಸ್ವಾರ್ಥಿಯಲ್ಲ. ಮುಖ್ಯವಾಗಿ ನೀನು ಯಾರ ನಿಷ್ಠುರಕ್ಕೂ ಗುರಿಯಾಗದೆ ಜೀವನ ನಡೆಯಿಸಬೇಕೆಂಬುದೇ ನನ್ನ ಮನಸ್ಸು."

"ನನ್ನ ಮೊದಲಿನ ಪ್ರಶ್ನೆಗುತ್ತರ?"

"ಅದಕ್ಕೇನು ಉತ್ತರವು ಬೇಕು? ನಿನಗೆ ನೂರಾರು ಗೆಳೆಯರಿಲ್ಲವೇ? ಅವರೆಲ್ಲರನ್ನು ನೀನು ಪ್ರೀತಿಸುವುದಿಲ್ಲವೇ? ಪ್ರೀತಿಸಬೇಕೆಂದು ನಿನಗೆ ಮನಸ್ಸಿದ್ದರೆ ಎಷ್ಟು ಜನರನ್ನೂ ಪ್ರೀತಿಸಬಹುದು. ಅಷ್ಟೇ ಅಲ್ಲ—ನನ್ನ ವಿಚಾರವು ನಿನ್ನ ಹಿರಿಯರಿಗೆ ತಿಳಿದಿಲ್ಲ. ನೀನು ವಿವಾಹಿತನಾಗದೆ ಹೋದರೆ ಅವರಿಗಾದರೂ ಸಂಶಯ ಬಂದೇ ಬರುವುದು. ಹಾಗೆ ಬಂದರೆ ಅವರು ವ್ಯಸನಕ್ಕೆ ಗುರಿಯಾಗುವರು. ಒಮ್ಮೆ ನನ್ನಿಂದ ನಿನಗೆ ನಿನ್ನ ವಿವಾಹಿತ ಪತ್ನಿಯನ್ನು ಪ್ರೀತಿಸುವುದು ಅಸಾಧ್ಯ

ವೆಂದು ಕೋರಿದರೆ, ಆಗ ನಾನೇ ನಿನ್ನ ಹಾದಿಯಿಂಪ . . . .”

“ಮಾಲತಿ, ಸಾಕು. ನನಗಾ ಉಪದೇಶವು ಬೇಕಿಲ್ಲ. ಅಷ್ಟಿದ್ದರೆ ನಿನ್ನೊಡನೆ ಈ ವಿಚಾರವನ್ನು ಪ್ರಸ್ತಾಪಿಸುವ ಆವಶ್ಯಕತೆಯೂ ಇರುತ್ತಿದ್ದಿಲ್ಲ.”

ಸರಿ. ಮಾಲತಿಯು ಅಂದು ತನ್ನ ಪ್ರಿಯತಮನನ್ನು ವಿವಾಹಕ್ಕಾಗಿ ಒಪ್ಪಿಸಿದಳು.

* * * * * *

ವಿವಾಹದ ಗಲಭೆಯಲ್ಲಿ ಕಲವು ದಿವಸಗಳ ತನಕ ವೀರೇಶನಿಗೆ ಮಾಲತಿಯ ಬಳಿಗೆ ಬರುವುದಕ್ಕೂ ಆಗಲಿಲ್ಲ. ಅವಳಾದರೂ ಅದಕ್ಕಾಗಿ ಬೇಸರ ಪಡಲಿಲ್ಲ. ಒಂದು ದಿನ ರಾತ್ರಿ ತಿರುಗಿ ಬಂದನು. “ಮಾಲತಿ, ವಿವಾಹವು ಬರುವ ಬುಧವಾರದ ದಿನವೆಂದು ನಿಶ್ಚಯವಾಗಿದೆ” ಎಂದನು.

ಮಾಲತಿಗೆ ಅತಿ ಆನಂದವಾಯಿತು; ತಾನೂ ಆ ವಿವಾಹವನ್ನು ಕಾಣಬೇಕು. ತನ್ನ ಧನಿಯು ವಿವಾಹೋತ್ಸವದಲ್ಲಿ ಭಾಗಿಯಾಗಬೇಕೆಂದು ಅವಳ ಅಂತರಂಗದ ಆಸೆ. ಆದರೆ ಅದು ಅನುಭವಕ್ಕೆ ಬರಬೇಕಾದರೆ ವೀರೇಶನ ರಹಸ್ಯವು ಬಯಲಾಗಿಯೇ ಆಗುವುದು. ಆದುದರಿಂದವಳು ಆವಿಚಾರದಲ್ಲೊಂದೂ ಮಾತನ್ನಾಡದೆ ಸುಮ್ಮನಾದಳು. ವೀರೇಶನಿಗಾದರೂ ಅವಳು ಬರಬೇಕೆಂದಿತ್ತು. ಆದರೆ ಒಯ್ಯುವ ಧೈರ್ಯ ವುಂಟಾಗಲಿಲ್ಲ. ಇನ್ನೊಂದು ದಿನ ಅವನು ಬಂದಾಗ-

"ಮಾಲತಿ ನನಗಾಗಿ ಒಂದು ಕೆಲಸವನ್ನು ಮಾಡುವೆ ಯಾ" ಎಂದು ಕೇಳಿದನು.

"ನಿನಗಾಗಿ ಸರಿಯೆಂದು ಕಂಡುದಾವುದನ್ನೂ ಮಾಡುವೆ" — ಎಂದಳು.

"ನನ್ನ ತಂದೆತಾಯಿಗಳಿಗೆ ಮದುವೆಯನ್ನು ವೈಭವದಿಂದ ನಡೆಯಿಸಬೇಕೆಂದು ಇಷ್ಟ. ಎಷ್ಟು ವ್ಯಯಿಸಿದರೂ ತೃಪ್ತಿಯಾಗದಂತೆ. ಅದೆಲ್ಲಾ ಏಕೆಂದು ಕೇಳಿದರೆ, ತಿರುಗಿ ಈ ಜನ್ಮದಲ್ಲಿ ನಾವೇನು ಮದುವೆಯನ್ನು ಮಾಡಿಸಲಿಕ್ಕಿದೆಯೋ, ಎನ್ನುವರು. ಮದುವೆಗಾಗಿ ತಂಜಾವೂರಿನ ಗಾಯಕಿಯರು ಬರಬೇಕಂತೆ. ನರ್ತಕಿಯರು ಬೇರೆ ಬರಬೇಕಂತೆ. ಸಾಲದುದಕ್ಕೆ ಇಷ್ಟೆಲ್ಲ ವ್ಯವಸ್ಥೆಯನ್ನು ಮನೆಯ ಚಿಕ್ಕ ಯಜಮಾನನಾದ ನಾನೇ ಮಾಡಿಸಬೇಕಂತೆ . . ."

"ಸರಿಯೇ. ಅದಕ್ಕೇನು? ಎಲ್ಲಾ ವ್ಯವಸ್ಥೆಯನ್ನು ಮಾಡಿಸುವುದು."

"ನಿಜ. ಮಾಡಿಸಬೇಕು. ಆದರೆ ಈ ನೆಪದಿಂದ ನಾನು ನಿನ್ನನ್ನು ಒಯ್ಯಲು ಬಾರದೇನು?"

"ಅಂದರೆ? ನನ್ನಿಂದ ನಿನ್ನ ಮೋರೆಗೆ ಮಂಗಳಾರತಿಯಾಗಲೆಂದೇ?"

"ಅಲ್ಲ; ನರ್ತನವನ್ನು ನೀನೂ ಬಲ್ಲೆ. ಬೇರೆ ನರ್ತಕಿಯರು ಸಿಗಲಿಲ್ಲ. ನೀನೇ ಸರಿಯೆನ್ನುವುದು. ಮುಖ್ಯವಾಗಿ ಮಾಲತಿ, ನಿನ್ನನ್ನು ನನ್ನ ವಿವಾಹಕ್ಕೆ ಒಯ್ಯಬೇಕೆಂದು ನನ್ನ ಇಷ್ಟ. ಅದಕ್ಕೀಗ ಯುಕ್ತ

ನೆಪವೂ ಸಿಕ್ಕಿದೆ. ನೋಡು, ನಿನ್ನ ಹೇಳಿಕೆಯಿಂದ ನಾನು ವಿವಾಹಕ್ಕೆ ಒಡಂಬಟ್ಟುದು; ಹೀಗಿರಲು ಆ ಶುಭಕಾರ್ಯಕ್ಕೆ ನೀನೇ ಇಲ್ಲದೆಹೋದರೆ . .”

ಮಾಲತಿಯ ಆಸೆಯು ಫಲಿಸುವ ಗಳಿಗೆಯದು. ಆದರೆ ನರ್ತನವನ್ನು ಕಲಿತ ಅವಳಿಗೆ ಮಂಗಳೂರಿನಲ್ಲಿ ಒಂದೇ ಒಂದು ದಿನ ಕುಣಿಯುವ ಪ್ರಸಂಗ ಬಂದಿದ್ದಿರಲಿಲ್ಲ. ಬಂದ ಈ ಪ್ರಸಂಗವನ್ನು ಬೆಂಗಳೂರಿನಲ್ಲಿ ಉಪಯೋಗಿಸಿಕೊಳ್ಳುವುದು ಎಷ್ಟು ಹಿತವೆಂದು ಅವಳಿಗೆ ಸೂಚಿಸಲಿಲ್ಲ. ತಾನು ಕುಲಶೀಲರ ಮನೆಯನ್ನು ಸೇರುವುದು ಅಮಂಗಳಕರವೆಂದು ಅವಳಿಗೆ ಚೆನ್ನಾಗಿ ತಿಳಿದಿತ್ತು. ಹೆಸರಿಗೇನೋ ತಾವು ನಿತ್ಯ ಸುಮಂಗಲೆಯರು. ತಮ್ಮ ಬಾಳ್ವೆಯು ಮಾತ್ರ ಅಮಂಗಳಕಾರಿಯಾದುದು. ಶುಭಕಾರ್ಯಗಳಲ್ಲಿ ತಮ್ಮಂಥವರು ಹೋದುದರಿಂದ ಹೋಟೇಲಿನಲ್ಲಿ ವೀರೇಶನು ತನಗೆ ಬಲಿಯಾದಂತೆ ಕೆಲವೊಂದು ಮಂದಿ ತರುಣರಾದರೂ ಅನುರಾಗಭ್ರಾಂತಿಗೀಡಾಗದಿರರು ಎಂದು ಅವಳಿಗೆ ಹೊಳೆಯಿತು. ವೇಶ್ಯೆಯರು ಅಂಥ ಆಮಂತ್ರಣಗಳನ್ನು ಸ್ವೀಕರಿಸುವುದಾದರೂ ಅದಕ್ಕೆ ಎಂದವಳಿಗೆ ತಿಳಿಯದಿರಲಿಲ್ಲ. ಹಿಂದಿನ ಬರಗಾಲದ ಸ್ಥಿತಿಯಲ್ಲಿ ಅವಳು ಇಂಥದೇನೊಂದು ಆಮಂತ್ರಣವು ಬಂದಿದ್ದರೂ ನಿರಾಕರಿಸುತ್ತಿದ್ದಿರಲಿಲ್ಲ. ಈಗ ಮಾತ್ರ ಸ್ವೀಕರಿಸಲು ಅಂಜಿಕೆಯಾಯಿತು. ಇತ್ತ ಆಸೆಯಂತು ಇದ್ದೇ ಇದೆ. ಮುಖ್ಯವಾಗಿ ವೀರೇಶನ ಮದುವೆಯನ್ನು ನೋಡಬೇಕೆಂಬ ಆಸೆ.

ಬಲು ಹೊತ್ತಿನ ತನಕ ಮಾಲತಿಯು ಮೌನ ವಾಗಿದ್ದುದನ್ನು ಕಂಡು ವೀರೇಶನಿಗೆ ಸಂಶಯವಾ ಯಿತು. ಅವಳೀಗ ತಾನು ಕೊಟ್ಟ ಹಿತೋಪದೇಶ ಕ್ಕಾಗಿ ವ್ಯಥೆಪಡುವಳೆಂದವನು ತಿಳಿದನು. ಅದರಿಂದ—

"ಮಾಲತಿ, ನಿನ್ನ ಮನವು ಪಲ್ಲಟವಾಯಿತೇ?" ಎಂದು ಕೇಳಿದನು.

"ಏತಕ್ಕೆ? ಯಾವ ವಿಷಯದಲ್ಲಿ . . . ."

"ನನ್ನ ವಿವಾಹದ ವಿಷಯದಲ್ಲಿ . . ಈಗ ನಿನಗೆ ನೀನು ಕೊಟ್ಟ ಉಪದೇಶವು ತಪ್ಪೆಂದು ತೋರುತ್ತಿರ ಬೇಕು. ನಾನೂ ಹಾಗೆ ಎಣಿಸಿದ್ದೆ. ನನಗಾದರೂ ವಿವಾಹವು ಮನಸ್ಸಿಗೆ ಬರುತ್ತಿರಲಿಲ್ಲ."

"ಸಾಕು, ನಾನಷ್ಟು ಮೂರ್ಖೆಯಲ್ಲ. ಏನೂ ಯೋಚನೆಮಾಡದೆ ನಿನಗೆ ನಾನಾ ಉಪದೇಶವನ್ನು ಮಾಡಲಿಲ್ಲ."

"ಹಾಗಾದರೆ ಈ ಮೌನವೇತಕ್ಕೆ?"

"ನಾನು ನಿನ್ನ ವಿವಾಹವನ್ನು ಕಾಣಲಿಷ್ಟಪಡುವೆ ನಾದರೂ ನರ್ತಕಿಯಾಗಿ ಬರುವುದು ಒಳಿತಲ್ಲವೆಂದು ತೋರಿದುದರಿಂದ"

"ನೀನಲ್ಲದಿದ್ದರೆ ಅನ್ಯ ನರ್ತಕಿಯರನ್ನಾದರೂ ಕರೆ ಯಿಸಲೇ ಬೇಕಷ್ಟೆ? ನೀನೇ ಬಂದರೆ ಮನಸ್ಸಿಗೆ ಸ್ವಲ್ಪ ಸೊಗಸಿತ್ತು."

ತುಂಬಾ ವಿಚಾರಮಾಡಿ ಕೊನೆಯ ಗಳಿಗೆಯಲ್ಲಿ ವೀರೇಶನಿಗೆ "ಆಯಿತು" ಎಂದಳು.

## ೧೨. ಹೆಜ್ಜೆ ತಪ್ಪಿತು; ಪ್ರಜ್ಞೆ ತಪ್ಪಿತು.

ವೀರೇಶನ ಮದುವೆಗೆ ರಾಮು ಬಾರದಿರುತ್ತಾನೆಯೇ? ಎಂದಿನಿಂದ ಬೆಂಗಳೂರಿಗೆ ಬರಲು ಸಮಯವನ್ನು ಹಾರೈಸಿಕೊಂಡಿದ್ದವನು ಈ ಮುಹೂರ್ತದಲ್ಲಿ ಎಲ್ಲಿ ಹೋಗುವನಂತೆ? ಬಂದನು. ಬಂದು ವೀರೇಶನಿಗೆ ಭೇಟಿಯಾದ ಮರುದಿನವೇ ತಿರುಗಿ ಅಂದನು — "ಪಕ್ಕಾ ಕಳ್ಳನೋ ನೀನು!" ಎಂದು. ವೀರೇಶನಿಗೆ ಒಳಗೊಂದು ಒಗೆಯ ಭೀತಿಯಾದರೂ ಮೋರೆಯ ಮೇಲೆ ನಗುವನ್ನು ತೋರಿಸಿಕೊಂಡನು. ಗೆಳೆತನದ ಸಲಿಗೆಯಿಂದ "ರಾಮು, ಸುಮ್ಮನೆ ಹುಚ್ಚನಂತೆ ಇತರರ ಮುಂದೆ ಹಾಗೆಲ್ಲಾ ಹರಟಬೇಡ" ಎಂದನು. ರಾಮು ವೀರೇಶರು ಬಹಳ ಸಮಯದಿಂದ ಸಹಪಾಠಿಗಳು. ಶಾಲೆ ಬಿಟ್ಟಮೇಲೂ ಅವರ ಅಂತಃಕರಣಗಳು ದೂರಾಗಲಿಲ್ಲ. ರಾಮುವೇ ಒಮ್ಮೆ ವೀರೇಶನಂತೆ ಆಚರಿಸಿದರೂ ವೀರೇಶನು ಬಾಯಿ ಬಿಡುತ್ತಿದ್ದಿಲ್ಲವೆಂದಮೇಲೆ ರಾಮುವು ಕೃತಘ್ನನಾಗುವನೇ? ಒಂದು ದಿನ ಅವನನ್ನು ಮಾಲತಿಯಲ್ಲಿಗೆ ಒಯ್ದನು. ಮಾಲತಿಗೆ ಮೈಸೂರು ಹೋಟೇಲಿನ ನೆನಪಾಯಿತು. ಹತ್ತು ರೂಪಾಯಿಯ ನೋಟನ್ನೆಸೆದ ಈ ಬಹದುರನನ್ನು ಕಂಡು ಅವಳು ನಕ್ಕಳು. ಕೊನೆಗಂದಳು — "ವೀರೇಶನ ಜತೆಯಲ್ಲಿ ಬಂದುದರಿಂದ ಹಾಡುವೆ" ಎಂದು. ಸ್ವಲ್ಪ ಹೊತ್ತಿನ ತನಕ ಹಾಡಿದ ಬಳಿಕ ವೀರೇಶನು ಮನೆಯ.

ಕಡೆಗೆ ಹೊರಟನು. ಬಾರದ ಕಾಲುಗಳನ್ನೆತ್ತಿಕೊಂಡು ರಾಮುವೂ ಅವನನ್ನನುಸರಿಸಿದನು.

ಬಂತೀಗ ಮದುವೆಯ ದಿನ. ಶಂಕರಪುರದಲ್ಲಿ ಒಂದು ಭಾರಿ ಮನೆಯಲ್ಲಿ ಹುಡುಗಿಯ ಮನೆಯವರು ಬಂದಿಳಿದಿದ್ದರು. ಅವರು ಶಿವಮೊಗ್ಗೆಯಲ್ಲಿ ಒಬ್ಬ ಭಾರೀ ಸಾಹುಕಾರರು. ಆದರೆ ಬೆಂಗಳೂರಿನಂಥ ನಗರದಲ್ಲಿ ವೀರೇಶನಂಥ ಶ್ರೀಮಂತ ಅಳಿಯನನ್ನು ಸಂಭಾವಿಸಲು ಹುಡುಗಿಯನ್ನು ಬೆಂಗಳೂರಿನ ಶಂಕರಪುರಕ್ಕೆ ಒಯ್ದಿದ್ದರು. ಮನೆ ತುಂಬ ಜನ, ಮನೆ ಸುತ್ತ ಚಪ್ಪರ, ಮನೆಯೆಲ್ಲ ಗಡಿಬಿಡಿ! ಸಂಜೆಗೆ ಸರಿಯಾಗಿ ವರನ ಮನೆಯವರು ದಿಬ್ಬಣವನ್ನೆತ್ತಿಕೊಂಡು ಬರುವವರಿದ್ದರು. ಇಡಿ ಬೆಂಗಳೂರಿನ ಮೋಟಾರುಕಾರುಗಳೇ ಆ ಬೀದಿಯಲ್ಲಿ ಸಂಚರಿಸತೊಡಗಿದುವು. ಸಂಜೆ ೬||ಗೆ ಮದುವೆಯಾದರೆ ೪ರಿಂದಲೇ ಬರುವವರ ಗದ್ದಲ ತೊಡಗಿದೆ. ಮೋಟಾರುಗಳ ಸಂತೆಯಲ್ಲಿ ಒಡಜನರ ಕೈಕಾಲುಗಳ ಚಲನೆಗೆ ಎಡೆ ಸಿಗುವುದು ಕಷ್ಟವಿತ್ತು.

ವರನ ಮನೆಯ ದಿಬ್ಬಣವೆಂದರೆ ಹಿಂದಿನ ಕಾಲದ ಅರಸರು ಯುದ್ಧಕ್ಕೆ ಹೋದಂತೆ. ಕುದುರೆಗಳ ಬದಲು ಮೋಟಾರುಗಳು. ಇನ್ನು ಮಿಕ್ಕ ಮಂದಿ, ಮಾರ್ಬಲ, ಕಹಳೆ, ದುಂದುಭಿ, ವಾದ್ಯ— ಇವುಗಳಿಗೆ ಬರಗಾಲವಿಲ್ಲ. ಒಂದೇ ಸಮಯದಲ್ಲಿ 'ಬೇಂಡು' ಬೀರುತ್ತಿದೆ, ವಾದ್ಯವಾಗುತ್ತಿದೆ, ಕೊಳಲು ಧ್ವನಿಗೊಡುತ್ತಿದೆ. ಸಂಜೆಯ ಇಳಿ ಬಿಸಿಲಿನಲ್ಲಿ ಜರತಾರಿ ಸೀರೆ, ಧೋತ್ರಗಳ

ಥಳಥಳಿಸುವಿಕೆಯು ಅಷ್ಟಿಷ್ಟಲ್ಲ. ವಿಮಾನದಿಂದ ನೋಡುವುದಾದರೆ, ಬೆಳ್ಳಕ್ಕಿಗಳ ಭಾರಿ ಸಂತೆ ನೆರೆಯುವಂತೆ ನೆರದವರ ಮುಂಡಾಸಿನ ಸಮೂಹವು ಕಾಣಿಸುತ್ತಿತ್ತು. ಇನ್ನು ಅಲ್ಲಲ್ಲಿ 'ಗ್ಯಾಸು' ದೀಪಗಳು. ಸಂಜೆ ಆಗುವ ಮೊದಲು ಅವುಗಳ ಉಪಯೋಗವಿಲ್ಲವಾದರೂ, ವ್ಯವಸ್ಥೆಯು ನಡೆದಿದೆ. ವರನ ಸೇನೆಯು ವಧುವಿನ ಮನೆಯ ಮುಂದೆ ಬಂದು ನಿಲ್ಲಲು, ಒಪ್ಪಂದಕ್ಕೆಂಬಂತೆ ವಧುವಿನ ಮನೆಯವರು ಹೊರಕ್ಕೆ ಬಂದರು ಆರತಿ, ಹೂವು, ವಾದ್ಯ — ಏನೇನು ಬೇಕೊ ಅವನ್ನೆಲ್ಲ ಹಿಡಿದುಕೊಂಡು ನಂಟರಿಗೆ ಸನ್ಮಾನ ಮಾಡಿದರು. ವಿಜಯಿ ಸೇನೆಯು ವಧುವಿನ ಕಡೆಯವರ ದುರ್ಗವನ್ನು ಪ್ರವೇಶಿಸಿದಂತೆ ಪ್ರವೇಶಿಸಿತು. ನೂರಾರು ಮಂದಿ ಮದುವೆಯ ಮಂಟಪದಲ್ಲಿ ನುಸುಳಿದರು. ನಮ್ಮ ಮುಂಡಾಸಿನ ರಾಮುವೂ ಒಂದು ಕಡೆಯಿಂದ ಪ್ರವೇಶಿಸಿದನು ಬಂದವರನ್ನು ಅಲ್ಲಿ ಇರಿಸಲು ಸ್ಥಳವೇ ಸಾಲದಾಯಿತು. ಅಂತು ಅವ್ಯವಸ್ಥೆಯನ್ನೆಲ್ಲಾ ಸರಿಗೊಳಿಸಿ ಬಂದವರ ಸಭೆ ಸೇರಲು ಒಂದು ತಾಸು ಹಿಡಿಯಿತು. ಬಂದವರಿಗೆಲ್ಲಾ ಬೆವರಿನ ಸ್ನಾನವಾಯಿತು. ವಿದ್ಯುತ್ ಬೀಸಣಿಗೆಗಳು ತಿರುಗಿದುವು, ಪನ್ನೀರುಗಳು ಚಿಮುಕಿದುವು, ಸೋಡಾಲೆಮನುಗಳು ಠಂ ಠಂ ಆದುವು. ಆದರೂ ಸೆಕೆಯು ಸೆಕೆಯೇ, ದಾಹವು ದಾಹವೇ. ಬಂದವರ ಮನವು ವಧೂವರರ ಕಡೆಗೆ ಹೋಗುವುದರ ಬದಲು 'ಎಷ್ಟು ಹೊತ್ತಿಗೆ ನಮ್ಮ ಬಿಡುಗಡೆ' ಎಂಬ

ಚಿಂತನೆಗೆ ಹರಿಯಿತು. ಆದರೆ ದೊಡ್ಡವರ ಮನೆಗೆ ಮದುವೆಗೆ ಬಂದವರು ಹೊರಡಲು ಬರುವು ದೇನು?

ಅಷ್ಟಕ್ಕೆ ತಂಜಾವೂರಿನ ಬುರುಡೆಗಳೆರಡು ಬಾಯಿ ತೆರೆದುವು. "ಕೆಸರಿನಿಂದ ಕಮಲವು ಹುಟ್ಟುವುದೆಂಬು ದಕ್ಕೆ ಅವರೇ ಸಾಕ್ಷಿ"ಯೆಂದು ರಾಮುವಿನ ಟೀಕೆ. ಹಾಡಲು ಕುಳಿತ ಹಾಡುಗಾರ್ತಿಯರು ತಂಜಾವೂರಿ ನವರಂತೆ. ಆನೆಯಂತೆ ಸೂಕ್ಷ್ಮವಾದ ಶರೀರ, ಅದ ರಂತೆ ಸ್ವಚ್ಛವಾದ ಬಣ್ಣ. ಆದರೆ ಕಂಠವು ತೀರ ಕಿರು ದಾಗಿತ್ತು. ಕೋಗಿಲೆಯಂತ ಮಧುರವಾಗಿತ್ತು. ಜನ ರೆಲ್ಲರೂ ಕಣ್ಣೆದುರಿಗೆ ಬಾಯನ್ನು ತೆರೆಯುತ್ತಿರುವ ಅವ ರನ್ನೆ ಕಾಣುತ್ತಿರುವರಾದರೂ, ಸ್ವರವು ಆ ರಾಜ್ಯದಿಂದ ಹೊರಡುತ್ತಿರುವುದೆಂದು ನಂಬಲು ಅವರಿಗೆ ಅಸಾಧ್ಯವಾ ಯಿತು. ಅವರೆಲ್ಲ ಎಲ್ಲೆಲ್ಲಿಯೋ ನೋಡುವರು. ಕೆಲವು ಬಾರಿ 'ರೇಡಿ'ಯೋ ಇರಿಸಿರುವರೇ ಎಂದು ಹುಡುಕು ವರು, ಕೆಲವು ಬಾರಿ ಹೊರಗಿನಿಂದ ಯಾರಾದರೂ ಹಾಡುವರೇ ಎಂದು ಯೋಚಿಸುವರು. ಕೊನೆಗೆ ಬಳಿ ಯಲ್ಲಿನ ತಾಳಮೇಳಗಳನ್ನು ಕಂಡು ಎದುರಿಗೆ ಕುಳಿತ ಎರಡು ಹಿಮವಚ್ಛರೀರಗಳ ಗರ್ಭದಿಂದ ಅದು ಹೊರ ಹೊಮ್ಮಿತೆಂದು ಅವರು ನಂಬಬೇಕಾಯಿತು. ರಾಮು ವಂತು ತೀರ ರಸಿಕನಂತೆ ಕತ್ತನ್ನು ತಿರುವತೊಡಗಿದನು. ಅವನ ಮುಂಡಾಸು ಬಳಿಯಲ್ಲಿ ಕುಳಿತವರ ಮುಂಡಾ ಸುಗಳಿಗೆ ಹೊಡೆದು, ಹಲವು ಬಾರಿ 'ಜಕುಮಾ'ಯಿತು.

ಕೊನೆಗೆ ಇರಿಕೆಯನ್ನು ಬಿಡಿಸಿದ ಹಾವಿನಂತೆ ಕೊರಳ ಮೇಲೆ ಉರುಳಿಬಿತ್ತು

ಜನರಿಗೆ ಈಗ ಸಂಗೀತದಿಂದಲೂ ಬೇಸರವಾಯಿತು. ರಾಮುವೆಂದನು—'ಒರೇ ಹಾಡನ್ನು ತೆಗೆದುಕೊಂಡು ಮಾಡಲೇನು? ಕುಣಿತವಿದ್ದಿದ್ದರೆ'–ಎಂದು. ವಾಕ್ಯವು ಪೂರ್ಣ ಮುಗಿಯಲಿಲ್ಲ, ಬಂತೇ ಬಂತು, ಕುಣಿತದ ನವಿಲು. ನವಿಲಿನಂತೆ ಹಸುರು ನೀಲಿ ಬಣ್ಣದ ಉಡುಗೆ!

"ವಾಹವ್ವಾ" ಎಂದು ಆನಂದದಿಂದ ಕರತಾಡನ ಮಾಡಿದನು. ಉಳಿದವರೂ ಚಪ್ಪಾಳೆ ಹೊಡೆದರು. ನರ್ತಕಿಗೆ ಎದೆ ನಡುಗಿತು. ಏಕೆ ಇಂಥ ಶಬ್ದಸಮುದ್ರವು ಉರುಳಿತೆಂದು ಅವಳಿಗೆ ತಿಳಿಯಲಿಲ್ಲ. ಸರಿ, ಅವಳು ಈಗ ತನ್ನ ಹೆಜ್ಜೆಯನ್ನು ತೊಡಗಿದಳು. ಕಂಠವು ಒಂದು ಹಿಂದುಸ್ಥಾನಿ ಹಾಡನ್ನು ಹಾಡಿತು; ಮುಖದಿಂದ ಏನೆಲ್ಲ ಹಾವಭಾವಗಳು ಹೊರಟುವು. ಜನರಿಗೆ ಸೆಕೆಯು ಮರವೆಯೋ ಆಯಿತು. ನೂರಾರು ಬಾಯಿಗಳಿಂದ 'ಬೇಷ್' 'ಬೇಷ್' 'ವಹವ್ವಾ' 'ವಹವ್ವಾ' ಎಂಬ ನಿನಾದಗಳು ಹೊರಟುವು. ರಾಮುವು ತೀರ ಉತ್ಸಾಹಿತನಾಗಿ ತಾಳಕ್ಕೆ ಸರಿಯಾಗಿ, ಸಿಳ್ಳು ಮಾಡತೊಡಗಿದನು. ನೆರೆದ ತರುಣರು ಮರುಧ್ವನಿಗೊಟ್ಟರು. ಹೋ! ಸಿಳ್ಳಿನ ಕೋಲಾಹಲ. ನರ್ತಕಿಯು ಈ ಜನರಿಗೆ ಹುಚ್ಚು ಹಿಡಿದಿದೆಯೆಂದು ತಿಳಿದಳು. ಅವಳಿಗೆ ಬೇಸರವಾಯಿತು. ಮೆಲ್ಲನೆ ಕುಣಿತವನ್ನು ನಿಲ್ಲಿಸಿದಳು. ರಾಮು

ವಿಗೆ ಅದು ಸರಿಯೆನಿಸಲಿಲ್ಲ. ಅದು ಮಾಲತಿಯೋ ಆದುದರಿಂದ ಅವಳ ಬಳಿಗೆ ಹೋಗಿ—“ಛೀ, ನಿಲ್ಲಿಸ ಬಾರದು.” ಎಂದನು. ಬೇರೆ ಸ್ಥಳವಾಗಿದ್ದರೆ ಅವನ ಮೋರೆಯ ಮೇಲೆ ಮಾಲತಿಯು ಮುಸಿ ಬಳೆಯುತ್ತಿದ್ದಳು. ಸಭೆಯಲ್ಲಿ ಅವಳು ಸುಮ್ಮನಿರಬೇಕಾಯಿತು. ಅವಳು ಮೌನವಾದುದನ್ನು ಕಂಡು ಒಬ್ಬಬ್ಬರು ಮುದುಕರು—“ಚೆನ್ನಾಗಿದೆ. ನಿಲ್ಲಿಸಬೇಡ” ಎಂದರು. ಅವಳೇನು ಮಾಡಬೇಕು? ಸಭಾಪಮಾನ ಮಾಡಲು ಬರುವುದೇ? ಕುಣಿಯತೊಡಗಿದಳು. ಸೋತುಸುಣ್ಣವಾದರೂ ಕುಣಿಯುತ್ತಿರುವಳು. ತಿರುಗಿ ಅದೇ—‘ಬೇಷ್’ ‘ವಹವ್ವಾ’ ಕರತಾಡನ ಸಿಳ್ಳುಗಳು.

ರಾಮುವಿನ ಕಿವಿಯಲ್ಲಿ ಒಬ್ಬ ತರುಣನು “ನಿನಗವಳ ಗುರುತಿದೆಯೇ” ಎಂದು ಊದಿದನು. ಹೆಮ್ಮೆಗೆ ಇವನು “ಅಹುದೆ”ಂದನು. ಮರುಕ್ಷಣದಲ್ಲಿ ಮೂರ್ಖತೆಯು ಹೊಳೆದು—“ಗುರುತಿರಲು ಅವಳು ನನಗೇನಾಗಬೇಕು?”—ಎಂದನು. ಆ ತರುಣನು ಅಷ್ಟಕ್ಕೇ ಬಿಡಲಿಲ್ಲ. “ಗುರುತಿಲ್ಲದ ಅವಳ ಬಳಿಗೆ ಹೋದೆಯೇಕೆ?” ಎಂದನು. “ನೀನು ಸಿಳ್ಳು ಹೊಡೆದೆಯೇಕೆ?” ಎಂದು ರಾಮುವಿನ ಉತ್ತರ. ತರುಣನು ಹತಾಶನಾದನು. ಅವಳ ಗುರುತಿನವನ ಗುರುತನ್ನಾದರೂ ಮಾಡಿಕೊಳ್ಳುವ ಅವನ ಆಸೆಯು ನಿರರ್ಥಕವಾಯಿತು. ಇತ್ತ ಮಾಲತಿಗೆ ಕುಣಿಕುಣಿಯುತ್ತ ಮಂಟಪದ ಕಡೆಗೆ ನೋಡುವ ಕುತೂಹಲವಾಯಿತು. ವೀರೇಶನನ್ನೂ

ಆವನ ಪತ್ನಿಯನ್ನೂ ಕಾಣುವ ನೆಪದಿಂದ ಅವಕಾಶವನ್ನು ಕಲ್ಪಿಸಿ ಅವಳು ಮಂಟಪದ ಕಡೆಗೆ ಮುಖ ತಿರುಗಿಸಿ, "ಪ್ರಿಯ ವೈತೋ" ಎಂದು ಹಾಡತೊಡಗಿದಳು. ಅವಳ ದೃಷ್ಟಿಯು ನೇರಾಗಿ ವೀರೇಶನ ಕಡೆಗೆ ಹರಿಯಿತು. ವೀರೇಶನು, ನರ್ತನವು ತೊಡಗಿದಂದಿನಿಂದ ಇವಳನ್ನೇ ನೋಡುತ್ತಿದ್ದನು. ಈಗ ಅವಳೂ ನೋಡಲು ಅವನಿಗೆ ನಗು ಬಂದಿತು. ಬಳಿಯಲ್ಲಿ ನಾಚುಗೆಯಿಂದಲೋ, ಮೇಲೆ ತೊಡಿಸಿದ ಚಿನ್ನ, ಮುಡಿಸಿದ ಹೂಗಳ ಭಾರದಿಂದಲೋ, ತಲೆ ಬಗ್ಗಿಸಿಕೊಂಡ ಮದುವಣಿಗಿತ್ತಿಯು ಅವನ ಮುಖವನ್ನೇ ನೋಡುತ್ತಿದ್ದಳು. ವೀರೇಶನ ಈ ನಗುವನ್ನು ಕಂಡು— ಮದುವಣಿಗಿತ್ತಿಯು ಸ್ವಲ್ಪ ಮೇಲಕ್ಕೆ ತಲೆಯನ್ನೆತ್ತಿದ್ದಳು. ವರನ ದೃಷ್ಟಿಯು ನರ್ತಕಿಯ ಕಡೆಗೆ ಹರಿಯುತ್ತಿದೆಂದು ತಿಳಿದುಕೊಂಡಳು. ಅರ್ಧ ಮುಕ್ಕಾಲು ತಾಸಿನ ತನಕ ಇದೇ ಹಾಡು. ಮಾಲತಿಯ ಕಣ್ಣುಗಳಿಗೆ— ಮದುವಣಿಗಿತ್ತಿಯ ಎಡ ಕಪೋಲದ ಮೇಲೆ ಒಂದೆರಡು ಬಾರಿ ಹೊಳಪು ಕಾಣಿಸಿತು. ಅವಳದನ್ನು ಕಂಡು ತನ್ನ ನರ್ತನವನ್ನು ನಿಲ್ಲಿಸಿ, ಸ್ವಲ್ಪ ಹಿಂದೆ ಸರಿದು ಕುಳಿತುಕೊಂಡಳು. ಅವಳ ಮುಂದೆ ಹೂವು, ಪನ್ನೀರು, ಶರಬತ್ತುಗಳು ಬಂದುವು. ಸುತ್ತಿದ್ದವರು— 'ತೆಗೆದುಕೊಳ್ಳಿರಿ'— 'ತೆಗೆದುಕೊಳ್ಳಿರಿ' ಎಂದುಪಚರಿಸಿದರು. ಆದರೂ ಮಾಲತಿಯು ಮುಟ್ಟಲಿಲ್ಲ.

ಸರಿ, ಈ ಅವಧಿಯಲ್ಲಿ ನಮ್ಮ ಸಂಗೀತದ ಗುಡ್ಡ

ಗಳು ತಿರುಗಿ ಬಾಯಿ ತೆರೆದುವು. ಆದರೆ ಪ್ರಥಮ ಬಾರಿ ದೊರೆತ ಸಂಭಾವನೆಯು ಈಗ ದೊರೆಯಲಿಲ್ಲ. ರಾಮುವಿಗೂ ಸಹ ಈಗ ಅವಳ ಸ್ವರದಲ್ಲಿ ಅಪಸ್ವರವು ಕೇಳಿಸಿತಂತೆ. ಮಾಲತಿಯು ಮಂಟಪದ ಕಡೆಗೆ ದೃಷ್ಟಿಸಿ ಕುಣಿಯುತ್ತಿರುವಾಗ ಹೆಜ್ಜೆ ತಪ್ಪಿದ್ದು ಸಹ ಅವನಿಗೆ ತಿಳಿಯಲಿಲ್ಲ! ಪ್ರಾಯಶಃ ರಾಮುವಿನ ಕಿವಿಯ ಚುರು ಕು ಹೆಚ್ಚೆಂದು ಕಾಣುವುದು ಸರಿ, ಹಾಡುಗಾರ್ತಿಯರ ವಿಚಾರ! ಅವರ ಗಾನ ಕೇಳುವವರೇ ಇಲ್ಲದಾದರು ಎಲ್ಲರೂ ಸಂತೆಯಲ್ಲಿ ಮಾತನಾಡುವಂತೆ ತಂತಮ್ಮೊ ಳಗೆ ಮಾತನಾಡಲುಪಕ್ರಮಿಸಿದರು. ಹಾಡುಗಾರ್ತಿ ಯರ ತ್ಯಾಗರಾಜನ ಕೀರ್ತನೆಗಳಿಗೆ ಯಾರೂ ಕಿವಿಗೊ ಡದಾದರು. ಆಗ ಅವರೀರ್ವರಿಗೂ ಒಮ್ಮೆಗೇ ಸ್ಫುರಣ ಬಂದಂತಾಗಿ, ಮಾಲತಿಯ ನರ್ತನವನ್ನು ನಾಚಿಸುವ ಯೋಚನೆಯಾಯಿತು. ಅವರೂ ಗೆಜ್ಜೆ ಕಟ್ಟಿದರು. ಕೇವಲ ಹಾಡಲು ಬಂದವರಾದರೂ, ಕುಣಿಯಲು ನಿಂತರು. ಗಂಡುಭೇರುಗಳಂತೆ ಹೆಜ್ಜೆ ಇಡತೊಡಗಿ ದರು. ಕೈಕಾಲುಗಳನ್ನು ವಿಧವಿಧವಾಗಿ ಮುರಿಯ ತೊಡಗಿದರು. ಕುಣಿತದ ವೇಗವು ಹೆಚ್ಚಾಯಿತು. ಮೃದಂಗವು ಹರಿಯುವುದಕ್ಕಾಯಿತು; ಅವರ ಕಪೋ ಲಗಳಿಂದ ಕೊಬ್ಬುಕರಗಿ ನೀರಾಗಿ ಹರಿಯತೊಡಗಿತು. ರಂಗಭೂಮಿಯಿಂದ “ಮೇಘದೋಪಾದಿಯಲ್ಲಿ” ಧೂ ಳುಹಾರತೊಡಗಿತೆಂದು ರಾಮುವು ಹೇಳತೊಡಗಿದನು. ಅವನಿಗೆ ಇವರನ್ನು ಓಡಿಸುವ ಒಲವಾದ ಮನವಾಗಿ

“ಇಸ್ಸೀ” ಎಂದು ಸ್ವರವನ್ನು ಹೊರಡಿಸಿದನು. ಒಂದು “ಇಸ್ಸಿ”ಗೆ ಇನ್ನೊಂದು “ಇಸ್ಸೀ” ಕೂಡಿತು. ಇನ್ನೊಂದಕ್ಕೆ ಮತ್ತೊಂದು ಸೇರಿತು. ಕೊನೆಗೆ “ಇಸ್ಸೀ”ಯೆಂದು ಉದ್ದದ ಒಂದೇ ಧ್ವನಿಯಾಗಿಬಿಟ್ಟಿತು. ಗಜನರ್ತನವು ನಿಲ್ಲುವ ತನಕ “ಇಸ್ಸೀ” ನಿಲ್ಲಲಿಲ್ಲ. ನವನರ್ತಕಿಯರು ಲಜ್ಜಿತರಾಗಿ ಹಿಂದೆ ಸರಿದರು. ಜನರ ಮೋರೆಯನ್ನೊಮ್ಮೆ ಕೆಂಪಡರಿದ ಕಣ್ಣುಗಳಿಂದ ನೋಡತೊಡಗಿದರು. ಒಂದೊಂದು ಮೋರೆಯಲ್ಲಿ ನೂರಾರು ನೆರಿಗೆಗಳು ತುಂಬಿದ್ದುವು. ತಿರುಗಿ ಅವರಿಗೆ ಹಾಡುವ ಸಾಹಸವೂ ಆಗಲಿಲ್ಲ. ಕುಣಿಯುವ ಮನವೂ ಆಗಲಿಲ್ಲ. ಜನರು ಮಾಲತಿಯಲ್ಲಿ “ಇನ್ನೊಂದುಬಾರಿ” ಎಂದು ಬೇಡತೊಡಗಿದರು. ಮಾಲತಿಗೆ ಕುಣಿಯುವ ಮನವಿಲ್ಲದಿದ್ದರೂ, ಜನರ ಪ್ರಶಂಸೆಯುಂಟುಮಾಡಿದ ಅಹಂಕಾರವನ್ನು ಅವಳು ಮುರಿಯದಾದಳು. ಅದೂ ಪ್ರತಿಸ್ಪರ್ಧಿಯರು ಅವಳ ಮೇಲಿನ ಅಸೂಯೆಯಿಂದ ಕುಣಿದುದು; ಅವರನ್ನು ಜನರು ತಿರಸ್ಕರಿಸಿ ತನ್ನನ್ನು ಬೇಡಿದುದು. ಇದು ಎಂಥವರ ಮನವನ್ನೂ ತಿರುಗಿಸುವುದಿಲ್ಲವೇ?

ಮಾಲತಿಯು ಈ ಬಾರಿ “ಮಯೂರ ನರ್ತನ” ಎಂಬ ಹೊಸ ಕುಣಿತವನ್ನು ತೊಡಗಿದಳು. ಸಭೆಯ ಮುಂದೆ ಹೆಣ್ಣುನವಿಲನ್ನು ಮೆಚ್ಚಿಸಲು ಹೊರಟ ಗಂಡು ನವಿಲಿನಂತೆ ನಲಿಯತೊಡಗಿದಳು. ಅವಳ ನರ್ತನವನ್ನು ಕಂಡು ಮುಪ್ಪಿನ ಮುದುಕರಿಗೂ ಸಹ ಕುಣಿಯುವ ಆಸೆಯಾಯಿತು. ರಾಮುವಂತು, ಆ ಗಾನ

ರಾಕ್ಷಸಿಯರಿಗೆ ಕೇಳುವಂತೆ—"ಕುಣಿದರೆ ನವಿಲು ಕುಣಿಯಬೇಕು. ಕಾಗೆಗೇಕೆ ಆ ತಂಟೆ?" ಎಂದು ಹೇಳಿಬಿಟ್ಟನು.

ಅಷ್ಟಕ್ಕೆ ಮಾಲತಿಯು ಸಭೆಯನ್ನು ಬೀಳ್ಕೊಡುವ ಮುಂಚೆ ತನ್ನ ಕುಣಿತವನ್ನು ನಾಲ್ಕನೆಯ ಗತಿಗೆ ಮುಟ್ಟಿಸಿ, ಒಮ್ಮೆಗೇ ನಿಲ್ಲಿಸಿ ಮುಕ್ತಾಯಮಾಡಿ ಸಭೆಯನ್ನು ನಮಸ್ಕರಿಸಿದಳು. ಕಣ್ಣೆದುರಿಗೆ ಓರ್ವ ಪರಿಚಿತ ವ್ಯಕ್ತಿಯು ಬಿದ್ದಿತು. ಅವನನ್ನು ಕಂಡು ಒಮ್ಮೆಗೇ ಚೀರಿ ಮೂರ್ಛೆಹೋದಳು. ರಾಮುವು ಓಡಿಬಂದನು. ಎದುರು ಕಾಣಿಸಿಕೊಂಡ ಯುವಕನು ಅಲ್ಲಿಗೆ ಒಡಿದನು. ವೀರೇಶನೂ ಓಡುವುದರಲ್ಲಿದ್ದನು, ಆದರೆ ಪುರೋಹಿತರು ಬಿಡಲಿಲ್ಲ. ಸರಿ ಒಮ್ಮೆಗೆ ಅವಳನ್ನು ಹೊರಕ್ಕೆ ಒಯ್ದರು. ರಾಮುವು ಮರಳಿ ಬಂದು 'ಈ ತಂಜಾವೂರಿನ ರಾಕ್ಷಸಿಯರು ಖಂಡಿತವಾಗಿಯೂ ಮಾಟಮಾಡಿದರು ಎಂದು ಹೇಳಿದನು. ಪ್ರತಿಯೊಬ್ಬರೂ ಅದು ನಿಜವೆಂದೇ ಸಾರಿದರು. ಇದೊಂದಲ್ಲದಿದ್ದರೆ ವೀರೇಶನ ವಿವಾಹ ಸಮಾರಂಭವು ಸುಸಾಂಗವಾಗಿ ನೆರೆಯುತ್ತಿನ್ನಲು ಅಡ್ಡಿಯಿಲ್ಲ.

## ೧೩. ಪಾಪವನ್ನು ತೊಳೆದು ಬರುವಳಂತೆ.

ಮಾಲತಿಯನ್ನು ಮಲ್ಲೇಶ್ವರದಲ್ಲಿನ ಅವಳ ಮನೆಗೇ ಒಯ್ದರು. ಅಲ್ಲಿ ಅವಳಿಗೆ ತಿರುಗಿ ಚೈತನ್ಯ ಉಂಟಾಯಿತು. ಮದುಮಗನ ಮನಸ್ಸು ತೀರ ಕಾತುರಗೊಂಡಿ

ತು. ಅವನ ಪಾಲಿಗೆ ಮದುವೆಯ ದಿವಸಗಳು ತೀರ ಸವಿಯಿಲ್ಲದಾದುವು. "ಮಾಲತಿಗೆ ಏನಾಯಿತು? ಹೇಗಿರುವಳು?" ಎಂದು ರಾಮುವನ್ನವನು ಕೇಳುವನು. ರಾಮುವು ಅದನ್ನು ತಿಳಿಯಲು ಮೂರುನಾಲ್ಕು ಬಾರಿ ಮಲ್ಲೇಶ್ವರಕ್ಕೋಡಿದನು. ಆದರೆ ಒಳಗೆ ಅವನಿಗೆ ಪ್ರವೇಶವೇ ದೊರೆಯಲಿಲ್ಲ. ಅವನೆಷ್ಟು ಪ್ರಾರ್ಥಿಸಿಕೊಂಡರೂ ಅವಳು ಬಾಯಿಯನ್ನು ತೆರೆಯುತ್ತಿದ್ದಿಲ್ಲ, ಕದವನ್ನು ತೆರೆಯಲು ಸೇವಕರಿಗೂ ಸಹ ಬಿಡಗೊಡುತ್ತಿದ್ದಿಲ್ಲ. ರಾಮುವು ಹತಾಶನಾಗಿ ಮರಳಿದನು. ಐದನೆಯ ಬಾರಿಗೆ ವೀರೇಶನ ಪತ್ರವನ್ನು ಒಯ್ದನು. ಆ ಬಾರಿಯ ಪತ್ರಕ್ಕೆ ಮಾತ್ರ ಪ್ರವೇಶವು ದೊರೆಯಿತು; ರಾಮುವು ಹೊರಗೇ. ಅವನಿಗೆ ಸಿಟ್ಟು ಬಂದು ಉರಿದುಬಿಟ್ಟನು. ತನ್ನಪಮಾನವಾಯಿತೆಂದು ತಿಳಿದನು. ವೀರೇಶನ ಗೆಳೆಯನ ಅಪಮಾನವೆಂದರೆ? ವೀರೇಶನು ಯಾರು? ರಾಮುವಿಗೆ ಬೇಸರ ಬಂದು ಅವನು ತಿರುಗಿ ಮಾಲತಿಯನ್ನು ಕಾಣುವುದಿಲ್ಲೆಂದು ಪ್ರತಿಜ್ಞೆ ಮಾಡಿದನು. ಅಷ್ಟೇ ಅಲ್ಲ, ಬಹುದಿನಗಳವರೆಗೆ ವೀರೇಶನ ಬಳಿಗೂ ಹೋಗಲಿಲ್ಲ. ಮಾಲತಿಯು ವೀರೇಶನಿಗೆ ತಾನು ಈಗ ಸಾಧಾರಣ ಕ್ಷೇಮದಲ್ಲಿರುವೆನೆಂದು ತಿಳಿಸಿ ಒಂದು ಪತ್ರ ಬರೆದು ಆಳುಗಳ ಮುಖಾಂತರ ಕಳುಹಿಸಿಕೊಟ್ಟಳು. ಅವನಿಗೂ ಸ್ವಲ್ಪ ಸಮಾಧಾನವಾಯಿತು.

ವಿವಾಹದ ಐದನೆಯ ದಿನವು ಬಂದಿತು. ಆ ದಿನ

ನಂಟರೆಲ್ಲ ಅವರವರ ಮನೆಗೆ ತೆರಳುವ ಯೋಚನೆ ಮಾಡಿದರು. ಮದುವೆಗೆ ಮಹೇಶನೂ ಬಂದಿದ್ದನೆಂಬುದು ವಾಚಕರಿಗೆ ಇಷ್ಟರಲ್ಲಿಯೇ ತಿಳಿದಿರಬಹುದು. ಮಹೇಶನಿಗೆ ಹುಡುಗಿ ಕಡೆಯುವರೊಡನೆ ಬಾಂಧವ್ಯವಿತ್ತು. ಈ ಕಾರಣದಿಂದ ಬಂದ ಅವನು ಬಂಧುಗಳು ಶೀಮೊಗ್ಗೆಗೆ ಮರಳಿದರೂ ತಾನು ಸದ್ಯಕ್ಕೆ ಮರಳುವುದಿಲ್ಲೆಂದು ಯೋಚನೆ ಮಾಡಿದನು. ತನ್ನ ತಂಗಿಯನ್ನೊಮ್ಮೆ ಕಂಡಾದರೂ ಹೋಗಬೇಕು ಎಂದು ಯೋಚಿಸಿದನು. ಅವನೆಷ್ಟೋ ಬಾರಿ ಅವಳ ನೆನಪನ್ನು ಮರೆಯಬೇಕೆಂದಿದ್ದನು. ಅದು ಮರೆವೆಯಾಗುತ್ತಲಿತ್ತೋ ಏನೋ, ಪುನಃ ಈ ದುರ್ಘಟನೆಯು ನಡೆಯಿತು. ತನ್ನ ಒಡಹುಟ್ಟಿದವಳು ವೇಶ್ಯೆಯಂತೆ ಮದುವೆಮನೆಗಳಲ್ಲಿ ಕುಣಿಯುತ್ತಿರುವುದನ್ನು ಕಂಡು ಅವನ ಒಡಲು ಎಷ್ಟು ಉರಿದಿರಲಿಕ್ಕಿಲ್ಲ! ಮಾಲತಿಗೆ ಅವನ ದರ್ಶನ ಮಾತ್ರದಿಂದಲೇ ಮೂರ್ಛೆಯಾಯಿತು. ಆದರೆ ಮಹೇಶನು ಎರಡು ತಾಸುಗಳ ತನಕ ಅವಳನ್ನು ನೋಡುತ್ತಿದ್ದನು. ಅವಳ ಮುಂದೆ ರಾಮು ಮೊದಲಾದ ಸ್ತ್ರೀಭ್ರಾಂತರ ವರ್ತನೆಯೂ, ಬಳಿಯಲ್ಲಿ ಕುಳಿತ ಜನರ ಬಾಯಿಯಿಂದ ಆಗಾಗ ಹೊರಡುತ್ತಿದ್ದ ಭಂಡುಮಾತುಗಳೂ, ಅವನನ್ನು ಕೊರೆಯುತ್ತಿದ್ದುವು. ಅವಳಿಗಾಗಿ ತಾನೊಂದು ನರಕದಲ್ಲಿ ಭಯಂಕರ ಯಾತನೆಗಳನ್ನು ಅನುಭವಿಸುತ್ತಿರುವೆನು ಎಂದು ತೋರಿತು. ಆದರೆ ಇದಕ್ಕೆ ಕಾರಣಳಾದ ಮಾಲತಿಯನ್ನು ಅವನಿನ್ನೂ

ಪ್ರೀತಿಸುವನು. ಮಹೇಶನದು ದುರ್ಬಲ ಹೃದಯ ವೆಂದರೂ ಅನ್ನಿರಿ, ಅವನು ಅವಳನ್ನು ಮರೆಯಲಾರನು; ತನ್ನ ಒಡಹುಟ್ಟಿದವಳನ್ನು ಮರೆಯಲಾರನು. ಅದೂ, ಅವಳು ಆ ನೀಚವೃತ್ತಿಗೆ ತಮ್ಮೆಲ್ಲರ ದೆಸೆಯಿಂದಲೇ ಬೀಳಬೇಕಾಯಿತೆಂಬ ಜ್ಞಾನವಿದೆಯಾದುದರಿಂದ ಎಂದೆಂದೂ ಮರೆಯಲಾರನು. ಅವಳ ಎಲ್ಲ ನಡತೆಗಳನ್ನು ಅವನು ಒಪ್ಪುತ್ತಿರುವನೆಂದು ತಿಳಿಯಬೇಡಿ. ಮಾಲತಿಯೇ ಅದನ್ನು ಒಪ್ಪುತ್ತಿಲ್ಲವೆಂದು ಅವನಿಗೆ ತಿಳಿದಿದೆ. ದುರ್ದೈವದ ಪಂಜರದಲ್ಲಿ ಸಿಲುಕಿದ ಆ ವ್ಯಾಘ್ರಿಣಿಗಾಗಿ ಅವಳಷ್ಟೇ ಇವನೂ ಅಳುವನು.

ಮಹೇಶನು ವೀರೇಶನ ಸರಿವಯಸ್ಕನು; ವಿದ್ಯಾವಂತನು. ಅವನಿಗೀಗ ಮದುವಣಿಗನ ಪರಿಚಯವನ್ನು ಮಾಡಿಕೊಳ್ಳಲು ಆಸೆಯಾಗಿದೆ. ಹಲವು ಬಗೆಗಳಿಂದ ಯತ್ನಿಸಿ ಪರಿಚಯವನ್ನು ಮಾಡಿಕೊಂಡನು. ವೀರೇಶನಾದರೂ ಸಾಮಾನ್ಯರ ಗೆಳೆತನಕ್ಕೆ ಎಟುಕದವನಲ್ಲ. ಮದುವೆಯ ಮೂರನೆ ದಿವಸದಲ್ಲಿ ಅವರಲ್ಲಿ ನಿಕಟ ಪರಿಚಯವಾಯಿತು. ನಾಲ್ಕನೆಯ ದಿನ ರಾತ್ರಿ ಬೆಳದಿಂಗಳಲ್ಲಿ ಅವರಿಬ್ಬರೂ ಹೊರಗೆ ಹೂದೋಟದಲ್ಲಿ ಕುಳಿತು ಮಾತನಾಡುತ್ತಿದ್ದರು ಮಹೇಶನು ಪೆಲ್ಲಗೆ ಹೊಸ ವಿಚಾರವನ್ನೊಂದು ಅವನಲ್ಲಿ ಕೇಳಲು ಯೋಚಿಸಿದನು. "ವೀರೇಶಾ, ಆ ದಿನದ ನರ್ತಕಿಯು ಎಲ್ಲಿಯವಳು"—ಎಂದನು. ವೀರೇಶನು ತಬ್ಬಿಬ್ಬಾದನು. ರಾಮುವು ಇವನಿಗೆ ತನ್ನ ವಿಚಾರವನ್ನು ಹೇಳಿರುವನೇ?

ಈಗ ಈ ಸುದ್ದಿ ಇವನ ಮೂಲಕ ಮಾವನಿಗೆ ತಿಳಿದರೆ . . ? ಏನೆಲ್ಲಾ ಯೋಚನೆಗಳು ಬಂದುವು. ಅವನು ಉಪಾಯದಿಂದ ಬೇರೆ ಪ್ರಸ್ತಾಪವನ್ನು ತೊಡಗಿದನು. ತುಸು ಹೊತ್ತಿನ ಮೇಲೆ ಮಹೇಶನಿಂದ ತಿರುಗಿ ಅವೇ ಪ್ರಶ್ನೆಯು ಬಂದಿತು. ಈ ಬಾರಿ ವೀರೇಶನಿಗೆ– "ಇವನವಳನ್ನು ಜಾರಿಸಲು ಎಣಿಸುತ್ತಿರುವನೇ" ಎಂದು ತೋರಿತು ಈ ಬಾರಿಯೂ ಸುಮ್ಮನಾದನು. ತಿರುಗಿ ಮೂರನೇಯಾವೃತ್ತಿಗೆ ಮಹೇಶನು ಪ್ರಶ್ನೆ ಮಾಡಿದನು. ವೀರೇಶನಿಗೆ ಹೇಳದೆ ಮಾರ್ಗವಿಲ್ಲೆಂದು ಕಂಡಿತು. ತನ್ನ ಮತ್ತವಳ ಸಂಬಂಧವನ್ನು ತಿಳಿಸದಿದ್ದರೂ— "ಅವಳೀ ಊರಿನವಳೇ. ಮಲ್ಲೇಶ್ವರದಲ್ಲಿ ವಾಸಿಸುವಳು . . . . . ಹೇಗೆ? ಅವಳ ನರ್ತನ ಚೆನ್ನಾಗಿರಲಿಲ್ಲವೇ? ಸಭೆಗೆ ಸಭೆಯೇ ಆನಂದಿತವಾಯಿತು. ಆದರೆ ಕೊನೆಗೆ ಆ ದುರ್ದೈವವು ಸಂಭವಿಸಬಾರದಿತ್ತು. ಮುಖ್ಯ ಅವಳನ್ನು ಬರಮಾಡಿದ ನನಗೇ ತೀರ ಕೆಟ್ಟದ್ದೆನಿಸಿತು" ಎಂದನು. ಮಹೇಶನು ಸುಮ್ಮನಾದನು. ಸ್ವಲ್ಪ ಹೊತ್ತಿನ ತನಕ ವೀರೇಶನ ಮೋರೆಯನ್ನು ನೋಡುತ್ತ—'ಗೆಳೆಯಾ, ನನ್ನ ಮಾತಿನಿಂದ ಸಿಟ್ಟಲ್ಲವಷ್ಟೆ. ಇಂಥ ಶುಭಕಾರ್ಯಗಳಿಗೆ ವೇಶ್ಯೆಯರನ್ನು ಬರಮಾಡಿಸುವದರಿಂದ ಎಷ್ಟೆಲ್ಲ ಅನರ್ಥಗಳಿವೆಯೆಂದು ನಿನಗೆ ತಿಳಿಯದೇ?'—ಎಂದು ಹೇಳಿದನು.

"ಏಕೆ? ಇಲ್ಲದಿದ್ದರೆ ಬಂದ ಸಭಿಕರ ಮನಸ್ಸನ್ನು ಸಂತೋಷಿಸಲು ಬರುತ್ತಿತ್ತೆ?"

"ಗೆಳೆಯ, ಅದೊಂದು ಸಂತೋಷವೇ? ನೀನಾ ಪ್ರೇಕ್ಷಕರ ಬಾಯಿಯಿಂದ ಹೊರಡುತ್ತಿದ್ದ ಮಾತುಗಳನ್ನು ಕೇಳಲಿಲ್ಲವೇ? ಏನೇನು ಅಸಹ್ಯವಾದ ನುಡಿಗಳನ್ನವರಾಡುತ್ತಿದ್ದರು. ಮದುವೆಗೆ ಬಂದ ಮುಕ್ಕಾಲು ಪಾಲು ಜನರ ಮನಸ್ಸೆಲ್ಲ ಕಲುಷಿತವಾಯಿತು. ಮದುವೆಗೆ ಬರುವುದು ಅದಕ್ಕೇನು? ನವವಧೂವರರ ಜೀವನ, ಅವರ ಪ್ರತಿಜ್ಞೆಗಳನ್ನು ನಿರೀಕ್ಷಿಸಿ ವಿವಾಹಿತರ ಶುದ್ಧ ಕರ್ತವ್ಯ ಪಾಠವನ್ನರಿಯಲಿಲ್ಲವೇ?

"ಬಿಡಪ್ಪಾ, ಅದೆಲ್ಲಾ ಒಂದಾನೊಂದು ಕಾಲದ ಕಥೆಯು."

"ವೀರೇಶಾ, ಅವಳು ನಿನ್ನ ತಂಗಿಯೊಬ್ಬಳಾಗಿದ್ದರೆ ನೀನು ಹೀಗೆ ಹೇಳುತ್ತಿದ್ದೆಯಾ? ಜನರು ಅವಳ ವಿಷಯದಲ್ಲಿ ಭಂಡು ಮಾತುಗಳನ್ನಾಡುತ್ತಿದ್ದುದನ್ನು ಕೇಳುತಿದ್ದೆಯಾ?"

"ತಂಗಿಯಾಗಿದ್ದರೆ . . . . ? ಅವಳೀಗ ವೇಶ್ಯೆಯಲ್ಲವೇ. ಅವರ ಜೀವನವೇ ಇಂಥ ಕೆಲಸಗಳಿಗಾಗಿ ಅರ್ಪಣವಾದುದು."

"ಹಾಗಿದ್ದರೆ ಗೆಳೆಯ—ಇನ್ನೊಂದು ಮಾತನ್ನು ಹೇಳುವೆ. ಜನ್ಮವು ನಮ್ಮ ಸ್ವಾತಂತ್ರ್ಯದಲ್ಲಿದೆಯೇ? ಮರಣವು ಇದ್ದಷ್ಟೆ ಜನ್ಮವು. ದೇವರು ಹುಟ್ಟಿಸಿದಲ್ಲಿ ಹುಟ್ಟುವುದು ನಮ್ಮ ಕೆಲಸ."

"ನಾವಾದರೂ ಅದೇ ಕುಲದಲ್ಲಿ ಹುಟ್ಟಬಾರದೆಂದಿದೆಯೇ?"

“ಅದು ದೇವೇಚ್ಛೆ . . . .

“ಹಾಗಾದರೆ ದೈವೇಚ್ಛೆಯಿಂದ ನಾನಾಗಲೀ ನೀನಾಗಲಿ ಆ ನರ್ತಕಿಯ ಅಣ್ಣನೋ ತಮ್ಮನೋ ಆಗಿ ಹುಟ್ಟಿದ್ದರೆ. . . . ನಮ್ಮ ಕಿವಿಗಾಗ ಈ ಮಾತುಗಳು ಕೇಳಿಸಿದರೆ ಹೇಗಾಗಬಹುದು?”

ವೀರೇಶನ ಬಾಯಿಯಿಂದ ಉತ್ತರವು ಹೊರಡಲಿಲ್ಲ. ಅದಕ್ಕೆ ಉತ್ತರವನ್ನು ಕೊಡಲು ಅವನು ಯತ್ನಿಸಲೂ ಇಲ್ಲ.

“ಮುಖ್ಯವಾಗಿ ನಾನನ್ನುವುದಿಷ್ಟೆ. ಮೂರ್ಖ ಪುರುಷರು ವ್ಯಭಿಚಾರದ ದುರಾಚಾರವನ್ನು ನಡೆಸುತ್ತಿರುವರೆಂದು, ನಮ್ಮ ನಿಮ್ಮಂಥವರು ಅದರ ಪ್ರಚಾರಕ್ಕೆ ಹೊರಡಬೇಕೆ? ಅಂಥವರನ್ನು ಸಮಾಜದಲ್ಲಿ ತಂದು ಗಾನನರ್ತನಗಳಿಂದ ಮೆರವಣಿಗೆ ಮಾಡಬೇಕೆ?”

ಹೆಚ್ಚಿನ ಮಾತುಗಳನ್ನಾಡುವುದು ಅವನಿಗೆ ಯುಕ್ತವೆಂದು ತೋರಲಿಲ್ಲ. ವೀರೇಶನೂ ಬಾಯಿತೆರೆಯಲಿಲ್ಲ. ಒಂದು ತಾಸಿನ ವರೆಗೆ ಅವರಿಬ್ಬರೂ ಅಲ್ಲಿಯೇ ಮೂಕರಂತೆ ಕುಳಿತಿದ್ದರು. ಕೊನೆಗೆ ರಾತ್ರಿ ಬಹಳವಾದುದರಿಂದ ಮಲಗಲು ಹೊರಟು ಹೋದರು. ಐದನೆಯ ದಿನ ವೀರೇಶನೂ ಮಾವನ ಜತೆಯಲ್ಲಿ ಹೆಂಡತಿಯ ಮನೆಗೆ ಹೋಗಬೇಕು. ಅದರೊಳಗೆ ಮಾಲತಿಯ ದರುಶನವನ್ನು ಮಾಡಿಕೊಂಡು ಬರುವ ಲವಲವಿಕೆ ಅವನಿಗೆ. ಆದರೆ ಮದುವೆಯ ಸಮಾರಂಭದ ಶುಭ ಗಳಿಗೆಯಲ್ಲೇ ತನ್ನ ನಡತೆಯು ಅವರಿಗೆ ತಿಳಿ-

ದರೆ— ಎಂಬ ಅಂಜಿಕೆಯಾಯಿತು. ಅಷ್ಟೇ ಅಲ್ಲ, ಅವನ ಬೆನ್ನನ್ನು ಮಹೇಶನು ಬಿಡುತ್ತಲೇ ಇದ್ದಿಲ್ಲ. ಈ ಕಾರಣಗಳಿಂದವನು ಹೊರಡುವ ಮುಂಚಿತವಾಗಿ ಅವ ಳಿಗೆ ತಾನು ಶಿವೊಗ್ಗೆಗೆ ಹೋಗುವೆನೆಂದೂ ಇನ್ನೊಂದೆ ರಡು ದಿನಗಳಲ್ಲಿಯೇ ಮರಳುವೆನೆಂದೂ ಪತ್ರ ಬರೆದನು. ಮಾಲತಿಗೆ ಸ್ವಲ್ಪ ವ್ಯಾಧಿಯಾಗಿದೆಯೆಂದು ತಿಳಿದಿ ದ್ದರೆ ಅವನು ಶಿವೊಗ್ಗೆಗೆ ಹೊರಡುತ್ತಲೇ ಇದ್ದಿಲ್ಲ. ಆ ಕಾರಣದಿಂದ ನಾಲ್ಕಾರು ದಿನಗಳಿಂದ ಕಾಯಿಲೆಗೆ ಬಲಿಯಾದ ಅವಳು ಈ ಸುದ್ದಿಯನ್ನವನಿಗೆ ತಿಳಿಸಲೇ ಇಲ್ಲ. "ಸಾಧಾರಣ ಕ್ಷೇಮ"ವಾಗಿದೆ ಎಂದೇ ತಿಳಿಸಿ ರುವಳು.

ಮಹೇಶನು ಶಿವೊಗ್ಗೆಗೆ ಹಿಂದಿರುಗುವ ಯೋಚ ನೆಯನ್ನು ಬಿಟ್ಟು ಒಂದೆರಡು ದಿನ ಬೆಂಗಳೂರಲ್ಲೆ ಕಳೆ ಯುವ ನಿಶ್ಚಯ ಮಾಡಿದನು. ಆರನೆಯ ದಿನವಿದು. ಮದುವೆ ಮುಗಿಯಿತು; ನಂಟರು ತೆರಳಿದರು. ಜತೆ ಯಲ್ಲಿ ವೀರೇಶನೂ ಹೋಗಿದ್ದನು. ಮಹೇಶನು ಮೆಲ್ಲನೆ ಮಲ್ಲೇಶ್ವರದ ಕಡೆಗೆ ಕಾಲು ಹಿಡಿದನು. ವೀರೇಶನ ಬಾಯಿಯಿಂದ ಅವನು "ಹಮಾಮಹಲಿನ" ಹೆಸರನ್ನು ಕೇಳಿದ್ದನು. ಅದನ್ನು ಹುಡುಕಾಡುವ ಕೆಲಸವು ಅವನಿಗೆ. "ಹಮಾಮಹಲು" ಎಂದು ಹೆರವರಲ್ಲಿ ಕೇಳಿದರೆ ಬೇಗ ಸಿಗುತ್ತಿತ್ತೋ ಏನೋ, ಹಾಗೆಮಾಡಲು ಅಂಜಿ ತಾನೇ ಅಲೆಯತೊಡಗಿದನು. ಹಮಾಮಹಲೆಂಬ ಲೇಖನವನ್ನರಸುತ್ತ ಹೊರಟನು. ಆ ರಸ್ತೆ, ಈ ರಸ್ತೆ,

ಆ ಕಡೆ, ಈ ಕಡೆಯೆಂದು ಮುಹಲು ಸಿಗುವಾಗ ರಾತ್ರಿ ಒಂಭತ್ತು ತಾಸಾಗಿತ್ತು. ಸುಂದರವಾದ ಆ ಮುಹಲಿನ ಮೇಲೆ ಬೆಳ್ದಿಂಗಳು ಚೆನ್ನಾಗಿ ಪಸರಿಸಿತ್ತು. ಮೇಲೆ ಆರಾಮು ಕುರ್ಚಿಯನ್ನು ಹಾಕಿಕೊಂಡು ಮಾಲತಿಯು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದಳು. ಮಹೇಶನು ಮೆಲ್ಲನೆ ಹಿತ್ತಿಲಿನ ಒಳಕ್ಕೆ ಪ್ರವೇಶಮಾಡಿದನು. ಸುದೈವಕ್ಕೆ ಯಾರೂ ಅವನನ್ನು ಕಾಣಲಿಲ್ಲ. ಮನೆಯ ಬಾಗಿಲು ಸಹ ತೆರೆದಿತ್ತು. ಆಳುಗಳಾರೂ ಅಲ್ಲಿ ಇಲ್ಲದುದನ್ನು ಕಂಡು ಕಳ್ಳರಂತೆ ಪ್ರವೇಶಿಸಿ, ಮಹಡಿಯನ್ನೇರಿ, ಕೊನೆಗೆ ಛಾವಣಿಯ ಮೇಲೆ ಕುಳಿತ ಮಾಲತಿಯ ಬಳಿಗೆ ಹೋದನು. ಬೆಕ್ಕಿನಂತೆ, ಸದ್ದು ಮಾಡದೆ ಮುಂದರಿದು, ಅವಳ ಹಿಂದೆಯೇ ನಿಂತುಕೊಂಡನು. ಉಸಿರೆತ್ತುವ ಸಾಹಸವು ಅವನಿಗಾಗಲಿಲ್ಲ, ಅಷ್ಟರಲ್ಲೇ ಅಶ್ರುಧಾರೆಗಳು ಅವನ ಕಪೋಲಗಳನ್ನು ತೊಯ್ಯಲುಪಕ್ರಮಿಸಿದ್ದವು. ಬಲು ಸಾಹಸದಿಂದ ದುಃಖವನ್ನು ತಡೆದುಕೊಂಡು 'ಮಾಲತೀ' ಎಂದನು.

ಮಾಲತಿಗೆ ಒಮ್ಮೆಗೇ ಅದು ವೀರೇಶನ ಮೃದುಧ್ವನಿಯೆಂದು ಕಾಣಿಸಿತು. ಅದಕ್ಕವಳು ಮೋರೆ ತಿರುವುವ ಮುಂಚೆಯೇ—"ಏಕೆ ಬಂದೆ?" ಎಂದಳು. ಮಹೇಶನು ಹತಾಶನಾದನು. ಮಾಲತಿಯು ತಿರುಗಿ ನೋಡುತ್ತಾಳೆ! ನಿಂತವನು ವೀರೇಶನಲ್ಲ ಮಹೇಶನು!

ಅಲ್ಲೇ ಶಿಲೆಯಂತೆ ಕದಲದೆ ನಿಂತಳು. ಮಹೇಶನು ತಂಗಿಯನ್ನು ತಬ್ಬಿಕೊಂಡನು. ತೆರದ ಬಾಯಿಗೆ

"ತಂಗೀ, ಇನ್ನಾದರೂ ಬಾ ನನ್ನಲ್ಲಿಗೆ. ಸಾಯುವ ತನಕ ನಾನು ಹೀಗೆ ಕೊರಗಬೇಕೆನ್ನುವೆಯಾ" ಎಂದನು. ಮಾಲತಿಯೂ ಅಣ್ಣನನ್ನು ಮುದ್ದಾಡಿದಳು. ಅವನ ಕರಗಳನ್ನು ಹಿಡಿದು ಏನೋ ಹೇಳಲೆತ್ನಿಸಿದಳು. ಆದರೆ ಯಾವ ಶಬ್ದವೂ ಅವಳ ಕಂಠದಿಂದ ಹೊರಬೀಳಲು ಸಾಧ್ಯವಾಗಲಿಲ್ಲ. ಅವಳವನನ್ನು ಕರೆದುಕೊಂಡು ಕಟಾಂಜನದ ಮೇಲೆ ಕುಳಿತುಕೊಂಡಳು. ಒಂದು ತಾಸಿನ ತನಕ ಇಬ್ಬರೂ ತಿರುಗಿ ಮಾತನಾಡಲಿಲ್ಲ. ಕೊನೆಗೆ ಮಹೇಶನು ಸಾಹಸಮಾಡಿ—"ಅಮ್ಮಾ, ಬಾ, ನನ್ನ ಜತೆಯಲ್ಲಿ ಬಾ" ಎಂದನು. 'ತಂಗೀ' ಎಂಬ ಮಾತು ಸರಿದು 'ಅಮ್ಮಾ' ಎಂಬ ಪದವು ಬಂದು ನಿಂತಿದೆ. ಮಾಲತಿಗೆ ಅದರರ್ಥವು ತಿಳಿಯಿತು. ಮಹೇಶನೀಗ ಮಾಲತಿಯಲ್ಲಿ ತನ್ನ ಹೆತ್ತಾಕೆಯ ಮೋರೆಯನ್ನು ಕಾಣುತ್ತಿರುವನು. ತನ್ನ ತಾಯಿಯೇ ಈ ದುರ್ಗತಿಗೆ ಇಳಿದಿರುವಳು ಎಂದು ತಿಳಿದಿರುವನು. ಆ ಕಲ್ಪನೆಯಿಂದವನು ಬೇಯುತ್ತಿರುವನು. ತಮ್ಮತಂಗಿಯರು ಅಡ್ಡಹಾದಿಗೆ ಬಿದ್ದುದನ್ನು ನೋಡಬಲ್ಲವರಿರುವರು; ಆದರೆ ತಾಯಿಯು ಹಾಗೆ ಮಾಡಿದಳೆಂದರೆ ಮಗನು ಹೇಗಿರಬೇಕು? ಅಣ್ಣನ ದುಃಖವು ಅವಳನ್ನು ಕರಗಿಸಿತು. "ಇಲ್ಲ, ಬರುವುದಿಲ್ಲವೆಂಬ ಮಾತನ್ನು" ಅವಳು ಹಿಂದಾಡಿದಂತೆ ಆಡದಾದಳು.

ಸರಿ, ರಾತ್ರಿ ಸರಿಯಿತು. "ಅಣ್ಣಾ, ವೇಳೆಯಾಯಿತು. ಬಾ ನಿದ್ರೆಮಾಡಹೋಗುವ" ಎಂದಳು. ಮಹೇ

ಶನು ಮಲಗಲು ತಿರುಗಿ ವೀರೇಶನ ಮನೆಗೆ ಹೋಗುವ ಎಣಿಕೆಯಿಂದ ಬಂದಿದ್ದನು. ಆದರೆ ತಂಗಿಯ ಮಾತಿನಿಂದ ಅದು ಮರವೆಯಾಯಿತು. ಅವಳವನನ್ನು ತನ್ನ ಶಯ್ಯಾಗ್ರುಹಕ್ಕೆ ಒಯ್ದುಳು. ಅಲ್ಲಿ ತನ್ನ ಮಂಚದ ಮೇಲೆ ಮಲಗಿಸಿದಳು. ಅಭಾಗಿನಿಯಾದ ತಾನೂ ಅವನ ಜತೆಯಲ್ಲಿ ಮಲಗಿದಳು. ತೀರ ಚಿಕ್ಕವರಾಗಿರುವಾಗ ಅವರು ಹೀಗೆ ಮಲಗಿದ್ದರು. ಹಲವು ವರುಷಗಳ ಮೇಲೆ ಅಣ್ಣತಂಗಿಯರು ಜತೆಯಲ್ಲಿ ಮಲಗಿರುವರು. ತಾವು ಅಂದಿನ ಅಣ್ಣತಂಗಿಯರೇ, ಅಂದಿನ ಕಾಲವೇ ಇದು, ಎಂದು ಅವರೀರ್ವರ ಯೋಚನೆಯಾಗಿತ್ತು. ಒಂದೆರಡು ಬಾರಿ ಮನೆಯ ಆಳುಗಳು ಅವರನ್ನು ಕಂಡು ಹೊರಗೆ ಹೋದರು. ಅದರ ಪರವೆಯು ಅವರುಭಯತರಿಗೂ ಇದ್ದಿರಲಿಲ್ಲ.

ರಾತ್ರಿ ಸರಿದು ಬೆಳಕು ಹರಿಯಿತು. ಬಡಪಾಯಿಗಳೀರ್ವರೂ ಇನ್ನೂ ನಿದ್ರೆಯಲ್ಲೇ ಇರುವರು. ತಿರುಗಿ ನಿದ್ರೆಯೇ. ಪ್ರಾಯಶಃ ಅವರ ಜೀವನದಲ್ಲಿ ಅವರಿಂಥ ನಿದ್ರೆಯನ್ನು ಕಂಡಿರಲಿಲ್ಲ; ಇನ್ನು ಕಾಣುವರೋ ಇಲ್ಲವೋ. ಸರಿ, ಇಬ್ಬರಿಗೂ ಎಚ್ಚರವಾಗಲು, ಎದ್ದರು. ಮಾಲತಿಯು ಅಣ್ಣನ ಹೆಗಲ ಮೇಲೆ ಕೈಯನ್ನಿರಿಸಿ ಮನೆಯೆಲ್ಲವನ್ನೂ ತೋರಿಸಿದಳು. ಹೂದೋಟವನ್ನು ತೋರಿಸಿದಳು. ಅವಳ ಕಲ್ಪನೆಗೆ ಅದು ತನ್ನ ಮನೆಯ ಉದ್ಯಾನವೆಂದು ಕಾಣಿಸುತ್ತಿತ್ತು. ಆ ದಿನ ಬೆಳಗ್ಗೆ ಅವರೀರ್ವರಿಗೂ ಉಪಾಹಾರವಾಯಿತು; ಮಧ್ಯಾಹ್ನ

ಊಟವೂ ಆಯಿತು. ಊಟವಾದ ಬಳಿಕ ಅಣ್ಣನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ನಾಲ್ಕಾರು ಹಾಡುಗಳನ್ನು ಹಾಡಿದಳು. ಅವಳು ಚಿಕ್ಕಂದಿನಲ್ಲಿ ಕಲಿತ ಹಾಡುಗಳವು. ಅವಾದರೂ ಅವರ ಬಾಲ್ಯದ ನೆನಪನ್ನು ಹುಟ್ಟಿಸಿದುವು. ಅವರಿಬ್ಬರೂ, ಅವೇ ದಿನಗಳು ಇನ್ನು ಅಳಿದಿರಲಾರವೆಂದು, ತಿಳಿದರು. ಅಷ್ಟರಲ್ಲಿ ಅಂಚೆಯುವನೊಬ್ಬನು ಒಂದು ಪತ್ರವನ್ನು ತಂದುಕೊಟ್ಟನು. ಅಣ್ಣನು ಆ ಪತ್ರವನ್ನು ತೆಗೆದುಕೊಂಡನು. ತಂಗಿಗಾಗಿ ಓದಿದನು. ಎಷ್ಟೋ ಬಾರಿ ಅರಿಯದ ಆ ಹುಡುಗಿಗೆ ಅವಳ ಪೂರ್ವದ ಪತಿಯು ಬರೆದ ಕಾಗದಗಳನ್ನು ಹಾಗೆಯೇ ಓದಿದ್ದನು. ಇದು ಅಂಥದೇ ಎಂಬ ತಿಳುವಳಿಕೆಯುವನದು. ಆದರೆ ಕಾಗದವೇ ಅವರೀ ಮಂಕು ಕಲ್ಪನೆಗೆ ಮೃತ್ಯುವಾಯಿತು. ಕಾರಣ, ಅದು ವೀರೇಶನ ಕಾಗದ!

ಪ್ರಥಮಬಾರಿಗೆ, ವೀರೇಶನು ತನ್ನ ತಂಗಿಯ ನಾಯಕನು ಎಂದು ತಿಳಿಯಿತು. ಮಾಲತಿಗೆ ತಾನು ಸೂಳೆಯೆಂಬ ನೆನಪಾಯಿತು. ಇಬ್ಬರೂ ಅತ್ತರು. ಅಳುವಷ್ಟೆಲ್ಲ ಅತ್ತರು. ಸಂಜೆಯಾಯಿತು.

“ಮಾಲತಿ, ಬಾ ಇಂದು ರಾತ್ರಿ ಬಂಡಿಗೆ ಊರಿಗೆ ಹೊರಡೋಣ.”

“ಅಣ್ಣಾ, ನಾನು ಪರರಿಗೆ ಋಣಿಯು. ತನ್ನ ಜೀವನವು ಪರಸೇವೆಗೆ, ಸೀಚತರ, ಆದರೂ ಪರಸೇವೆಗೆ ಅರ್ಪಿತವಾಗಿದೆ. ಅದೊಂದನ್ನು ಕ್ಷಮಿಸು.”

"ಮಾಲತಿ, ಈ ಬಾರಿಯೂ ನಾನು ಹತಾಶನಾಗ ಬೇಕೇ?"

"ಅಣ್ಣಾ, ದುಃಖಿಸಬೇಡ. ಮಾಲತಿಯು ತನ್ನ ಪಾಪವನ್ನು ತೊಳೆದು ನಿನ್ನ ಬಳಿಗೆ ಬರುವಳಂತೆ."

## ೧೩. ಅವನಾರು?

ಈ ದಿನ ಮಾಲತಿಯ ದರುಶನಕ್ಕಾಗಿ ವೀರೇಶನು ಓಡಿಬರಲಿರುವನು. ಮದುವೆಯ ಹಾವಳಿಯಿಂದ ತಪ್ಪಿದರೆ ಸಾಕೆಂದು ಅವನಿಗೆ ತೋರಿತು. ಎಂಟು ದಿನಗಳ ವರೆಗೆ ಅವನು ಮಾಲತಿಯನ್ನು ಬಿಟ್ಟಿರಬೇಕು; ಆದರ ಬದಲು ಮೂರನೆಯ ಹುಡುಗಿಯೊಬ್ಬಳ ಬಳಿ ಕು ಳಿತಿರಬೇಕೆಂದರೆ—? ಮೂರನೆಯವಳೆಂದರೆ, ಅವನ ವಿವಾಹಿತ ಪತ್ನಿಯೇ; ಆದರೂ ಅವಳಲ್ಲಿ ಅವನಿಗೆ ಪರಿ ಚಯವಿಲ್ಲ, ಇನ್ನೂ ಗೆಳೆತನವಿಲ್ಲ. ಆದರೆ ಅವನ ನವೀನ ಪತ್ನಿ ಶರದಿನಿಯು ತೀರಾ ಬುದ್ಧಿವಂತೆ. ಅವಳಾಗಿ ಯೇ ತನ್ನ ಗಂಡನನ್ನು ಮಾತನಾಡಿಸಲು ಹಲವು ಬಾರಿ ಪ್ರಯತ್ನಪಟ್ಟಳು. ಯಾರಾದರೂ ಕಂಡರೆ ನಾಚುಗೆ ಇಲ್ಲದ ಹುಡುಗಿ ಅನ್ನುತ್ತಿದ್ದರು. ಆದರೆ ಅವಳಿಗೆ ತಾನವನ ಪರಿಚಯವನ್ನು ಬೇಗನೆ ಬೆಳೆಯಿ ಸಿಕೊಂಡು, ಅವನ ಜೀವನದ ಮೇಲೆ ಅಧಿಕಾರ ನಡೆ ಯಿಸಬೇಕೆಂದು ಹೊಳೆಯಿತು. ಅದಕ್ಕಾಗಿ ಇಲ್ಲದ ನೆಪಮಾಡಿ, ಗಂಡನೊಬ್ಬನೇ ಕುಳಿತಿರುವುದನ್ನು ಕಂಡರೆ ಅವನಲ್ಲಿಗೆ ಬರುತ್ತಿದ್ದಳು. ಮದುವೆಮನೆಯಲ್ಲಿ ಹೀಗೆ

ಮಾಡಲು ಅವಳಿಗೆ ಸಾಹಸವುಂಟಾಗಲಿಲ್ಲವಾದರೂ ತವರುಮನೆಯಲ್ಲಿ ಮಾಡತೊಡಗಿದಳು. ಇತ್ತ ವೀರೇಶನಾದರೂ, ಪರವೂರಲ್ಲಿ, ಗೆಳೆಯರಿಂದ ದೂರಾಗಿ ಮೂಕನಂತಿರಬಲ್ಲನೇ? ಶರದಿನಿಯ ಮಾತುಗಳಿಗೆ ಏನಾದರೂ ಉತ್ತರ ಕೊಡುವನು. ಇದೇ ಸಲಿಗೆಯಿಂದವಳು ಅವನಿಗೆ ಹೂಮುಡಿಸುವಳು; ಮಾತನಾಡುವಳು. ಮನೆಯ ಹಿರಿಯರಾರಾದರೂ ಕಂಡರೆ ಒಮ್ಮೆಗೆ ನಾಚುಗೆಯಿಂದ ತಲೆಬಗ್ಗಿಸಿಕೊಂಡು ಓಡುವಳು. ಅವಳಲ್ಲಿ ಮಕ್ಕಳಾಟಕೆ ತುಂಬಾ ಇತ್ತು.

ಇಂದು ಶಿವೊಗ್ಗೆಯಿಂದ ವೀರೇಶನು ಹೊರಡಲಿರುವ ಮಧ್ಯಾಹ್ನ. ವೀರೇಶನು ಉಂಡು ಮಲಗಿಕೊಂಡನು. ಅವನ ಕೊಟಡಿಯಲ್ಲಾರೂ ಇದ್ದಿರಲಿಲ್ಲ. ಅವನಿಗೂ ನಿದ್ದೆ ಬರುತ್ತಲಿದ್ದಿಲ್ಲ. ಉದ್ಯೋಗವಿಲ್ಲದ ನಿಮಿತ್ತ ಹಾಸುಗೆಯಲ್ಲಿ ಹೊರಳಾಡುತ್ತಿದ್ದನು. ಅಷ್ಟಕ್ಕೆ ಶರದಿನಿಯ ಸವಾರಿಯು ನಗುತ್ತ ಬಂದಿತು. ಬಂದವಳು ಕದವನ್ನಿಕ್ಕಿಕೊಂಡು ಅವನ ಬಳಿ ಬಂದು ಕುಳಿತಳು. ಇದರ ಚಮತ್ಕಾರವು ವೀರೇಶನಿಗೆ ಹೊಳೆಯಲಿಲ್ಲ. ಅವಳು ಇವನ ಬಳಿಯಲ್ಲಿ ಕುಳಿತುಕೊಂಡು ಇವನ ಮೋರೆಯನ್ನೇ ನೋಡತೊಡಗಿದಳು. ಆಗ ವೀರೇಶನು ದಿಂಬಿಗೆ ಒರಗಿಕೊಂಡು ಅರ್ಧ ಮಲಗಿದ್ದನು. ತನ್ನನ್ನೇ ನೋಡುವುದನ್ನು ಕಂಡು—“ಏನು, ತಿನ್ನುವಿಯೇನೆ ನನ್ನನ್ನು?” ಎಂದು ಪರಿಹಾಸ್ಯಮಾಡಿದನು.

ಶರದಿನಿಯು ನಕ್ಕಳು; ಮರುಕ್ಷಣದಲ್ಲಿ ಆ ನಗುವು ಮಾಯವಾಗಿ ತಿರುಗಿ ಮುಖವು ಗಂಭೀರಮುದ್ರೆಯನ್ನು ತಾಳಿತು.

"ಏಕೆ, ಹೀಗೆ ಬಿರುಬಿರನೆ ನನ್ನನ್ನು ನೋಡುತ್ತೀಯೇ?"

"ನಿಮ್ಮೊಡನೆ ನನಗೆ ಮಾತನಾಡಲಿದೆ."

"ಅದಕ್ಕೇ ವೇಷವು ಬೇಕೆ? ಬಾಯಿಗೆ ಬಂದಷ್ಟು ಪರಟು."

"ನೀವು ಸಿಟ್ಟಾದರೆ . . . ."

"ಸಿಟ್ಟಾಗಲು ನಾನು ಹುಚ್ಚನೇ?"

"ನನ್ನಾಣೆಯಾಗಿ ಸಿಟ್ಟಾಗುವುದಿಲ್ಲವೆನ್ನಿ . . ."

"ನಿನ್ನಾಣೆಯಾಗಿ ಆಗುವುದಿಲ್ಲ."

"ಹಾಗಾದರೆ, ನೀವು ನನ್ನನ್ನು ಪ್ರೀತಿಸುವಿರೇ?"

"ಹೀಗೇಕೆ ಕೇಳುವೆ?"

"ಮೊದಲು ನನ್ನ ಪ್ರಶ್ನೆಗೆ ಉತ್ತರ ಕೊಡಿರಿ."

"ನಾನು ನಿನ್ನ ಬಳಿ ಇರತೊಡಗಿ ಎಂಟು ದಿನಗಳಾದುವಷ್ಟೆ. ಅಷ್ಟರಲ್ಲೇ ಏನು ಹೇಳಲು ಬರುವುದು?"

"ಅಂದರೆ ಮದುವೆಯಾಮುದೇತಕ್ಕೆ? ಪ್ರೀತಿಸುವುದಕ್ಕಲ್ಲವೇ?"

"ಹಾಗಾದರೆ ನಿನ್ನನ್ನು ಪ್ರೀತಿಸಲೆತ್ನಿಸುವೆನು. ಈಗ ಏನು ಮಾಡುತ್ತಿರುವೆ ಎಂದು ನನಗೇ ತಿಳಿಯದು."

"ನಿಜವೇ?"

“ನಿಜ; ಇರಲಿ. ಈಗ ಹೇಳು—ಈ ಪ್ರಶ್ನೆಯು ಏತಕ್ಕೆ ಹೊರಟತೆಂದು!”

“ಸಿಟ್ಟಿಲ್ಲವಷ್ಟೆ.”

“ಹುಚ್ಚಿಯಂತೆ ತಿರುಗಿ ಆ ಪ್ರಶ್ನೆ ಕೇಳಬೇಡ.”

“ಇಲ್ಲ, ತಪ್ಪಾಯಿತು. ನಿಮ್ಮ ಮದುವೆಯ ಮೊದಲಿನ ದಿನ ನಿಮ್ಮ ಬಳಿ ಕುಳಿತಾಗ ನನ್ನ ಮೋರೆಯನ್ನು ಕಂಡಿದ್ದಿರೇ?”

“ಇಲ್ಲ--- ನೀನು ತಲೆಬಗ್ಗಿಸಿಕೊಂಡಿದ್ದರೆ ನಾನೇನು ಇಣಿಕಿ ನೋಡಬೇಕೆ?”

“ಆಗ ನಾನೇನು ಮಾಡುತ್ತಿದ್ದೆನೆಂದು ನಿಮಗೆ ತಿಳಿದಿದೆಯೋ?”

“ಇಲ್ಲ.”

“ನಿಮ್ಮನ್ನು ನೋಡುತ್ತಿದ್ದೆ, ಮತ್ತು . . . .?”

“ಮತ್ತು ?”

“ಅಳುತ್ತಿದ್ದೆ.”

“ಏಕೆ?”

“ನಿಮ್ಮ ದೃಷ್ಟಿಯು ಆ ನರ್ತಕಿಯ ಮೇಲೆ ನೆಲಸಿದುದನ್ನು ಕಂಡು ನನ್ನನ್ನು ನೀವು ಪ್ರೀತಿಸುವುದು ಅಸಾಧ್ಯವೆಂದು. . . . . ”

ಪಾಪದ ಶರದಿನಿಯು ಅತ್ತುಬಿಟ್ಟಳು. ತನ್ನ ಪತಿಯ ಪಾದಗಳನ್ನು ಹಿಡಿದು, “ನನ್ನನ್ನು ನೀವು ಹಳ್ಳಕ್ಕೆ ಎಸೆಯುವುದಿಲ್ಲವಷ್ಟೆ?”—ಎಂದಳು.

ವೀರೇಶನಿಗೆ ನಾಚುಗೆಯಾಯಿತು; ಅಂತರಂಗ

ಧಲ್ಲಿ ಹುಡುಗಿಯ ದಿಟ್ಟತನವನ್ನು ಕಂಡು ಸಿಟ್ಟೂ ಆಯಿತು. ಆದರೆ, ಅವುಗಳನ್ನು ಹೊರಗೆಡಹುವಷ್ಟು ಮೂರ್ಖನು ಅವನಲ್ಲ. ಆದರಿಂದವನು ಬಾಲಕಿಯ ಬೆನ್ನು ಚಪ್ಪರಿಸುತ್ತ—“ಶರದಿನಿ, ಸುಮ್ಮನೆ ಹುಚ್ಚು ಹುಚ್ಚು ಕಲ್ಪನೆಗಳನ್ನು ಮಾಡಿಕೊಳ್ಳಬೇಡ. ಇನ್ನು ಮುಂದೆ ನಿನ್ನನ್ನು ತುಂಬಾ ಪ್ರೀತಿಸುವೆ. ಹೇಗೂ ನೀನು ನಮ್ಮ ಮನೆಗೆ ಬರುವವಳಲ್ಲವೆ; ಆಗ ನಿನಗೆ ನನ್ನ ಪ್ರೇಮವೆಂಥದೆಂದು ತಿಳಿದೀತು”—ಎಂದನು. ಶರದಿನಿಗೆ ಆಕಾಶವೇ ಕೈಗೆ ದೊರೆತಷ್ಟು ಆನಂದವಾಯಿತು. ಅವಳು ತೀರ ಸುಖಿಯಾದಳು.

ಸರಿ. ಸಂಜೆಯು ಬರಲು ತಿರುಗಿ ಊಟಮಾಡಲು ಆಗ್ರಹಪಡಿಸಿದರು. ಬೇಗ ರೈಲುಬಂಡಿಗೆ ಹೋಗಬೇಕಲ್ಲ. ಸರಿ, ಶರದಿನಿ ವೀರೇಶರಿಗೆ ಮಣೆ ಹಾಕಿ ಬಡಿಸಿದರು. ಹಸಿವಿಲ್ಲದಿದ್ದರೂ ಅಳಿಯರಾಯನು ಊಟ ಮಾಡತೊಡಗಿದನು. ಶರದಿನಿಯು ಅವನ ಮೋರೆಯನ್ನು ಕದ್ದು ಕದ್ದು ನೋಡುವಳು, ನಗುವಳು.

ಊಟವಾಗಿ, ಉಡುಗೆಯನ್ನೆಲ್ಲಾ ಧರಿಸಿಯಾಯಿತು. ಹೊರಡುವ ಸಿದ್ಧತೆಯೂ ಆಯಿತು. ಅಳಿಯರಾಯನು ಮೋಟಾರಿನ ಮೇಲೆ ಕುಳಿತನು. ಶರದಿನಿಯೇನು ಗಂಡನ ಜತೆಯಲ್ಲಿ ಹೋಗುವವಳಲ್ಲ. ಅವಳು ಅವನನ್ನು ನೋಡುತ್ತಲಿದ್ದಳು. ತಾಯಿಯ ಹೇಳಿಕೆಯಂತೆ ಬಂಡಿಯು ಬಿಡುವ ಮೊದಲು ಪತಿರಾಯನಿಗೆ ಅಭಿವಂದನೆಮಾಡಲು ಹೋದಳು. ಅಲ್ಲೇ

ನಮಸ್ಕರಿಸುವಾಗ ತನ್ನೊಂದು ಉಂಗುರವನ್ನು ಅವನ ಪಾದಗಳ ಮೇಲೆ ಬಿಟ್ಟು ಬಂದಳು. ಬಳಿಕ ಮಾಲತಿ ಯಲ್ಲಿಗೆ ವೀರೇಶನು ಬಂದೇಬಂದನು. ಅವನ ಸ್ವಾಗ ತಕ್ಕೆ ಅವಳು ನಗನಗುತ್ತ ಬಂದಳು. ಆದರೆ ತನ್ನ ನಗುವಿಗೆ ಪ್ರತಿಯಾಗಿ ವೀರೇಶನ ಮೋರೆಯು ತೀರ ಸಪ್ಪೆಯಾಗಿ ಕಾಣುತ್ತಿತ್ತು. ಅಲ್ಲಲ್ಲಿ ಸಿಟ್ಟು ಅಡಗಿ ಕೊಂಡು ಇಣುಕುತ್ತಿದ್ದಂತೆಯೂ ಕಂಡಿತು. ಅವನು ಮಾತನಾಡದೆ ಒಳಕ್ಕೆ ಪ್ರವೇಶಿಸಿದನು. ಅವಳ ಕೈ ಯನ್ನು ಹಿಡಿದುಕೊಂಡು ಶಯ್ಯಾಗ್ರಹಕ್ಕೆ ಹೋದನು. ಇಬ್ಬರೂ ಕುಳಿತುಕೊಂಡರು. ಇನ್ನೊಂದು ಪ್ರಸಂಗ ದಲ್ಲಾದರೆ ಅವನು—“ಮಾಲತಿ, ಅಂದು ಮೂರ್ಛಿತೆ ಯಾದೆಯೇಕೆ?”—ಎಂದು ಕೇಳುವವನು; ಇಲ್ಲದಿ ದ್ದರೆ—“ಈಗ ಆರೋಗ್ಯ ಹೇಗಿದೆ?” ಎಂದಾದರೂ ಕೇಳುತ್ತಿದ್ದನು. ಆದರೆ ಈ ಬಾರಿ ಯಾವ ಸೊಲ್ಲೂ ಇಲ್ಲ. ಅವನಿಗೇಕೋ ಬೇಸರವಾಗಿದೆಯೆಂದು ಮಾಲ ತಿಯು ತಿಳಿದುಕೊಂಡು—“ಎಲ್ಲಾ ಸೌಖ್ಯವೇ,” ಎಂದು ಕೇಳಿದಳು.

“ಹೂಂ.”

“ಅದೇನು, ಇಂದು ಹೆಚ್ಚಿನ ಧ್ವನಿ ಹೊರಡುವು ದಿಲ್ಲ?”

“ಈ ಮಂಚದ ಮೇಲೆ ಕುಳಿತುಕೊಂಡುದರಿಂದಿರ ಬಹುದು.”

“ಇದರಲ್ಲಿ ಭೂತಪಿಶಾಚಿಗಳಿವೆಯೇ?”

"ಅವುಗಳ ಸಂಚಾರವಾಗಿತ್ತೆಂದು ಕೇಳಿದೆ."

ಇದರ ಅರ್ಥವು ಮಾಲತಿಗೆ ಹೊಳೆಯಲಿಲ್ಲ. ಅವಳು ತಿರುಗಿ ನಗುತ್ತ—"ಹೂಂ—ನಾಟಕ ಸಾಕು. ಮದುವೆ ಸುದ್ದಿ ಹೇಳಿರಿ. ಮಾವನ ಮನೆಯವರ ಉಪಚಾರ ಹೇಗಿತ್ತು? ಶರದಿನಿಯು ಒಳ್ಳೇ ಹುಡುಗಿಯೇನು?"

"ನೋಡು, ಅವಳು ನನಗೇ ಉಂಗುರವನ್ನು ಕೊಟ್ಟಳು."

"ಹಾಗಾದರೆ, ತೀರ ಚತುರೆಯಿರಬೇಕು."

"ನಿನ್ನಷ್ಟು ಚತುರೆಯಲ್ಲ."

"ನನ್ನಷ್ಟು ಚತುರೆಯರು ಈ ಪ್ರಪಂಚದಲ್ಲೇ ಇಲ್ಲ."

"ಹತ್ತು ಸಾರಿ ಹೇಳು, ಆ ಮಾತನ್ನು."

"ನೂರು ಸಾರಿ ಹೇಳಲೂ ಸಿದ್ಧಳಿರುವೆ."

"ಮಾಲತಿ—ಹಾಸ್ಯವು ಸಾಕು. ಈ ಮನೆಯಲ್ಲಿ ಭೂತದ ಸಂಚಾರವಾಗುತ್ತಿದೆಯೆಂದು ಕೇಳಿದೆ; ನಿಜವೇ."

"ನಾನೂ ನೀವೂ ಭೂತಗಳಾದರೆ ಇಲ್ಲಿ ಅವುಗಳ ಸಂಚಾರ ತುಂಬಾ ಇದೆ."

"ಮಾಲತಿ, ನನಗೆ ಪರಿಹಾಸ್ಯವು ಬೇಡ. ಇದೇ ಶಯ್ಯೆಯಲ್ಲಿ ಇನ್ನೋರ್ವ ಪ್ರಾಣಿಗೆ ನೀನು ಅವಕಾಶವನ್ನು ಕೊಟ್ಟಿರುವೆಯಂತೆ. ನಿಜವೇ?"

"ನಿಜವಾದರೆ . . . . ?"

" 'ನಿಜವಾದರೆ' ಎಂದು ಕೇಳುವ ಸಾಹಸವು ಬಂ

ದಿತೇ ನಿನಗೆ? ಮಾಲತಿ, ನಿನಗಾಗಿ ಇಷ್ಟು ಪ್ರಯಾಸ ಪಟ್ಟ ನನ್ನನ್ನು ವಂಚಿಸಲು ಹೊರಟಿರುವೆಯಾ?”

“ಅಷ್ಟೇ ಸರಿಯೇ?”

“ ‘ಅಷ್ಟೇ ಸರಿಯೆ’, ಎಂದರೆ-ಈ ಅಪರಾಧವು ಸಾಲದೇ? ಇದು ವೇಶ್ಯೆಯ ಕೃತಘ್ನತೆಯ ಹೆಗ್ಗುರು ತೆಂಬುದಕ್ಕೆ ಸಾಕ್ಷಿಯಲ್ಲವೇನು?”

“ವೇಶ್ಯೆಯಾದವಳಲ್ಲಿ ಕೃತಜ್ಞತೆಯಿದೆಯೆಂದು ತಿಳಿಯುವವರು ಮೂರ್ಖರು.”

“ನಿಜ, ಮೂರ್ಖರು. ಶರದಿನಿಯು ತಕ್ಕ ಕಾಲದಲ್ಲಿ ನನ್ನನ್ನು ಎಚ್ಚರಿಸಿದಳು.”

“ಹಾಗಾದರೆ, ಅವಳು ಬಹು ಜಾಣೆ ನಿನ್ನ ಮದುವೆಯ ದಿನವೇ ನನಗದು ತಿಳಿದಿತ್ತು. ನಾನಾಗ ಅವಳ ಮೋರೆಯ ಮೇಲೆ ಅಳುವನ್ನು ಕಂಡಿದ್ದೆ. ಅವಳ ಸುಖಕ್ಕೆ ನಾನೆಲ್ಲಿ ಅಡ್ಡಬರುವೆನೋ ಎಂದು ತಿಳಿದು ಅಂಜಿದೆ. ಅವಳಿಗಾಗಿ ನಾನು ಬೇರೆ ಹಾದಿಯನ್ನು ಹಿಡಿಯಬೇಕಾದೀತೋ ಎಂದು ಯೋಚನೆಯಾಯಿತು ನನಗೆ.”

“ಅದಕ್ಕಾಗಿ ಬೇರೆಯವರಿಗೆ ನಿನ್ನ ಶಯ್ಯೆಯಲ್ಲಿ ಪಾಲುಕೊಟ್ಟೆಯೇನು? ‘ರಾಕ್ಷಸೀ’ ‘ರಾಕ್ಷಸೀ’ — ಎಂಥ ಸವಿಮಾತುಗಳು!”

“ತನ್ನ ಪ್ರೇಮಿಯನ್ನು ವಂಚಿಸಿ, ಪರಪುರುಷನನ್ನು ಕರೆದವಳಿಗ ಬೇರೆ ಏನು ಹೆಸರಿದೆ” “ರಾಕ್ಷಸೀ – ಇದೇ ಸರಿಯಾದ ಹೆಸರು” ಹೀಗೆಂದು ಮಾಲತಿಯು ಅಳತೊ

ಡಗಿದಳು. ಇದೆಲ್ಲ ವೇಶ್ಯೆಯ ವಂಚನೆಯ ಮಾರ್ಗ ಗಳೆಂದು ವೀರೇಶನು ತಿಳಿದನು. ಅವನ ಕೋಪವು ಈ ಕಣ್ಣೀರಿನಿಂದ ಶಾಂತವಾಗುವಂತಿಲ್ಲ. ಅವನಿಂದು ಇವಳ ಬಾಯಿಯಿಂದೇ ಆ ನೀಚನಾರೆಂದು ತಿಳಿಯಲು ಬಯಸುತ್ತಿರುವನು. ಆದರಿಂದ ತಲೆಬಗ್ಗಿಸಿಕೊಂಡು ಅಳುತ್ತಿರುವ ಅವಳ ಪೋರೆಯನ್ನೆತ್ತಿ – "ಮಾಲತಿ, ನನ್ನಂಥವನಲ್ಲಿ ನೀನು ವಂಚನೆಯನ್ನು ಮಾಡುವವಳಾ ದೆಯಾ" – ಎಂದನು. "ವಂಚನೆಯೇ? ನಿಮ್ಮನ್ನು ವಂಚಿಸುವುದೇ? ಯಾರು ಹಾಗೆ ಹೇಳಿದರು?"

"ಯಾರು? ನಿಮ್ಮಿಬ್ಬರನ್ನು ಜತೆಯಲ್ಲಿ ಕಂಡ ಮನೆಯ ಆಳುಗಳು!"

"ದೇವರು ಅವರಿಗೆ ಕಣ್ಣುಗಳನ್ನಿತ್ತುದು ಸಾರ್ಥಕ ವಾಯಿತು."

"ನನಗಾ ವ್ಯಂಗ್ಯೋತ್ತರಗಳು ಬೇಕಿಲ್ಲ."

"ಮತ್ತಿನ್ನೇನು ಬೇಕು?"

"ನೀನು ನಿನ್ನ ಹಾಸುಗೆಯ ಅರ್ಧವನ್ನು ನನ್ನ ಆಶ್ರ ಯದಲ್ಲಿರುವಾಗಲೇ ಅನ್ಯರಿಗೆ ಇತ್ತುದು ನಿಜವೇ–ಎಂದು"

"ನಿಜವಾದರೆ . . . . ?"

"ನಿಜವಾದರೆ — ಉದ್ಘಟಿ — ನನ್ನ ನಿನ್ನ ಋಣಾನು ಬಂಧವು ಕಡಿಯಿತು"

"ಒಂದು ಸಂತೋಷದ ವಿಷಯ."

"ನಿಜವೇ ಹೇಳು . . . . "

"ನಿಜ. ತೀರ ನಿಜ . . . . "

"ನಾನಿರುತ್ತ ಅವನು ನಿನಗೇನಾಗಬೇಕು?"

"ಅದನ್ನು ಹೇಳಲಾರೆ"

"ನನ್ನಾಣೆಯಿದೆ."

"ಆದರೂ . . . . ಇಲ್ಲ . . . ಇಲ್ಲ . . . ."

"ಅದೊಂದನ್ನು ಕೇಳಬೇಡಿರಿ—"

"ಇಷ್ಟೆಲ್ಲ ಮಾಡಲು ನಾಚುಗೆ ಇಲ್ಲದ ನಿನಗೆ ಹೇಳಲು ನಾಚುಗೆಯೇನು?"

"ನಾಚುಗೆಯನ್ನು ಬಿಟ್ಟವರೇ ಈ ಉದ್ಯೋಗಕ್ಕೆ ಬರುವರು."

"ಹಾಗಾದರೆ ಬೊಗಳು—"

"ಇಲ್ಲ. ಹೇಳುವುದಿಲ್ಲ."

ಗದರಿಸುತ್ತ—"ಹೇಳುವಿಯೋ ಇಲ್ಲವೋ."

"ಹೇಳಬೇಕೇ?"

"ಹೇಳಲೇಬೇಕು."

"ನಿಮಗೆ ಅಸಂತೋಷವಾದರೆ . . . ."

"ನನಗೀಗ ಆದುದು ಸಾಕು; ಇನ್ನು ಅದಕ್ಕಿಂತ ಹೆಚ್ಚಿಗೆ ಆಗುವುದೇನು?"

"ಅವನು ನನ್ನ ಒಡಹುಟ್ಟಿದ ಅಣ್ಣನು; ನನ್ನ ಮಹೇಶನು. ಸೂಳೆಯಾದ ನನ್ನನ್ನು ತಿರುಗಿ ಮನೆಗೆ ಬಾ ಎಂದು ಬೇಡಲು ಬಂದ ನನ್ನ ಮಹೇಶನು."

**(೧೪) ಇಂದಿಗೆ ಮುಗಿಯಿತು; ನಮ್ಮ ಗೆಳೆತನ.**

ಏಳು ವರುಷಗಳು ಸಂದುವು. ಮಾಲತಿಗೀಗ ಇಪ್ಪತ್ತನಾಲ್ಕನೆಯ ವಯಸ್ಸು. ಆವಳೀಗ "ಹವಾ

ಮಹಲಿನ ರಾಣಿಯಾಗಿರುವಳು. ಅವಳ ಸುಖವು ಅದೇ ರೀತಿಯಿಂದಿದೆ. ದಾಸದಾಸಿಯರು, ಉಡುಗೆ ತೊಡುಗೆ — ಯಾವುದಕ್ಕೂ ಕೊರತೆಯಿಲ್ಲ. ವೀರೇಶನೂ ಬೆಂಗಳೂರಿನಲ್ಲಿ ಕೀರ್ತಿಶೀಲನಾಗಿ ಬದುಕುತ್ತಿರುವನು. ಆದರೆ ಅವನ ಹಿರಿಯರು ಸಂಸಾರಯಾತ್ರೆಯನ್ನು ಮುಗಿಸಿ ಇಂದಿಗೆ ಎರಡು ವರುಷಗಳಾದುವು. ಅವನೀಗ ಮಾಲತಿಯಲ್ಲಿಗೆ ಬೇಕಾದಾಗ ಬರುವುದಕ್ಕೂ ಹೋಗುವುದಕ್ಕೂ ತೀರ ಸ್ವತಂತ್ರನು. ಯಾರ ಅಂಜಿಕೆಯೂ ಇಲ್ಲವೆನ್ನಬಹುದು; ಆದರೆ ಶರದಿನಿಯೊಬ್ಬಳಿರುವಳು. ಅವಳು ತನ್ನ ಜಾಣ್ಮೆಯಿಂದ ವೀರೇಶನ ಪ್ರೇಮವನ್ನು ಗಳಿಸುವುದರಲ್ಲಿ ಜಯಶೀಲೆಯಾಗಿರುವಳು. ಆದುದರಿಂದ ಅವಳು ತೀರಾ ಸುಖಿಯು. ಅವಳಂತೆ ಮಾಲತಿಯಾದರೂ, ವೀರೇಶನ ಬಳಿಯಲ್ಲಿ ತೀರ ಸುಖಿಯಾಗಿರುವಳು.

ಇಂದು ಬುಧವಾರ. ಮಾಲತಿಯು ತನ್ನ ನಡುಮನೆಯಲ್ಲಿ ಹಾಡುತ್ತ ಕುಳಿತಿರುವಳು. ಅಷ್ಟರಲ್ಲಿಯೇ ಚಿಕ್ಕ ಬಾಲಕನೊಬ್ಬನು ಅವಳ ಬಳಿಗೆ ಓಡಿಬಂದನು. ಅವನಿಗೆ ಐದು ವರ್ಷ ಪ್ರಾಯ. ಸಾಲೆಗೆ ಹೋಗತೊಡಗಿ ಒಂದೆರಡು ವಾರಗಳಾಗಿರುವವಷ್ಟೆ. ಬಾಲಕನು ಸುಂದರನು; ಮಾತುಗಳು ಮಧುರ; ಆದರೆ ವಿಧಾತನು ಒಂದು ಕೊರತೆಯನ್ನು ಮಾತ್ರ ಅವನಲ್ಲಿ ಉಂಟು ಮಾಡಿರುವನು. ಎರಡು ಕಣ್ಣುಗಳು ಅವನಿಗಿದ್ದರೆ ಅನರ್ಥವಾಗಬಹುದೆಂದು ತಿಳಿದು, ಒಂದೇ ಕಣ್ಣನ್ನು

ಕೊಟ್ಟಿರಬೇಕು. ಅವನೇ ಮಾಲತಿ ವೀರೇಶರ ರಮೇಶನು

ಮಗುವನ್ನು ಕಂಡು ಮಾಲತಿಯು—"ರಮೇಶಾ, ಸಾಲೆ ಬಿಟ್ಟಾಯಿತೇ?" ಎಂದು ಕೇಳಿದಳು. ಹುಡುಗನು ಅಹುದೆಂದು ಉತ್ತರವಿತ್ತನು. ಅವನು ಬಂದವನೇ ತಾಯಿ ಬಳಿಗೆ ಓಡಿಹೋಗಿ—"ಅಮ್ಮಾ, ಅಮ್ಮಾ" ಎಂದಳತೊಡಗಿದನು. ತಾಯಿಗೆ ಅಳುವಿನ ಕಾರಣವು ತಿಳಿಯಲಿಲ್ಲ. "ತಿಂಡಿ ಬೇಕೇ"—"ಆಟದ ಗೊಂಬೆ ಬೇಕೇ" ಎಂದು ಕೇಳಿದಳು ಆದರೂ ಹುಡುಗನು ಅಳುತ್ತಲಿದ್ದನು. ಅವನ ದುಃಖವನ್ನು ಸಮಾಧಾನ ಪಡಿಸುವುದು ತಾಯಿಗೆ ತೀರ ಕಷ್ಟವಾಯಿತು. ಅವಳು ತಿರುತಿರುಗಿ —"ಏಕೆ ರಮೇಶ, ಅಳುವಿಯೇಕೆ? ಏನಾಯಿತು ನಿನಗೆ? ಯಾರು ಹೊಡೆದರು? ಹೇಳು" ಎಂದಳು.

ರಮೇಶನಾಗ ಸ್ವಲ್ಪ ತಾಳ್ಮೆಯನ್ನು ತಂದುಕೊಂಡು—"ಅಮ್ಮಾ ನನಗೆ ಅಪ್ಪನಿಲ್ಲವೇ?" ಎಂದು ಕೇಳಿದನು.

"ಮಗೂ, ಏಕೆ ಹಾಗೆ ಕೇಳುವೆ? ನಿತ್ಯವೂ ಅವರು ನಮ್ಮ ಮನೆಗೆ ಬರುತ್ತಿರುವರಲ್ಲವೇ"-ಅವರೇ ನಿನ್ನ ತಂದೆಯವರು. ನೀನೇ ಅನ್ನುತ್ತಿದ್ದೆಯಲ್ಲ. 'ನನ್ನ ಹೆಸರು ರಮೇಶ, ಅಮ್ಮನ ಹೆಸರು ಮಾಲೇಶ, ಅಪ್ಪನ ಹೆಸರು ವೀರೇಶ ಎಂದು.'

"ಅಲ್ಲವಂತೆ. ವೀರೇಶ ನನ್ನ ಅಪ್ಪನಲ್ಲವಂತೆ!"

"ಏನು ಹುಚ್ಚುಮಾತು? ಯಾರು ನಿನಗೆ ಹಾಗೆ ಹೇಳಿದರು? ಅವರು ಹೇಳಿದರೇನು?"

"ಅವರಲ್ಲ. ಸಾಲೆಯ ಹುಡುಗರು ಹೇಳಿದರು."

"ಬಿಡು ಅವರ ಮಾತನ್ನು"

"ಇಲ್ಲ ಅಮ್ಮಾ, ಅವರೆಲ್ಲರೂ ಇಂದು ನನ್ನನ್ನು ಕಂಡು ನಕ್ಕರು. ಇಂದು ಮಧ್ಯಾಹ್ನ ಉಪಾಧ್ಯಾಯರು ನನ್ನೊಡನೆ 'ನಿನ್ನ ತಂದೆಯ ಹೆಸರೇನು'? ಎಂದು ಕೇಳಿದರು. ನಾನು "ವೀರೇಶ" ಎಂದೆ. ಆಗ ಇನ್ನೊಬ್ಬ ಹುಡುಗನು ಎದ್ದುನಿಂತು "ನನ್ನ ತಂದೆಯ ಹೆಸರು ವೀರೇಶ" ಎಂದನು. ಅವನ ಹೆಸರೂ ರಮೇಶನೆಂದು. ಅವನಿಗೂ ಒಂದು ಕಣ್ಣು ಕುರುಡು. ಅವನು ನನ್ನೊಡನೆ ಜಗಳಾಡಿದನು. ನನ್ನ ತಂದೆಯು ವೀರೇಶನಲ್ಲವೆಂದೂ ಅವನ ತಂದೆಯೇ ವೀರೇಶನೆಂದೂ ಹೇಳಿದನು."

"ನಿಜವೇ?"

"ನಿಜ."

"ಹಾಗಾದರೆ ಅವನ ತಂದೆಯ ಹೆಸರೂ ವೀರೇಶನೆಂದಿರಬಹುದು. ಅದಕ್ಕೇನು ತೊಂದರೆ? ಎರಡು ರಮೇಶರು ನಿನ್ನ ಕ್ಲಾಸಿನಲ್ಲಿಲ್ಲವೇ."

"ಅಷ್ಟೆ ಅಲ್ಲ; ಎಲ್ಲ ಹುಡುಗರು ಸೇರಿ ನನಗೆ ತಂದೆಯಿಲ್ಲ — ಎಂದರು. 'ನೀನು ಸೂಳೆಯ ಮಗ' ಎಂದರು. ನಾನು ಅಳತೊಡಗಿದೆ. ಎಲ್ಲರೂ ನನ್ನನ್ನು ಕಂಡು ನಗತೊಡಗಿದರು. ಅಮ್ಮಾ, ನನಗೆ ತಂದೆಯಿಲ್ಲ ನಿಜವೇ?

ನಿತ್ಯವೂ ಮನೆಗೆ ಬರುತ್ತಿರುವ ಅವರು ನನ್ನ ತಂದೆಯಲ್ಲವೇ? ಅಮ್ಮಾ—ಸೂಳೆಯೆಂದರೇನು? ನೀನು ಸೂಳೆಯೇ?"

ಮಾಲತಿಯು ಮಗನನ್ನು ಸುಮ್ಮನಿಂಸಲು ಏನೆಂದು ಹೇಳಬೇಕು? ಅವಳಿಗೀಗ ತನ್ನ ಅಪರಾಧವು ಎಂಥ ಸೃಷ್ಟಿಯನ್ನುಂಟುಮಾಡಿದೆಯೆಂದು ತಿಳಿಯಿತು. ಅವಳು ತನ್ನ ಅಕೃತ್ಯದ ದೆಸೆಯಿಂದ ಮೂರನೆಯ ಒಂದು ಆತ್ಮವನ್ನು ನಾಚಿಕೆಯ ಸಂಸಾರದಲ್ಲಿ ಕೆಡವಿದಳು. ಹಾಗಾಗಿ ಮಗುವನ್ನು ಕಂಡು ಅಳತೊಡಗಿದಳು. ಅಷ್ಟರಲ್ಲೇ ಮಗುವಿನ ಮನಸ್ಸು ಆಟದ ಕಡೆಗೆ ಹರಿದುದರಿಂದ ಅದು ಓಡಿಹೋಯಿತು. ಮಾಲತಿಯು ಚಿಂತಾಮಗ್ನೆಯಾದಳು. ಹೊತ್ತು ಮುಣುಗಿತು. ಅಷ್ಟರಲ್ಲಿ, ಮನೆಯ ಆಳೊಬ್ಬನು ಬಂದು—"ಅಮ್ಮಾ, ಹೊರಗೆ ರಾಯರ ಮನೆಯವರು ಬಂದಿರುವರು" ಎಂದನು.

ಯಾರೆಂದು ಮಾಲತಿಗೆ ತಿಳಿಯಲಿಲ್ಲ. ಆದಕಾಗಿ "ಯಾರು?" ಎಂದು ಕೇಳಿದಳು. "ರಾಯರ ಹೆಂಡತಿ ಶರದಿನಿಬಾಯಿಯವರೂ ಅವರ ಚಿಕ್ಕ ಹುಡುಗನೂ ಬಂದಿರುವರು. ನೀವಿರುವಿರೇ?—ಎಂದು ಕೇಳಿದರು. ಏನು ಬರಹೇಳಲೇ?" ಎಂದನು. ಶರದಿನಿಯ ಹೆಸರು ಕೇಳಿ ಮಾಲತಿಗೆ ರೋಮಾಂಚವಾಯಿತು. ಉಪಾಯವಿಲ್ಲದೆ ಅವಳು - "ಬರಲಿ" ಎಂದಳು.

ಶರದಿನಿಯು ಮೋರೆಯನ್ನು ತಗ್ಗಿಸಿಕೊಂಡು ಅವಳಿರುವಲ್ಲಿಗೆ ಬಂದಳು. ಅವಳ ಆರು ವರುಷದ ಮಗ

ನೂ ಬಳಿಯಲ್ಲಿದ್ದನು. ಮಾಲತಿಯು ಎದ್ದು ನಿಂತು ಅವಳನ್ನು ಕರೆದುಕೊಂಡು ಬಂದು ಒಂದು ಮಂಚದ ಮೇಲೆ ಕುಳ್ಳಿರಿಸಿದಳು. ಅವಳಿಗೆ ತೀರ ನಾಚುಗೆ ಯಾಯಿತು. ಆದರೂ ಮಾತಾಡದಿದ್ದರೆ ಸರಿಯಲ್ಲ ವೆಂದು—"ಏನು ಬಂದಿರಿ?" ಎಂದು ಕೇಳಿದಳು.

ಶರದನಿಯು ಸರಳೆ. ಅವಳಲ್ಲಿ ಮುಚ್ಚುಮರೆ ಯಿಲ್ಲ. ಇಂದೀಗ ಅವಳಿಗೆ ಕಾರಣಾಂತರದಿಂದ ತನ್ನ ಪತಿಗೆ ಉಪಪತ್ನಿಯೊಬ್ಬಳಿರುವಳೆಂದು ತಿಳಿದಿದ. ಅವಳು ಆ ದಿನದ ನರ್ತಕಿಯೆಂದೂ ತಿಳಿಯಿತು. ಆಕೆ ಯೇ ಹವಾಮಹಲಿನ ರಾಣಿಯೆಂದೂ ತಿಳಿಯಿತು. ಆದುದರಿಂದ ಇನ್ನು ಈ ವಿಷಯದಲ್ಲಿ ಮುಚ್ಚುಮರೆ ಯಿರಬಾರದೆಂದು ಅವಳು ನೇರಾಗಿ ತನ್ನ ವಿಚಿತ್ರ ಸವತಿಯ ದರುಶನಕ್ಕೆ ಬಂದಳು "ಏನು ಬಂದಿರಿ?" ಎಂದು ಕೇಳಲು, ಅವಳು—"ನನ್ನ ಸವತಿಯನ್ನು ಕಾಣಲು" ಎಂದಳು.

ಮಾಲತಿಯ ಒಡಲಿಗೆ ಬಾಣವು ನಾಟದಂತಾ ಯಿತು. ಅವಳು ಮೋರೆ ತಗ್ಗಿಸಿ ಅಳತೊಡಗಿ ದಳು.

ಶರದಿನಿಯು—"ಸವತಿ, ಇದು ಹೀಗಾಗುವುದೆಂ ದು ನಾನು ಊಹಿಸಿದ್ದೆ. ಆದರೆ ಅವರು ಎಲ್ಲಾ ವಿಚಾ ರಗಳನ್ನು ನನ್ನಿಂದ ಮರೆಯಾಗಿರಿಸಿದ್ದರು. ನನ್ನ ವಿವಾ ಹ ಪೂರ್ವದಲ್ಲಿಯೇ ಅವರಿಗೆ ನಿನ್ನ ಗೆಳೆತನವಿತ್ತೆಂದು ಇಂದು ಸೇವಕರಿಂದ ತಿಳಿಯಲು ಶಕ್ತಳಾದೆ."

"ಅಹುದು, ನಿಮ್ಮನ್ನು ವರಿಸುವಂತೆ ಪ್ರೇರಿಸಿದವಳು ನಾನೇ?"

"ನೀನೇನು! ನಿನಗೆ ನಿನ್ನ ಸುಖಕ್ಕೆ ಬೇರೆ ಪಾಲುಗಾರರು ಬರುವುದು ಸಹನವಾಯಿತೇ?"

"ಜಗತ್ತಿನಲ್ಲಿ ನನಗೆ ಯಾರ ಮೇಲೆಯೂ ಅಸೂಯೆಯಿಲ್ಲ."

"ಅಂತೆಯೇ — ಮಾಲತಿ, — ಮಾಲತಿ ಎಂದು ನಿನ್ನ ಹೆಸರಲ್ಲವೇ?"

"ಅಹುದು."

"ಮಾಲತಿ – ನನ್ನ ಪತಿಯು ಇನ್ನು ವಂಚನೆಯಿಂದ ನಿನ್ನ ಬಳಿಗೆ ಬರಬಾರದೆಂದು ನನಗೆ ತೋರಿತು ತನ್ನ ವಿವಾಹಿತ ಪತ್ನಿಯನ್ನು ಅವರು ವಂಚಿಸುವುದು ಸರಿಯಲ್ಲ. ಅದಕ್ಕಾಗಿ—ಅವರನ್ನು ಇಲ್ಲಿಯೇ ಭೇಟಿಯಾಗುವ ಕುತೂಹಲದಿಂದ ಬಂದೆ. ನಿನಗೆ ನನ್ನ ಮೇಲೆ ಬೇಸರವಿದೆಯೇ?"

"ತಾಯಿ, ನಿಮ್ಮ ಸುಖಕ್ಕೆ ಕಲ್ಲನ್ನೆಸೆಯಲು ನಾನು ಎಣಿಸುವವಳಲ್ಲ." ಅಷ್ಟಕ್ಕೆ ಮಾಲತಿಯ ರಮೇಶನು ಓಡಿ ಬಂದನು. ಬಂದವನೇ ತನ್ನಂತಿರುವ ಇನ್ನೊಬ್ಬ ಹುಡುಗನನ್ನು ಕಂಡು—"ಅಮ್ಮಾ, ಇವನೇ ಆ ಹುಡುಗ. ಇವನೇ ನನ್ನ ತಂದೆಯು ವೀರೇಶನಲ್ಲವೆಂದವನು" — ಎಂದನು. ಇಷ್ಟರ ತನಕ ಮಾಲತಿಯ ದೃಷ್ಟಿಯು ಚೆನ್ನಾಗಿ ಶರದಿಸಿಯ ಮಗನ ಕಡೆಗೆ ಹರಿದಿರಲಿಲ್ಲ. ಈಗ ಹರಿಯಿತು. ಅವನ ಹೆಸರೂ ರಮೇಶನಂತೆ!

ತಂದೆಯ ಹೆಸರೂ ವೀರೇಶನಂತೆ! ತನ್ನ ರಮೇಶನೂ ಒಕ್ಕಣ್ಣ; ಶರದಿನಿಯ ರಮೇಶನೂ ಒಕ್ಕಣ್ಣ. ಮಾಲತಿಗೆ ಅದರ ಕಾರಣ ತಿಳಿಯಿತು. ತನ್ನ ದೆಸೆಯಿಂದ ಶರದಿನಿಯ ಮಗನು ಒಕ್ಕಣ್ಣನಾಗಿ ಹುಟ್ಟಿದನಲ್ಲಾ ಎಂದು ಅವಳು ತಪಿಸಿದಳು. ಅಷ್ಟರಲ್ಲಿ ಶರದಿನಿಯು "ಮಾಲತೀ, ಇವನು ನಿನ್ನ ಮಗನೇ—ಸರಿ. ಇಂದು ನನ್ನ ರಮೇಶನು ಶಾಲೆಯ ಸುದ್ದಿಯನ್ನೆಲ್ಲಾ ಹೇಳಿದುದರಿಂದ ಇದೇ ಸರಿಯಾದ ಸಮಯವೆಂದು ನಾನು ನಿನ್ನ ಬಳಿಗೆ ಬಂದೆ. ರಮೇಶಾ?"

"ಯಾರು?" ಎಂದು ಇಬ್ಬರೂ ರಮೇಶರು ಮಾತನಾಡಿದರು.

"ನೀನಲ್ಲ. ಮಾಲತಿಯ ರಮೇಶನನ್ನು ಕರೆದೆ."

"ನನ್ನನ್ನೆ"—(ಮಾಲತಿಯ ರಮೇಶ)

"ಅಹುದು; ನೀವಿಬ್ಬರೂ ಇನ್ನುಮುಂದೆ ಜಗಳಾಡಬಾರದು. ನೀವಿಬ್ಬರೂ ಅಣ್ಣತಮ್ಮಂದಿರು. ನಿಮ್ಮಿಬ್ಬರ ತಂದೆಯೂ ವೀರೇಶನು?"

"ಅಮ್ಮಾ, ಈ ರಮೇಶನಿಗೆ ತಂದೆಯಿರುವನೇ?"

"ಅಹುದು. ನಿನ್ನ ತಂದೆಯೇ ಅವನ ತಂದೆಯು ತಿಳಿಯಿತೇ?"

"ಹಾಗಾದರೆ, ಆವನೇಕೆ ನಮ್ಮ ಮನೆಯಲ್ಲಿರುವುದಿಲ್ಲ?"

"ಇನ್ನು ನಮ್ಮ ಮನೆಗೆ ಬರಬಹುದು."

ಮಾಲತಿಯು ಅಷ್ಟಕ್ಕೆ ಎದ್ದು ನಿಂತು—“ತಾಯಿ, ಯ ಜಮಾನರು ಬಂದರು” ಎಂದಳು.

ಆಗ ಶರದಿನ್ನಿಯು—“ಮಾಲತಿ, ನೀನು ನನ್ನ ಹುಡುಗನನ್ನು ಕರೆದುಕೊಂಡು ಒಳಕ್ಕೆ ಹೋಗು. ನಾನವರ ಸ್ವಾಗತಮಾಡುವೆನು” ಎಂದಳು. ಮಾಲ ತಿಯು ಮೌನವಾಗಿ ಹಾಗೆ ಮಾಡಿದಳು.

ವೀರೇಶನು ಬರಬರುತ್ತ—“ರಮೇಶ, ಎಲ್ಲಿರುವೆ” ಎಂದು ಕೂಗುತ್ತ ಬಂದನು.

“ಇಲ್ಲಿರುವೆನಪ್ಪಾ”—ಎಂಪನು.

ವೀರೇಶನು ನೋಡುವುದೇನನ್ನು! ಎದುರಿಗಿರುವ ವಳು ಮಾಲತಿಯಲ್ಲ; ಶರದಿನಿ. ಬಳಿಯಲ್ಲಿ ಮಾಲತಿ ಯ ರಮೇಶ. ಅವನ ನಾಲಿಗೆ ಒಳಗೆಳೆಯಿತು. ಶಿಲೆ ಯಂತೆ ನಿಂತನು.

ಶರದಿನಿಯೇ ತನ್ನ ಸ್ವಾಭಾವಿಕ ಜಾಣ್ಮೆಯಿಂದ—“ಹೂಂ, ಹೇಗೂ ನನ್ನನ್ನು ಇಷ್ಟು ದಿನದ ವರೆಗೆ ವಂಚಿ ಸಿಯಾಯಿತು. ಇನ್ನು ಮುಂದೆ ವಂಚಿಸುವ ಕಾರಣ ವಿಲ್ಲ” ಎಂದಳು. ತಾನೇ ಅವನನ್ನು ಕರೆದುತಂದು ಒಂದು ಆಸನದ ಮೇಲೆ ಕುಳ್ಳಿರಿಸಿದಳು. ತಾನೂ ಒಂದು ಪಕ್ಕದಲ್ಲಿ ಕುಳಿತುಕೊಂಡಳು. ವೀರೇಶನಿಗೆ ಸಿಟ್ಟಿನಿಂದ ಏಳುವ ಮನಸ್ಸಾಯಿತು; ಆದರೆ ಸಿಟ್ಟು ಪ್ರಕಟವಾಗಲೊಲ್ಲದು, ಕಾಲೂ ಚಲಿಸಲಾರದು. ಅವ ನಿಂದು ಯಮನ ಮುಂದೆ ನಿಂತ ಅಪರಾಧಿಯಂತೆ ಥರ ಥರಿಸುತ್ತಿರುವನು.

ಶರದಿನಿಯು ಮಾಲತಿಯನ್ನು ಕರೆದಳು. ಮಾಲತಿಯು ಅಂಜಿಕೆಯಿಂದ ಹೆಜ್ಜೆಹಾಕುತ್ತ ಅಲ್ಲಿಗೆ ಬಂದಳು. ಅವಳೊಡನೆ ಶರದಿನಿಯ ರಮೇಶನು ತನ್ನ ತಾಯಿಗಿಂತ ಅಧಿಕ ಸಲಿಗೆಯಿಂದ ಆಡುತ್ತಿರುವನು. ಎಲ್ಲವನ್ನೂ ವೀರೇಶನು ಭ್ರಮಿಷ್ಠನಂತೆ ನೋಡುತ್ತಾನೆ. ಮಾಲತಿಗೆ 'ಕುಳಿತುಕೋ' ಎನ್ನಲು ಸಹ ಬಾಯಿಬಾರದು.

ಶರದಿನಿಯೇ ಆ ಕೆಲಸವನ್ನು ಮಾಡಿದಳು. "ಮಾಲತಿ, ಬಾ ಕುಳಿತುಕೋ" ಎಂದಳು. ಮಾಲತಿಯು ಮಾತನ್ನು ಮೀರಲಾರದೆ ಕುಳಿತಳು. ಆದರೆ ಅವರ ಜತೆಯಲ್ಲಲ್ಲ; ವೀರೇಶನ ಕಾಲಬುಡದಲ್ಲಿ ನೆಲದ ಮೇಲೆ. ಶರದಿನಿಯು ಬೇಸರಗೊಂಡಳು—"ಸವತೀ, ನನಗೂ ಮೊದಲಿನ ಸ್ಥಾನವು ನಿನ್ನದು. ನೀನು ಬೇಡವೆಂದಿದ್ದರೆ ನಾನು ಇವರ ಬಳಿಯಲ್ಲಿ ಕುಳಿತುಕೊಳ್ಳುವ ಭಾಗ್ಯವು ದೊರೆಯುತ್ತಿದ್ದಿಲ್ಲ. ನೀನಿವರ ಪಕ್ಕದಲ್ಲಿ ಕುಳಿತುಕೊಳ್ಳಲೇಬೇಕು. ನೀನು ನನ್ನಕ್ಕನೆಂದು ತಿಳಿಯುವೆ."

ಆದರೂ ಮಾಲತಿಯು ಚಲಿಸಳು.

ಶರದಿನಿಯು ಕುಳಿತುಕೊಳ್ಳುವಂತೆ ಹೇಳಲು ಗಂಡನಿಗೆ ಹೇಳಿದಳು. ಆಳಿನಷ್ಟು ವಿಧೇಯತೆಯಿಂದ ಮಾಲತಿಗೆ ವೀರೇಶನು 'ಕುಳಿತುಕೋ' ಎಂದನು. ಆದರೆ ಮಾಲತಿಯು ನಿಂತವಳು ಕುಳಿತುಕೊಳ್ಳುವುದರ ಬದಲು—"ನೀವೀಗ ನನಗೊಂದು ಉತ್ತರವನ್ನು ಕೊಡಬೇಕು" — ಎಂದಳು.

ವೀರೇಶನು ಸುಮ್ಮನಿದ್ದುದನ್ನು ಕಂಡು ಶರದಿನಿಯು—“ಕೇಳು ಮಾಲತಿ, ನಾನು ಅವರಿಂದ ಕೊಡಿಸುವೆ”— ಎಂದಳು.

ಮಾಲತಿಯು ಕೇಳಿದಳು. “ನನ್ನೀ ರಮೇಶನು ನಿಮ್ಮ ಮಗನೆಂದು ನೀವು ಲೋಕದ ಎದುರಿಗೆ ಒಪ್ಪಲು ಸಿದ್ಧರಿರುವಿರಾ? ಲೋಕದ ಎದುರಿಗೆ—”

ವೀರೇಶನೇನೆನ್ನುವನಂತೆ?

ಶರದಿನಿಯು ಅವನ ಬಾಯಿಯಿಂದ “ಅಹುದೆನ್ನಿಸಲು” ಯತ್ನಿಸಿದಳು. ಆದರೆ ಆ ಧೈರ್ಯವು ಹೇಗೆ ಅವನಲ್ಲಿ ಬರಬೇಕು. ಸೂಳೆಯ ಮಗನನ್ನು ಅವನು ತನ್ನ ಮಗನೆಂದು ಜಗದೆದುರಿಗೆ ಸಾರಬಲ್ಲನೇ? ಇಲ್ಲ—ಎಂದೂ ಇಲ್ಲ. ಮಾಲತಿಯ ಬಾಯಿಯಿಂದಾಗ—“ಇಂದಿಗೆ ಮುಗಿಯಿತು; ನಮ್ಮ ಗೆಳೆತನ”ವೆಂಬ ತೀರ್ಮಾನವು ಹೊರಟಿತು.

## ೧೫. ವಿಜಯ!

ಮಾಲತಿಯೀಗ ‘ಹವಾಮಹಲಿ’ನ ರಾಣಿಯಲ್ಲ ತಿರುಗಿ ಲಜ್ಜಾವಿಕ್ರಯದ ಬೀದಿಯಲ್ಲಿ ಬಡ ವ್ಯಾಪಾರಿ. ಅವಳಿಂದು ಮಲ್ಲೇಶ್ವರದ ಹವಾಮಹಲಿನ ಸುಖಗಳನ್ನು ಅನುಭವಿಸುತ್ತಲಿಲ್ಲ. ತನ್ನಿಂದ ಹುಟ್ಟಿದ ಮಗನನ್ನು ತನ್ನ ಮಗನೆಂದು ಲೋಕದ ಮುಂದೆ ಸಾರಲು ಅಂಜಿದ ಅವನೊಡನೆ ಮಾಲತಿಗೇನು ಕೆಲಸ? ಪ್ರಫುಲ್ಲನನ್ನು ತೊರೆದುಬಂದ ಅವಳೀಗ ವೀರೇಶನನ್ನೂ ಅಗಲಿ

ಬಂದಿರುವಳು. ವೀರೇಶನು ಹೊರಿಸಿದ ಒಂದೇ ಒಂದು ಚಿನ್ನಾಭರಣವನ್ನೂ ಒಯ್ಯಲಿಲ್ಲ. ಅವನವಳಿಗಿತ್ತ ಒಂದೇ ಐಶ್ವರ್ಯವು—ಆರು ವರುಷದ ರಮೇಶನು. ಅದನ್ನೂ ಕೊಟ್ಟುಬರುತ್ತಿದ್ದಳು; ಆದರೆ ಅವನೇ ಅದನ್ನು ತನ್ನದಲ್ಲವೆನ್ನುವನಲ್ಲಾ.

ಇನ್ನಾದರೂ ಮಾಲತಿಯ ಪಾಪವು ತೊಳೆಯಿತೋ ಎಂದು ಜನರು ಕೇಳಬಹುದು. ಅವಳ ಕೊನೆಯ ವ್ಯಾಪಾರಿಬಂಧನವು ಕಡಿದಾದ ಬಳಿಕ ಅವಳಿನ್ನು ಮುಂದೇನು ಮಾಡುವಳು ಎಂದು ತಿಳಿಯಲು ಲೋಕಕ್ಕೆ ಆತುರವಾಗಬಹುದು. ಮಹೇಶನಿಗೆ ಈ ವಿಚಾರವು ತಿಳಿದಿದ್ದರೆ ಅವನು ಇನ್ನೊಮ್ಮೆ ಬಂದು ಕೇಳುತ್ತಲಿದ್ದನು: "ಮಾಲತಿ, ಪಾಪ ತೊಳೆದೊಡನೆ ಬರುವೆಯೆಂದೆಯಲ್ಲ. ಈಗ ಬಾ" ಎಂದು. ನಿಜ. ಆದರೆ ಪಾಪದ ಸಂತಾನದ ಕಡೆಗೆ ಅವಳ ಹೊಣೆಯಿದೆ. ಆರು ವರುಷದ ತಂದೆಯಿಲ್ಲದ ಮಗುವನ್ನು ಅವಳೇನು ಮಾಡಬೇಕು? ಅವನ ಜೀವನಕ್ಕಾಗಿ ಅವಳು ಇನ್ನೂ ಸೂಳೆಯೇ ಆಗಿರಬೇಕು. ಅದಕ್ಕಾಗಿ ಅವಳು ಈಗ ಬಳೆಪೇಟೆಯ ಗಲ್ಲಿಯೊಂದರಲ್ಲಿ ತನ್ನ ಲಜ್ಜೆ ವಿಕ್ರಯದ ನಿರ್ಧಾರದಿಂದ ಮನೆಹಿಡಿದು ಕುಳಿತಿರುವಳು. ತಿರುಗಿ ಅವಳ ಮೇಲೆ ಭೀಷಣ ದಾರಿದ್ರ್ಯವು ಕವಿದಿದೆ.

ಶರದಿನಿಗೆ ತನ್ನಿಂದ ಇಂಥ ಪ್ರಮಾದವಾಯಿತೆಂದು ಭಯಂಕರ ವ್ಯಥೆಯಾಯಿತು. ಅವಳು ಎಣಿಸಿದ್ದೊಂದು, ಆದುದೊಂದು. ಏನು ಮಾಡಲಿ? ಅವಳು ಪತಿಯೊ

ಡನೆ, ಹಲವು ಬಾರಿ ಮಾಲತಿಯ ನವೀನ ಕುಟೀರ ವನ್ನು ಹುಡುಕಿ ಬಿನ್ನವಿಸಿ ನೋಡಿದಳು. ಆದರೆ ಮಾಲತಿಯೂ ಅಪೂರ್ವ ಹಟಮಾರಿ. ಶರದಿನಿಯು ಹತಾಶಳಾಗಿ ಮರಳಿದಳು. ವೀರೇಶನು ತನ್ನ ಮೂ ರ್ಖತೆಗಾಗಿ ಆಮರಣಪರಿಯಂತ ನಾಚುಗೆಯಿಂದ ತಲೆವಾಗುವಂತಾಯಿತು. ಮಾಲತಿಯು ಈ ಬಾರಿ ಯೂ, ಇನ್ನೊಂದು ಯಾತ್ರೆಮಾಡುತ್ತಿದ್ದಳು. ಆದರೆ ಕೈಯಲ್ಲಿ ಮಗುವನ್ನು ಹಿಡಿದುಕೊಂಡು ಮೊದಲಿನಂತೆ ಯಾತ್ರೆಯನ್ನು ನಡೆಯಿಸುವ ಸಾಮರ್ಥ್ಯವು ಉಂಟಾ ಗಲಿಲ್ಲ. ಅದಕ್ಕಾಗಿ ಅವಳು ಅಲ್ಲೇ ನೆಲೆಸುವ ನಿರ್ಧಾ ರಮಾಡಿದುದು. ಮಾಲತಿಗೆ ತಿರುಗಿ ದಾರಿದ್ರ್ಯದ ಪಟ್ಟವು ಚಿರವಾಗಿ ದೊರೆಯುವಂತಿದೆ. ಸುಖವ ನ್ನುಂಡು ತಿರುಗಿ ದುಃಖದ ಅಣಕಿಸುವಿಕೆಯನ್ನು ಕಾ ಣಲು ಅವಳಿಗೆ ಎಂಥ ವ್ಯಥೆಯಾಗಲಿಕ್ಕಿಲ್ಲ. ಅವಳಾದರೂ ಹೇಗೆ ಅದನ್ನು ಸಹಿಸಬಲ್ಲಳು? ರಮೇಶನು? ಆ ಹಸು ಗೂಸು ಹಸಿವೆಯನ್ನು ಸಹಿಸಬಲ್ಲುದೇ! ಅವನು ಹಸಿ ವೆಯ ಕೂಗು ಒತ್ತಟ್ಟು; ವಿಚಿತ್ರತರಪ್ರಶ್ನೆಗಳು ಒತ್ತಟ್ಟು? ಒಮ್ಮೊಮ್ಮೆ—“ಅಪ್ಪನೆಲ್ಲಿ”? ಎಂದಳುವನು. ಒಮ್ಮೊಮ್ಮೆ ಮನೆಗೆ ಬಂದು ಹೋಗುತ್ತಿರುವ ವ್ಯಕ್ತಿಗಳನ್ನು ಕಂಡು— ‘ಅಮ್ಮಾ, ಇವರಾರು’? ಎನ್ನುವನು. ಬಂದವರು ಇವನ ಗಲ್ಲವನ್ನು ಹಿಡಿದು ‘ಮಗು’—ಎಂದರೆ ‘ನಾನು ನಿನ್ನ ಮಗನಲ್ಲ. ನನ್ನ ತಂದೆಯು “ವೀರೇಶ”ನು’ ಎನ್ನುವನು. ಇದವಳ ಪಾಲಿಗೆ ಶ್ರವಣರೂಪದ ನರಕವಾಗಿ ಅನಿಸಿತ್ತು.

ಇಂದು ಅವಳ ಸಂಕಟವು ವರಿಷ್ಠಗುರಿಯನ್ನೇರಲು ಹವಣಿಸುತ್ತಿದೆ. ಬಡತನದ ಜತೆಯಲ್ಲಿ ಸಾಗುವ ಕಶ್ಮಲ, ಉಪವಾಸಗಳ ದೆಸೆಯಿಂದ ಮಾಲತಿಯ ಆರೋಗ್ಯವು ಕೆಟ್ಟದೆ. ಸಾಲದುದಕ್ಕೆ ಮಗುವು ಬೇನೆಯಿಂದ ಹಾಸಿಗೆ ಹಿಡಿದಿರುವುದು. ಅದರ ಚಿಕಿತ್ಸೆ ಮಾಡಲು ಕಾಸಿಲ್ಲ; ಹಾಲನ್ನೊದಗಿಸಿಕೊಡಲು ಒಂದು ದಮ್ಮಡಿಯಿಲ್ಲ. ತೀರ ಹತಾಶಳಾಗಿ ಮಗುವಿನ ಸಲುವಾಗಿ ವೀರೇಶನಲ್ಲಿ ಭಿಕ್ಷೆಬೇಡಿಬರುವೆನೆಂದು ಎಣಿಸುವಳು. 'ಛೀ, ಆವನಿಂದ ತಂದ ಅನ್ಯಾಯದ ಹಣದಿಂದ ಮಗುವು ಬದುಕಿದರೇನು ಸತ್ತರೇನು'? ಎಂದಂದುಕೊಳ್ಳುವಳು. ಎಂಥ ವೇದಾಂತ! ಹೀಗೆಯೇ ನಾಲ್ಕು ದಿನಗಳು ಸಂದುವು. ಒಂದು ದಿನ ಸಂಜೆ ಮಗುವು ತೀರ ವಿಷಮಾವಸ್ಥೆಯಲ್ಲಿತ್ತು. "ಅಮ್ಮಾ, ಹಾಲು ಹಾಲು" ಎಂದು ಕೂಗುತ್ತಿತ್ತು. ಮಾಲತಿಯು ತನ್ನ ಸ್ಥನವನ್ನು ನೀಡಿಬಳು. ಹುಡುಗನಾಗ ಸಿಟ್ಟಿನಿಂದ ಕಚ್ಚಿಬಿಟ್ಟನು. ಹಾಲಿನ ಬದಲು ಒಂದು ತೊಟ್ಟು ರಕ್ತವು ಮಗುವಿನ ಬಾಯಿಗೆ ಬಂದಿತು. ಮಾಲತಿಯು ಹಣೆ ಹಣೆ ಬಡಿದುಕೊಂಡಳು. ಅವಳಲ್ಲಿ ಕಾಸೊಂದೂ ಇರುವುದಿಲ್ಲ; ಇತ್ತ ವ್ಯವಸಾಯದಿಂದ ಗಳಿಸೋಣವೆಂದರೆ ಯಾರೂ ತನ್ನ ಮನೆಯ ಹಾದಿಯಾಗಿ ಚರಿಸುವವರಿಲ್ಲ. ಇದು ತನ್ನ ದುರ್ದೈವವೆಂದು ಆವಳಿಗೆ ತಿಳಿಯಿತು. ಉಪಾಯವಿಲ್ಲ, ಸುಮ್ಮನಿದ್ದಳು. ಯಾರಾದರೂ ಬರುವರೇ ಎಂಬ ಆತುರದಿಂದ ಕೂಗುವ

ಮಗುವನ್ನು ಬಿಟ್ಟು ಹೊರ ಬಾಗಿಲಿಗೆ ಬಂದು ನಿಂತಳು. ಹಾದಿಯ ಮೇಲೆ ಸರಿಯುವವರನ್ನೆಲ್ಲಾ ದುಃಖಾರ್ದ್ರ ನಯನಗಳಿಂದ ಕಂಡಳು. ಒಬ್ಬಿಬ್ಬರು ಹದಿನಾಲ್ಕು ವರುಷದ ಹುಡುಗರು ಹಾದುಹೋಗುತ್ತಿದ್ದರು. ಹುಚ್ಚಿ ಯಂತೆ ಅವರ ಕಡೆಗೂ ತನ್ನ ದೃಷ್ಟಿಯನ್ನು ಬೀರಿದಳು. ಆ ಮಕ್ಕಳು ಇದನ್ನು ಕಂಡು—“ನೋಡೋ, ಆ ರಾಕ್ಷಸಿ ಯ ಕಣ್ಣು ನೋಡೋ” ಎಂದು ನಕ್ಕು ಓಡಿಬಿಟ್ಟವು. “ನಿಜ, ತಾನು ರಾಕ್ಷಸಿ”ಯೆಂದು ಅವಳು ತಿಳಿದಳು. ತನ್ನ ಕೃತ್ಯಕ್ಕಾಗಿ ನಾಚುಗೆಯಾಯಿತು. ಆದರೆ ಅಂಥ ನಾಚುಗೆಯಿಂದ ವೇಶ್ಯೆಗೆ ಜೀವನ ಸಾಗದು. ಅದೂ ಇಂಥ ಗಳಿಗೆಯಲ್ಲಿ! ಗಿರಾಕಿಯೊಬ್ಬನನ್ನು ಹುಡುಕುವ ತನಕ ತಾನು ಒಳಗೆ ಹೋಗೆನೆಂದು ನಿರ್ಧರಿಸಿದಳು. ಒಳಗೆ ಮಗುವಿನ ಅಳುವು ಶಾಂತವಾಯಿತು. ಪ್ರಾಯ ಶಃ ಅವನಿಗೆ ನಿದ್ರೆ ಬಂದಿರಬೇಕು. ಅದರಿಂದ ಮಾಲ ತಿಗೆ ಸ್ವಲ್ಪ ಸಮಾಧಾನವಾಯಿತು.

ಸಂಜೆ ಒಂಭತ್ತು ತಾಸಿಗೆ ಸರಿಯಾಗಿ ಅತ್ತಿತ್ತ ಇಣಕುತ್ತ ಓರ್ವ ವೃಧ್ಧನ ಸವಾರಿಯು ಆ ಹಾದಿ ಯಾಗಿ ಬಂದಿತು. ಅವನ ದೃಷ್ಟಿಗೆ ಇವಳು ಬಿದ್ದಳು. ಏನೂ ಭಯಭೀತಿಯಿಲ್ಲದೆ ತೀರ ಪರಿಚಿತರಷ್ಟು ಧೈ ರ್ಯದಿಂದ ಆವನು ಇವಳ ಮುಂದೆ ಬಂದನು. ಇವ ಳು, ತಾನಾಗಿ ಬಂದ ಈ ಅತಿಥಿಯನ್ನು ಒಳಕ್ಕೆ ಕರೆ ದೊಯ್ದಳು. ಅವನ ವಯಸ್ಸು ಅರವತ್ತಕ್ಕೆ ಸಮೀಪ ವಾಗಿರಬಹುದು. ಆದರೂ ಅವನು ಶೋಕಿಲಾಲ

ನಾಗಿ ಕಾಣಿಸಿದನು. ಮಾಲತಿಯು ಹೆಗಲ ಮೇಲೆ ಕೈಯ್ಯನ್ನಿರಿಸಿದನು. ಮಾಲತಿಯು ಅವನನ್ನೇ ಇಣಿಕಿ ನೋಡಿದಳು. ಅವಳೊಂದು ಕೈಯ್ಯು ಅವನ ಕಿಸೆಯನ್ನು ಮುಟ್ಟಿ ನೋಡಿತು. ರೂಪಾಯಿಗಳ ರಾಶಿಯೇ ಅದರಲ್ಲಿತ್ತು. ತನ್ನ ಭಾಗ್ಯವೆಂದು ತಿಳಿದಳು. ಮುದುಕನು ಕಾಮಮತ್ತನಾಗಿ ಅವಳ ಕಪೋಲವನ್ನು ಚುಂಬಿಸಿದನು. ಮಾಲತಿಯು ಅವನ ಸಂಭಾವನೆಗೆ ಮರುಸಂಭಾವನೆಯನ್ನು ಕೊಡುವುದರಲ್ಲಿದ್ದಳು. ಅಷ್ಟರಲ್ಲಿಯೇ ಮುದುಕನು ಅವಳ ಕೈ ಮೇಲೆ ೧೦ ರೂಪಾಯಿಗಳನ್ನಿರಿಸಿದನು. ಹತ್ತು ರೂಪಾಯಿಗಳು! ಮಗುವಿಗೆ ಎರಡು ತಿಂಗಳಿಗೆ ಸಾಕು!

ರೂಪಾಯಿಗಳನ್ನು ಎಣಿಕೆಹಾಕುತ್ತ ಕುಳಿತಳು. ಆ ಆತುರದಲ್ಲಿ ಅವನನ್ನು ಉಪಚರಿಸುವ ನೆನಪಾಗಲಿಲ್ಲ. ಎಣಿಕೆಹಾಕಿದ ಬಳಿಕ ಕೃತಜ್ಞತೆಯಿಂದ ಅವನ ಮುಖವನ್ನು ನೋಡತೊಡಗಿದಳು. ನೋಡುತ್ತ ಹೋದಂತೆ ಅವಳ ಮನಸ್ಸು ಅಸ್ಥಿರವಾಯಿತು. ಯಾವ ಭಾವರಸಗಳು ಅವಳ ಮುಖದಲ್ಲಿ ಮೂಡುತ್ತಿವೆಯೆಂದು ಅವಳಿಗೇ ತಿಳಿಯದಾಯಿತು. ಅವಳು ಅಂಜಿಕೆಯಿಂದ ಒಂದೊಂದೇ ಹೆಜ್ಜೆ ಹಿಂದೆ ಸರಿದಳು. ಅವಳ ಈ ವರ್ತನೆಯನ್ನು ಕಂಡು ಮುದುಕನಿಗೆ ಆಶ್ಚರ್ಯವಾಯಿತು. ಅವಳ ಸರಿಯುವಿಕೆಯನ್ನು ಕಂಡು ತನಗೂ ಬರಲು ಹೇಳುತ್ತಿರುವಳೆಂದು ತಿಳಿದನು. ಅದಕ್ಕಾಗಿ ಅವಳ ಕಡೆಗೆ ಸಾಗಿದನು. ಆದರೆ ಮಾಲತಿಯು—

"ತಡಿಯಿರಿ, ಸ್ವಲ್ಪ ತಡಿಯಿರಿ. ಒಳಗೆ ನನ್ನ ಕಾಹಿಲೆಯ ಹುಡುಗನು ಮಲಗಿರುವನು. ಅವನಿಗೆ ಸ್ವಲ್ಪ ಹಾಲನ್ನು ಕೊಂಡುಕೊಟ್ಟು ನಿಮ್ಮ ಋಣವನ್ನು ಸಲ್ಲಿಸುವೆ" ಎಂದಳು. ಮುದುಕನಿಗೆ ಅಪಾರ ಆನಂದವಾಯಿತು.

ಮಾಲತಿಯು ಒಳಗೆಹೋದಳು. ಅವಳೆಷ್ಟು ಹೊತ್ತಿಗೆ ಮರಳುವಳೆಂದು ಮುದುಕನು ಇದಿರು ಕಾಯುತ್ತ ಕುಳಿತನು. ಕಾಲು ತಾಸಾಯಿತು, ಅರ್ಧ ತಾಸಾಯಿತು, ಒಂದು ತಾಸಾಯಿತು. ಆದರೂ ಗಣಿಕೆಯಿಲ್ಲ. ಕೂಗಿದನು ಮರುತ್ತರವಿಲ್ಲ! ಅವನಿಗೆ ಅವಳು ವಂಚಿಸಿ ಓಡಿದಳೆಂಬ ಸಂಶಯವಾಯಿತು. ಹೊರಗಿನ ಅಗಳಿಯನ್ನು ಹಾಕಿ ಮಾಲತಿಯು ಪ್ರವೇಶ ಮಾಡಿದ ಕೋಣೆಯನ್ನು ಸೇರಿದನು. ನೆಲದ ಮೇಲೆ ಒಂದು ದೀಪವು ಸಣ್ಣಗೆ ಉರಿಯುತ್ತಿತ್ತು. ಅದೇ ಕೊಟಡಿಯ ಒಂದು ಮೂಲೆಯಲ್ಲಿ ಹರಕು ಛಿಂದಿಗಳ ಮೇಲೆ ಒಂದು ಸ್ತ್ರೀರೂಪು ಮಲಗಿತ್ತು. ಅದನ್ನು ಕಂಡು ಉನ್ಮತ್ತ ವೃದ್ಧನು ಅಲ್ಲಿಗೆ ಹೋದನು. ಆ ಗಣಿಕೆಯು ಹಾಗೇಕೆ ಮೌನೆಯಾಗಿರುವಳೆಂದು ಅವನಿಗೆ ತಿಳಿಯದಾಯಿತು. ವಂಚಿಸಿ ಓಡಿಪೋಗಲೂ ಇಲ್ಲ, ತನ್ನ ಮಾತಿಗೆ ಮರುತ್ತರವನ್ನು ಕೊಡಲೂ ಇಲ್ಲ. ಇತ್ತ ಅವಳ ಬಳಿಯಲ್ಲೇ ಅವಳ ಮಗುವೂ ಮಲಗಿತ್ತು. ಮಗುವಿಗೆ ಹಾಲನ್ನು ತರಲು ಹೋದಂತೆಯೂ ಇಲ್ಲ. ಇದನ್ನೆಲ್ಲಾ ಕಂಡು, ಅವಳು ಚೇಷ್ಟೆಮಾಡುತ್ತಿರುವಳೆಂದು ತಿಳಿದನು. ಅವನಾದರೂ ಅದೇ ಭಾವದಿಂದ ಮಲ

ಗಿದ್ದ ಅವಳ ಬಳಿಗೆ ಹೋಗಿ ಪ್ರಣಯಿಯ ವಿಲಾಸ ದೊಂದಿಗೆ ಕುಳಿತುಕೊಂಡನು. ಅವಳಿವನ ಮುಂದೆ ನಿದ್ರೆಯನ್ನು ನಟಿಸುತ್ತಿರುವಳೆಂದು ಊಹಿಸಿ ಶೃಂಗಾರ ರತ್ನಾಕರನಂತೆ "ಪ್ರಿಯೇ—"ಎಂದನು. ಆದರೂ ನಟಿಯ ನಿದ್ರೆಯು ಮುಗಿದಂತೆ ಕಾಣಲಿಲ್ಲ. ಅವಳನ್ನೆಚ್ಚರಿಸಲು ಹೊಸ ಬಗೆಯನ್ನು ಕಾಣುವೆನೆಂದು ಮೆಲ್ಲನೆ ಬಗ್ಗಿ ಅವಳ ಕಪೋಲವನ್ನು ಚುಂಬಿಸಿದನು. ಸ್ಪರ್ಶದಿಂದ ಚಕಿತನಾದನು. ಅವನ ಜೀವನದಲ್ಲಿ ಅಂಥ ಪ್ರಣಯಚುಂಬನವನ್ನವನು ಕಂಡವನಲ್ಲ. ಅದು ಹಿಮ ಗಡ್ಡೆಯಷ್ಟು ಅಸಹಿಷ್ಣುವಾಗಿತ್ತು. ಏನೆಂದೇ ತಿಳಿಯದಾಯಿತು. ಬಿರಬಿರನೆ ಅದೇ ಮೋರೆಯನ್ನು ನೋಡಿದನು; ಶರೀರವನ್ನಲುಗಾಡಿಸಿದನು; ತೀರ ಗಾಢನಿದ್ರೆಯೆಂದು ತೋರಿತು. ಬಳಿಯಲ್ಲಿದ್ದ ಶಿಶುವನ್ನು ಕಂಡನು. ಅದೂ ತಾಯಿಯಂತೆಯೇ ನಿದ್ರಿಸುತ್ತಿತ್ತು. ಅವನ ದೃಷ್ಟಿಯು ಗಣಿಕೆಯ ಕಂಠದ ಕಡೆಗೆ ಹರಿಯಿತು. ಅಲ್ಲೊಂದು ಕರಿಮಣಿಯ ಸರವು ತೂಗುತ್ತಿತ್ತು. ಅದನ್ನು ಎಲ್ಲೋ ಕಂಡ ನೆನಪು ಅವನಿಗುಂಟಾಯಿತು. ಎಲ್ಲಿ, ಎಲ್ಲಿ, ಎಂದು ವಿಚಾರಮಾಡತೊಡಗಿದನು. ಅದನ್ನವನು ತನ್ನ ಪುತ್ರಿಯ ಕೊರಳಲ್ಲಿ ಹಿಂದೆ ಹಲವು ಬಾರಿ ಕಂಡದ್ದಿರಬೇಕೆಂದು ತೋರಿತು. ಅದರ ಮೇಲಿಂದ ಮುಖದ ಗುರುತೂ ಹೊಳೆಯಿತು. ಸಿಡಿಲು ಬಡಿದಂತೆ ಬೆದರಿ "ಮಗಳೇ, ಮಾಲತಿ!" ಎಂದು ಚೀರಿ ಮೂರ್ಛಿತನಾದನು.